ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 29 ಗುರುವಾರ 2023

ಸಂಪುಟ: 44 | ಸಂಚಿಕೆ: 74 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4

ಕಾಂಗ್ರೆಸ್ ಸರ್ಕಾರದಲ್ಲೂ ಕಾಸಿಗಾಗಿ ಪೋಸ್ಟಿಂಗ್ ದಂಧೆ

● ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ವಾಗ್ದಾಳಿ
● ಒಂದೇ ಹುದ್ದೆಗೆ ನಾಲ್ವರಿಗೆ ಶಿಫಾರಸು ಪತ್ರ ನೀಡಿದ ಪ್ರಕರಣ ಸಂಬಂಧ ಸರಣಿ ಟ್ವೀಟ್ ಮೂಲಕ ಸರ್ಕಾರಕ್ಕೆ ಚಾಟಿ



ಬೆಂಗಳೂರು, ಜೂ. 28 (ಕೆಎಂಶಿ)– ಕಾಂಗ್ರೆಸ್ ಸರಕಾರವು ಕಾಸಿಗಾಗಿ ಪೋಸ್ಟಿಂಗ್ ದಂಧೆಯಲ್ಲಿ ತೊಡಗಿದೆ ಎಂದು ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಂದೇ ಹುದ್ದೆಗೆ ನಾಲ್ವರಿಗೆ ಶಿಫಾರಸು ಪತ್ರಗಳನ್ನು ನೀಡಿರುವ ಬಗ್ಗೆ ಮಾಧ್ಯಮಗಳಲ್ಲಿ ಬಂದ ವರದಿ ಉಲ್ಲೇಖಿಸಿ ಸರಣಿ ಟ್ವೀಟ್ ಮಾಡಿ, ಸರ್ಕಾರಕ್ಕೆ ಚಾಟಿ ಬೀಸಿದ್ದಾರೆ.

ಪಂಚ ಗ್ಯಾರಂಟಿಗಳ ರಾಜ್ಯ ಕಾಂಗ್ರೆಸ್ ಸರಕಾರ, ಈಗ 6ನೇ ಗ್ಯಾರಂಟಿಯನ್ನೂ ಖಾತ್ರಿಗೊಳಿಸಿದೆ. ಅದು; ಕಾಸಿಗಾಗಿ ಪೋಸ್ಟಿಂಗ್. ಅಧಿಕಾರಕ್ಕೆ ಬಂದು 1 ತಿಂಗಳು ಮುಗಿಯುತ್ತಿದ್ದಂತೆಯೇ ವರ್ಗಾವಣೆ ದಂಧೆಯ ಕೊಚ್ಚೆಯಲ್ಲಿ ಈ ಸರಕಾರ ಎಗ್ಗಿಲ್ಲದೆ ಉರುಳಾಡುತ್ತಿದೆ ಎನ್ನುವುದಕ್ಕೆ ಈ ವರದಿಯೇ ಸಾಕ್ಷಿ ಎಂದಿರುವ ಅವರು ಕಾಸಿಗಾಗಿ ಪೋಸ್ಟಿಂಗ್ ▶ 8ನೇ ಪುಟಕ್ಕೆ

ರಾಜ್ಯಸಭೆಯ 10 ಸ್ಥಾನಗಳಿಗೆ ಜು.24 ರಂದು ಚುನಾವಣೆ

ನವದೆಹಲಿ, ಜೂ.28– ವಿದೇಶಾಂಗ ವ್ಯವಹಾರಗಳ ಸಚಿವ ಎಸ್ ಜೈಶಂಕರ್ ಮತ್ತು ತೃಣಮೂಲ ಕಾಂಗ್ರೆಸ್ ನಾಯಕ ಡೆರೆಕ್ ಒ'ಬ್ರೇನ್ ಅವರು ಸೇರಿದಂತೆ ರಾಜ್ಯಸಭೆಯ 10 ಸದಸ್ಯರು ಜುಲೈ, ಆಗಸ್ಟ್‌ನಲ್ಲಿ ನಿವೃತ್ತಿಯಾಗುತ್ತಿದ್ದು, ಆ ಸ್ಥಾನಗಳಿಗೆ ಜುಲೈ 24 ರಂದು ಚುನಾವಣೆ ನಡೆಯಲಿದೆ ಎಂದು ಕೇಂದ್ರ ಚುನಾವಣಾ ಆಯೋಗ(ಇಸಿ) ಘೋಷಿಸಿದೆ.

ಸಂಸತ್ತಿನ ಮೇಲ್ಮನೆಯ 10 ಸ್ಥಾನಗಳು ಜುಲೈ ಮತ್ತು ಆಗಸ್ಟ್‌ನಲ್ಲಿ ತೆರವಾಗುತ್ತಿದ್ದು, ಈ ಸ್ಥಾನಗಳಿಗೆ ಜುಲೈ 24 ರಂದು ಸಂಜೆ 5 ಗಂಟೆಗೆ ಮತದಾನ ನಡೆಯಲಿದ್ದು, ಅಂದೇ ಫಲಿತಾಂಶ ಸಹ ಪ್ರಕಟವಾಗಲಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ. ಮೇಲ್ಮನೆಯ 10 ಸದಸ್ಯರು ಆರು ವರ್ಷಗಳ ತಮ್ಮ ಅವಧಿಯನ್ನು ಪೂರ್ಣಗೊಳಿಸಿದ್ದು, ಜುಲೈ 28 ರಿಂದ ಆಗಸ್ಟ್ 18 ರ ನಡುವೆ ನಿವೃತ್ತರಾಗುತ್ತಿದ್ದಾರೆ ಎಂದು ಚುನಾವಣಾ ಆಯೋಗ ಪ್ರಕಟಣೆಯಲ್ಲಿ ತಿಳಿಸಿದೆ. ಗೋವಾದಿಂದ ಒಬ್ಬರು, ಗುಜರಾತ್‌ನಿಂದ ಮೂವರು, ಪಶ್ಚಿಮ ಬಂಗಾಳದಿಂದ ಆರು ಸದಸ್ಯರ ಆಯ್ಕೆಗೆ ಜುಲೈ 24 ರಂದು ಚುನಾವಣೆ ನಡೆಯಲಿದೆ.

ಅನ್ನಭಾಗ್ಯ ಯೋಜನೆಯಡಿ ಪ್ರತಿ ಯುನಿಟ್‌ಗೆ

ಐದು ಕೆಜಿ ಅಕ್ಕಿ ಜೊತೆಗೆ ಮತ್ತೈದು ಕೆಜಿಗೆ ದುಡ್ಡು

ಸಮರ್ಪಕ ಅಕ್ಕಿ ಲಭ್ಯವಾಗದ ಹಿನ್ನೆಲೆಯಲ್ಲಿ ಸಂಪುಟ ಸಭೆಯಲ್ಲಿ ಅಂತಿಮವಾಗಿ ತೀರ್ಮಾನ



ಜು.1ರಿಂದಲೇ 5 ಕೆಜಿ ಅಕ್ಕಿ ಬದಲು ಕೆಜಿಗೆ 34 ರೂ.ನಂತೆ ಹಣ ಸಂದಾಯ

ಕೇಂದ್ರ ಆಹಾರ ನಿಗಮ ನಿಗದಿಪಡಿಸಿರುವಂತೆ ಪ್ರತಿ ಕೆಜಿಗೆ 34 ರೂ. ದರದಲ್ಲಿ ಐದು ಕೆಜಿಗೆ ಮಾಸಿಕ 170 ರೂ.ಗಳನ್ನು ನೀಡಲಾಗುವುದು. ಒಂದು ಕುಟುಂಬದಲ್ಲಿ ಐದು ಮಂದಿ ಇದ್ದರೆ, 850 ರೂ. ಆ ಕುಟುಂಬದ ಮುಖ್ಯಸ್ಥರ ಖಾತೆಗೆ ಹಣ ಪಾವತಿಯಾಗಲಿದೆ.



ಬೆಂಗಳೂರು, ಜೂ. 28 (ಕೆಎಂಶಿ)– ಬಡತನರೇಖೆಗಿಂತ ಕೆಳಗಿನ ಕುಟುಂಬಗಳಿಗೆ ಅನ್ನಭಾಗ್ಯ ಯೋಜನೆಯಡಿ ನೀಡಲಾಗುವ ಪ್ರತಿ ಯುನಿಟ್‌ಗೆ ಐದು ಕೆಜಿ ಅಕ್ಕಿ ಬದಲು ಹಣ ನೀಡಲು ರಾಜ್ಯ ಸಚಿವ ಸಂಪುಟ ಮಹತ್ವದ ತೀರ್ಮಾನ ಕೈಗೊಂಡಿದೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ, ಬಡವರಿಗೆ ಅಕ್ಕಿ ನೀಡಲು ಕೇಂದ್ರ ಸರ್ಕಾರ ನಿರಾಕರಿಸಿರುವ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಜುಲೈ 1 ರಿಂದಲೇ ಅಕ್ಕಿ ಬದಲು ಪ್ರತಿ ಕೆಜಿಗೆ 34 ರೂ.ಗಳನ್ನು ನೀಡುವ ತೀರ್ಮಾನ ಕೈಗೊಂಡಿದ್ದೇವೆ.

ಈ ನಿರ್ಧಾರದಿಂದ ಬೊಕ್ಕಸಕ್ಕೆ ಮಾಸಿಕ 750 ರಿಂದ 800 ಕೋಟಿ ರೂ. ಹೊರೆ ಬೀಳುತ್ತದೆ. ಬಿಪಿಎಲ್ ಪಡಿತರ ಚೀಟಿ ಹೊಂದಿರುವ ವಾರಸುದಾರರ ಖಾತೆಗೆ ಹಣ ಸಂದಾಯವಾಗುತ್ತದೆ. ಕೇಂದ್ರ ಆಹಾರ ನಿಗಮ ನಿಗದಿಪಡಿಸಿರುವಂತೆ ಪ್ರತಿ ಕೆಜಿಗೆ 34 ರೂ. ದರದಲ್ಲಿ ಐದು ಕೆಜಿಗೆ ಮಾಸಿಕ 170 ರೂ.ಗಳನ್ನು ನೀಡಲಾಗುವುದು. ಒಂದು ಕುಟುಂಬದಲ್ಲಿ ಐದು ಮಂದಿ ಇದ್ದರೆ, 850 ರೂ. ಆ ಕುಟುಂಬದ ಮುಖ್ಯಸ್ಥರ ಖಾತೆಗೆ ಹಣ ಪಾವತಿಯಾಗಲಿದೆ.

ಒಂದು ವೇಳೆ ಐದಕ್ಕಿಂತ ಹೆಚ್ಚು ಮಂದಿ ಇದ್ದರೂ, ಲೆಕ್ಕ ಹಾಕಿ ಹಣವನ್ನು ಅವರ ಖಾತೆಗಳಿಗೆ ಪಾವತಿ ಮಾಡಲಾಗುವುದು. ಗ್ಯಾರಂಟಿ ಯೋಜನೆಯಡಿ ಅನ್ನಭಾಗ್ಯ ಕಾರ್ಯಕ್ರಮವನ್ನು ಜುಲೈ ಒಂದರಿಂದಲೇ ಜಾರಿಗೊಳಿಸುವ ಉದ್ದೇಶದಿಂದ ಇಂತಹ ತೀರ್ಮಾನ ಕೈಗೊಂಡಿದ್ದೇವೆ ಕೇಂದ್ರ ಸರ್ಕಾರ ತನ್ನ ಬಳಿ ಯಥೇಚ್ಛವಾಗಿ ಅಕ್ಕಿ ಇಟ್ಟುಕೊಂಡಿದ್ದರೂ, ಕರ್ನಾಟಕ ಸರ್ಕಾರದ ಯೋಜನೆಗೆ ಕಲ್ಲು ಹಾಕಲು ನಮಗೆ ಅಕ್ಕಿ ನೀಡದಿರುವ ತೀರ್ಮಾನ ಕೈಗೊಂಡಿದ್ದಾರೆ.

ಮೊದಲು ಅಕ್ಕಿ ನೀಡುತ್ತೇವೆ ಎಂದು ಆಹಾರ ನಿಗಮ ಹೇಳಿತ್ತು. ನಂತರ ಅದನ್ನು ಹಿಂದಕ್ಕೆ ಪಡೆದು, ಯಾವುದೇ ರಾಜ್ಯಗಳಿಗೂ ಹೆಚ್ಚುವರಿಯಾಗಿ ಅಕ್ಕಿ ನೀಡದಿರಲು ಕೇಂದ್ರ ತೀರ್ಮಾನ ಕೈಗೊಂಡಿದೆ ಎಂಬ ಮಾಹಿತಿಯನ್ನು ನಮಗೆ ರವಾನಿಸಿತು. ಮುಕ್ತ ಮಾರುಕಟ್ಟೆಯಲ್ಲಿ ಹರಾಜಿನ ಮೂಲಕ ಯಾರಾದರೂ ಕೇಂದ್ರದಿಂದ ಅಕ್ಕಿ ಪಡೆಯಬಹುದು, ಆದರೆ ರಾಜ್ಯಗಳಿಗೆ ಇದರ ಅವಕಾಶವನ್ನು ತಪ್ಪಿಸಿದೆ. ಉದ್ದೇಶಪೂರ್ವಕವಾಗಿ ಬಡವರಿಗೆ ಅಕ್ಕಿ ನೀಡುವುದನ್ನು ತಪ್ಪಿಸಲು ಕೇಂದ್ರ ಸರ್ಕಾರ ನಡೆಸಿರುವ ಕುತಂತ್ರ ಎಂದು ಮುಖ್ಯಮಂತ್ರಿಯವರು ▶ 8ನೇ ಪುಟಕ್ಕೆ

ಗೃಹಲಕ್ಷ್ಮಿಗೆ ಜು.14ರಿಂದ ಅರ್ಜಿ ಸಲ್ಲಿಕೆಗೆ ಅವಕಾಶ

ಬೆಂಗಳೂರು, ಜೂ. 28(ಕೆಎಂಶಿ)– ಗೃಹಲಕ್ಷ್ಮಿ ಯೋಜನೆಗೆ ಜುಲೈ 14 ರಿಂದ ಅರ್ಜಿ ಪಡೆಯಲು ಸೇರಿದ್ದ ಸಚಿವ ಸಂಪುಟ ನಿರ್ಧರಿಸಿದೆ

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ, ಕಾನೂನು ಮತ್ತು ಸಂಸದೀಯ ಸಚಿವ ಹೆಚ್.ಕೆ.ಪಾಟೀಲ್, ವಿಧಾನ ಸಭೆಯ ಚುನಾವಣೆಗೂ ಮುನ್ನ ಜನರಿಗೆ ನೀಡಿದ್ದ ಗ್ಯಾರಂಟಿ ಯೋಜನೆಗಳನ್ನು, ನಾವು ಹೇಳಿದಂತೆ ನೀಡುತ್ತಿದ್ದೇವೆ. ಆಗಸ್ಟ್ 17ರಿಂದ ಕುಟುಂಬದ ▶ 8ನೇ ಪುಟಕ್ಕೆ

ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಬೊಲೆರೊಗೆ ಸಾರಿಗೆ ಬಸ್ ಪವರ್ ಪ್ಲಸ್ ಡಿಕ್ಕಿ: ಕಂಡಕ್ಟರ್ ಸಾವು

ರಾಮನಗರ, ಜೂ. 28– 'ಆಕ್ಸಿಡೆಂಟ್ ರೋಡ್' ಎಂದು ಕರೆಯಲ್ಪಡುತ್ತಿರುವ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತಗಳ ಸರಣಿ ಇಂದೂ ಕೂಡ ಮುಂದುವರೆದಿದ್ದು, ಪ್ಲೈವುಡ್ ಶೀಟ್ ತುಂಬಿದ್ದ ಬೊಲೆರೋಗೆ ಕೆಎಸ್ ಆರ್‌ಟಿಸಿ ಎಲೆಕ್ಟ್ರಿಕ್ ಬಸ್ ಪವರ್ ಪ್ಲಸ್ ಡಿಕ್ಕಿ ಹೊಡೆದ ಪರಿಣಾಮ ಬಸ್ ಕಂಡಕ್ಟರ್ ಸಾವನ್ನಪ್ಪಿ, 22 ಮಂದಿ ಗಾಯಗೊಂಡ ಘಟನೆ ರಾಮನಗರ ತಾಲೂಕಿನ ಜಯಪುರ ಗ್ರಾಮದ ಬಳಿ ಬುಧವಾರ ಸಂಜೆ ಸಂಭವಿಸಿದೆ. ಬೆಂಗಳೂರಿನ ರಾಜಾಜಿ ನಗರ ನಿವಾಸಿಯಾದ ಕೆಎಸ್‌ಆರ್‌ಟಿಸಿ



ಎಲೆಕ್ಟ್ರಿಕ್ ಬಸ್ ಕಂಡಕ್ಟರ್ ರಮೇಶ್ (49), ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಮೈಸೂರಿನಿಂದ ಬೆಂಗಳೂರಿಗೆ ತೆರಳುತ್ತಿದ್ದ



ಎಲೆಕ್ಟ್ರಿಕ್ ಬಸ್ ಜಯಪುರ ಬಳಿ ಚಾಲಕನ ನಿಯಂತ್ರಣ ತಪ್ಪಿ ಮುಂದೆ ಹೋಗುತ್ತಿದ್ದ ಬೊಲೆರೋಗೆ ಡಿಕ್ಕಿ ಹೊಡೆದಿದೆ. ಈ ರಭಸಕ್ಕೆ ಬೊಲೆರೋದಲ್ಲಿದ್ದ ಪ್ಲೈವುಡ್ ಶೀಟ್‌ಗಳು ಬಸ್‌ನ ಮುಂದಿನ ಗಾಜನ್ನು ಸೀಳಿಕೊಂಡು ಸ್ಟೇರಿಂಗ್‌ಗೆ ಸಿಲುಕಿವೆ. ಇದರಿಂದಾಗಿ ಬಸ್‌ನ ನಿಯಂತ್ರಣ ಮತ್ತಷ್ಟು ತಪ್ಪಿ ಬಸ್ ರಸ್ತೆ ವಿಭಜಕದ ಮೇಲೆ ಹತ್ತಿ ಸರ್ವಿಸ್ ರಸ್ತೆ ದಾಟಿ ಜಮೀನಿಗೆ ನುಗ್ಗಿ ನಿಂತಿದೆ. ಬೊಲೆರೋ ರಸ್ತೆಯಲ್ಲೇ ಪಲ್ಟಿ ಹೊಡೆದಿದೆ. ಬಸ್ ಕಂಡಕ್ಟರ್ ಸ್ಥಳದಲ್ಲೇ ಸಾವನ್ನಪ್ಪಿದ್ದು, ಅಪಘಾತದಲ್ಲಿ ಗಾಯಗೊಂಡ 22 ಮಂದಿಯನ್ನು ರಾಮನಗರ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಈ ಸಂಬಂಧ ರಾಮನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಮೈಸೂರಲ್ಲಿ ಹಾಡಹಗಲೇ ವರ್ತಕನ ಅಪಹರಣ

● ಕೆಲವೇ ಗಂಟೆಗಳಲ್ಲಿ ಐವರು ಅಪಹರಣಕಾರರ ಬಂಧಿಸಿ ಒತ್ತೆಯಾಳು ರಕ್ಷಣೆ ● ರಾಜಸ್ತಾನ ಮೂಲದ ವರ್ತಕನ ಅದೇ ರಾಜ್ಯದ ಸ್ನೇಹಿತರು ಅಪಹರಿಸಿದ್ದರು ● ಆನೇಕಲ್ ಬಳಿ ಕಟ್ಟಡವೊಂದರಲ್ಲಿ ಒತ್ತೆಯಾಳನ್ನು ಇರಿಸಿಕೊಂಡಿದ್ದರು

ಮೈಸೂರು, ಜೂ.28(ಆರ್‌ಕೆ)– ಬೇರೆಯವರಿಗೆ ಕೊಡಿಸಿದ್ದ ಸಾಲದ ಹಣಕ್ಕಾಗಿ ವರ್ತಕನನ್ನು ಅಪಹರಿಸಿದ್ದ ರಾಜಸ್ತಾನ ಮೂಲದ ಐವರನ್ನು ಕೆಲವೇ ಗಂಟೆಗಳಲ್ಲಿ ಬಂಧಿಸಿ, ಒತ್ತೆಯಾಳನ್ನು ರಕ್ಷಿಸುವಲ್ಲಿ ಲಷ್ಕರ್ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಬೆಂಗಳೂರಿನ ರಾಜರಾಜೇಶ್ವರಿನಗರದಲ್ಲಿ ವಾಸವಾಗಿದ್ದ ರಾಜಾಸ್ತಾನ ಮೂಲದ ದುಂಗರ್ ಸಿಂಗ್, ನರ್ಪತ್ ಸಿಂಗ್, ಬಡಾರಾಮ್, ಜಮ್ತಾರಾಮ್ ಹಾಗೂ ಸುಜನ್‌ರಾಮ್ ಬಂಧಿತ ಅಪಹರಣಕಾರರಾಗಿದ್ದು, ಇವರು ಮೈಸೂರಿನ ಹಳ್ಳದಕೇರಿಯಲ್ಲಿ ಶಿವಶಕ್ತಿ ಮಾರ್ಕೆಟಿಂಗ್ ಹೆಸರಿನಲ್ಲಿ ಕಿಚನ್‌ವೇರ್ ಐಟಂಗಳ ಮಾರಾಟಗಾರ ಪ್ರಕಾಶ್‌ಕುಮಾರ್ (35) ಎಂಬುವರನ್ನು ▶ 8ನೇ ಪುಟಕ್ಕೆ

ಜು.1ರಿಂದ ಶ್ರೀರಂಗಪಟ್ಟಣ ಬಳಿ ಎಕ್ಸ್‌ಪ್ರೆಸ್ ವೇ 2ನೇ ಟೋಲ್ ಆರಂಭ



ಮಂಡ್ಯ, ಜೂ.28– ಬೆಂಗಳೂರು–ಮೈಸೂರು ದಶಪಥ ಹೆದ್ದಾರಿಯಲ್ಲಿ ಸಂಚಾರ ಮಾಡುವ ವಾಹನ ಸವಾರರಿಗೆ ಮತ್ತೊಂದು ಶಾಕ್ ಎದುರಾಗಿದೆ. ಇಷ್ಟು ದಿನ ಒಂದು ಟೋಲ್‌ನ ದರಕ್ಕೆ ಆಕ್ರೋಶ ವ್ಯಕ್ತಪಡಿಸುತ್ತಿದ್ದ ಜನರಿಗೆ ಮತ್ತೊಂದು ಟೋಲ್ ದರ ಗಾಯದ ಮೇಲೆ ಬರೆ ಎಳೆದಂತೆ ಆಗುವ ಸಾಧ್ಯತೆಗಳು ದಟ್ಟವಾಗಿ ಕಾಣುತ್ತಿದೆ.

ಬೆಂಗಳೂರಿನಂತೆ ಮೈಸೂರು ನಗರವನ್ನು ಉದ್ಯಮದಲ್ಲಿ ಅಭಿವೃದ್ಧಿ ಮಾಡಬೇಕೆಂದು ಮತ್ತು ಜನರಿಗೆ ಅನುಕೂಲವಾಗಲೆಂದು ಕೇಂದ್ರ ಸರ್ಕಾರ 9,000 ಕೋಟಿ ರೂ. ವೆಚ್ಚದಲ್ಲಿ ಬೆಂಗಳೂರು–ಮೈಸೂರು ದಶಪಥ ರಾಷ್ಟ್ರೀಯ ಹೆದ್ದಾರಿಯನ್ನು ನಿರ್ಮಾಣ ಮಾಡಲಾಗಿದೆ. ಈಗಾಗಲೇ ರಾಮನಗರ ಜಿಲ್ಲೆಯ ಕಣಮಿಣಕಿ ಟೋಲ್ ಸಂಗ್ರಹ ಆರಂಭವಾಗಿದ್ದು, ಒಂದು ಕಾರಿಗೆ ಏಕಮುಖ ಸಂಚಾರಕ್ಕೆ 165 ರೂ. ಅನ್ನು ವಸೂಲಿ ಮಾಡಲಾಗುತ್ತಿದೆ. ಈ ಹೊತ್ತಿನಲ್ಲಿಯೇ ಹೆದ್ದಾರಿ ಪ್ರಾಧಿಕಾರ ಬೆಂಗಳೂರು–ಮೈಸೂರು ದಶಪಥ ರಾಷ್ಟ್ರೀಯ ಹೆದ್ದಾರಿಯ ಎರಡನೇ ಹಂತದ ಟೋಲ್ ಅನ್ನು ಜುಲೈ 1ರಿಂದ ಆರಂಭಿಸಲಿದ್ದು, ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ▶ 8ನೇ ಪುಟಕ್ಕೆ

ಯಾವ ವಾಹನಗಳಿಗೆ ಎಷ್ಟು ಟೋಲ್

ಏಕಮುಖ ಸಂಚಾರ	
● ಕಾರು, ಜೀಪು, ವ್ಯಾನು	–155 ರೂ.
● ಲಘು ವಾಣಿಜ್ಯ ವಾಹನ, ಲಘುಸರಕು ವಾಹನ/ಮಿನಿ ಬಸ್	–250 ರೂ.
● ಟ್ರಕ್/ಬಸ್ (ಎರಡು ಆಕ್ಸೆಲ್‌ಗಳದ್ದು)	–525 ರೂ.
● ಮೂರು ಆಕ್ಸೆಲ್ ವಾಣಿಜ್ಯ ವಾಹನ	–575 ರೂ.
● ಭಾರೀ ನಿರ್ಮಾಣ ಯಂತ್ರಗಳು / ಭೂ ಅಗೆತದ ಸಾಧನಗಳು/ ಬಹು ಆಕ್ಸೆಲ್ ವಾಹನ (4ರಿಂದ 6 ಆಕ್ಸೆಲ್‌ಗಳದ್ದು)	–825 ರೂ.
● ದೊಡ್ಡ ಗಾತ್ರದ ವಾಹನ (7 ಅಥವಾ ಹೆಚ್ಚು ಆಕ್ಸೆಲ್‌ಗಳದ್ದು)	–1005 ರೂ.
ಅದೇ ದಿನ ವಾಪಸ್	
● ಕಾರು, ಜೀಪು, ವ್ಯಾನು	–235 ರೂ.
● ಲಘು ವಾಣಿಜ್ಯ ವಾಹನ, ಲಘುಸರಕು ವಾಹನ/ಮಿನಿ ಬಸ್	–375 ರೂ.
● ಟ್ರಕ್/ಬಸ್ (ಎರಡು ಆಕ್ಸೆಲ್‌ಗಳದ್ದು)	–790 ರೂ.
● ಮೂರು ಆಕ್ಸೆಲ್ ವಾಣಿಜ್ಯ ವಾಹನ	–860 ರೂ.
● ಭಾರೀ ನಿರ್ಮಾಣ ಯಂತ್ರಗಳು / ಭೂ ಅಗೆತದ ಸಾಧನಗಳು/ ಬಹು ಆಕ್ಸೆಲ್ ವಾಹನ (4ರಿಂದ 6 ಆಕ್ಸೆಲ್‌ಗಳದ್ದು)	–1240 ರೂ.
● ದೊಡ್ಡ ಗಾತ್ರದ ವಾಹನ (7 ಅಥವಾ ಹೆಚ್ಚು ಆಕ್ಸೆಲ್‌ಗಳದ್ದು)	–1510 ರೂ.
ಮಂಡ್ಯ ಜಿಲ್ಲೆಯ ಒಳಗೆ	
● ಕಾರು, ಜೀಪು, ವ್ಯಾನು	–80 ರೂ.
● ಲಘು ವಾಣಿಜ್ಯ ವಾಹನ, ಲಘು ಸರಕು ವಾಹನ/ಮಿನಿ ಬಸ್	–125 ರೂ.
● ಟ್ರಕ್/ಬಸ್ (ಎರಡು ಆಕ್ಸೆಲ್‌ಗಳದ್ದು)	–265 ರೂ.
● ಮೂರು ಆಕ್ಸೆಲ್ ವಾಣಿಜ್ಯ ವಾಹನ	–285 ರೂ.
● ಭಾರೀ ನಿರ್ಮಾಣ ಯಂತ್ರಗಳು / ಭೂ ಅಗೆತದ ಸಾಧನಗಳು/ ಬಹು ಆಕ್ಸೆಲ್ ವಾಹನ (4ರಿಂದ 6 ಆಕ್ಸೆಲ್‌ಗಳದ್ದು)	–415 ರೂ.
● ದೊಡ್ಡ ಗಾತ್ರದ ವಾಹನ (7 ಅಥವಾ ಹೆಚ್ಚು ಆಕ್ಸೆಲ್‌ಗಳದ್ದು)	–505 ರೂ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಭಾರೀ ಲೋಪವಾಗಿದೆ

ಮೊದಲ ಬಾರಿಗೆ ತಪ್ಪು ಒಪ್ಪಿಕೊಂಡ ಸಂಸದ ಪ್ರತಾಪ್ ಸಿಂಹ



ಮೈಸೂರು, ಜೂ.28(ಬಿಎಲ್‌ಯು)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಗುಣಮಟ್ಟದ ಬಗ್ಗೆ ಇದುವರೆಗೆ ಸಮರ್ಥನೆ ಮಾಡಿಕೊಳ್ಳುತ್ತಾ ಬಂದಿದ್ದ ಸಂಸದ ಪ್ರತಾಪ್ ಸಿಂಹ, ಇದೇ ಮೊದಲ ಬಾರಿಗೆ ಎಕ್ಸ್‌ಪ್ರೆಸ್ ವೇ ಯೋಜನೆಯಲ್ಲಿ ಭಾರೀ ಲೋಪವಾಗಿದೆ ಎಂದು ಹೇಳಿದ್ದಾರೆ. ಎಕ್ಸ್‌ಪ್ರೆಸ್ ವೇ ಯೋಜನೆಯ ಡಿಪಿಆರ್‌ನಲ್ಲಿ ಲೋಪವಿತ್ತು. ಇದಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೂಡ ಅನುಮೋದನೆ ನೀಡಿತು. ಇದರಿಂದ ಇಡೀ ಎಕ್ಸ್‌ಪ್ರೆಸ್ ವೇನಲ್ಲಿ ಊರು ಒಂದು ಕಡೆ ಇದ್ದರೆ, ಅಂಡರ್ ಪಾಸ್‌ಗಳು ಮತ್ತೊಂದು ಕಡೆ ಇದೆ. ಅಷ್ಟೇ ಅಲ್ಲದೆ ಆಗಮನ ಹಾಗೂ ನಿರ್ಗಮನದ ಮಾರ್ಗ ಕೂಡ ಸರಿ ಇಲ್ಲ. ಮೈಸೂರು ಹಾಗೂ ಬೆಂಗಳೂರು ಜನರು ಮಾತ್ರ ಈ ಮಾರ್ಗದಲ್ಲಿ ಸಂಚರಿಸಬಹುದು. ಆದರೆ ಮಂಡ್ಯ, ರಾಮನಗರ, ಚೆನ್ನಪಟ್ಟಣದ ಜನರಿಗೆ ಇಲ್ಲಿ ಎಂಟ್ರಿ ಅವಕಾಶವೇ ಇಲ್ಲದಂತಾಗಿದೆ ಎಂದು ಪ್ರತಾಪ್ ಸಿಂಹ ಯೋಜನೆಯ ಲೋಪವನ್ನು ಎಳೆ–ಎಳೆಯಾಗಿ ಬಿಡಿಸಿಟ್ಟರು. ▶ 8ನೇ ಪುಟಕ್ಕೆ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ರೇಸಿಂಗ್ ಟ್ರ್ಯಾಕ್ ಅಲ್ಲ

ಅತೀ ವೇಗ ಅಪಘಾತಕ್ಕೆ ಕಾರಣವೇ ಹೊರತು, ರೋಡ್ ಇಂಜಿನಿಯರಿಂಗ್ ಅಲ್ಲ



ಮೈಸೂರು, ಜೂ. 28(ಬಿಎಲ್‌ಯು)–ಅತಿಯಾದ ವೇಗದಲ್ಲಿ ಸಂಚಾರ ಮಾಡಲು ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ರೇಸಿಂಗ್ ಟ್ರ್ಯಾಕ್ ಅಲ್ಲ ಎಂದು ಸಂಸದ ಪ್ರತಾಪ್ ಸಿಂಹ ಹೇಳಿದರು.

ಮೈಸೂರಿನಲ್ಲಿ ಇಂದು ಮಾಧ್ಯಮದವರ ಜೊತೆ ಮಾತನಾಡಿದ ಅವರು, ಸರಣಿ ಅಪಘಾತವಾಗುತ್ತಿರುವ ಕಾರಣ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯನ್ನು ಸಾವಿನ ದಾರಿ ಎಂದು ಟೀಕಿಸುತ್ತಿರುವವರ ವಿರುದ್ಧ ಅವರು ಕಿಡಿಕಾರಿದರು.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯನ್ನು 80 ರಿಂದ 120 ಕಿಲೋ ಮೀಟರ್ ವೇಗದಲ್ಲಿ ಸಂಚರಿಸಲು ಡಿಸೈನ್ ಮಾಡಲಾಗಿದೆ. ಇಷ್ಟು ವೇಗದಲ್ಲಿ ಸಂಚರಿಸಿದರೂ 90 ನಿಮಿಷದಲ್ಲಿ ಬೆಂಗಳೂರು ತಲುಪಬಹುದು. ಆದರೆ ಬಹಳಷ್ಟು ವಾಹನ ಸವಾರರು 130 ರಿಂದ 140 ಕಿಲೋ ಮೀಟರ್ ಸ್ಪೀಡ್‌ನಲ್ಲಿ ಹೋಗುತ್ತಿದ್ದಾರೆ. ಇದರಿಂದ ನಿಯಂತ್ರಣ ಸಿಗದ ವಾಹನಗಳು ಅಪಘಾತಕ್ಕೀಡಾಗುತ್ತಿವೆ. ವಾಹನ ಸವಾರರ ನಿರ್ಲಕ್ಷ್ಯತನ ಹಾಗೂ ಬೇಜವಾಬ್ದಾರಿತನದಿಂದ ಅಪಘಾತಗಳಾಗುತ್ತಿವೆಯೇ ಹೊರತು ಎಕ್ಸ್‌ಪ್ರೆಸ್ ವೇಯ ಇಂಜಿನಿಯರಿಂಗ್ ಇದಕ್ಕೆ ಕಾರಣವಲ್ಲ ಎಂದು ಪ್ರತಾಪ್ ಸಿಂಹ ಅಭಿಪ್ರಾಯಪಟ್ಟರು. ಬಿಎಂಡಬ್ಲ್ಯು, ಆಡಿ ಸೇರಿದಂತೆ ಹಲವು ಐಷರಾಮಿ ಕಾರುಗಳು 140 ಕಿಲೋ ಮೀಟರ್ ಸ್ಪೀಡ್‌ನಲ್ಲಿ ಹೋಗುತ್ತವೆ. ಅವುಗಳಿಗೆ ಅಷ್ಟು ನಿಯಂತ್ರಣ ವಿರುತ್ತದೆ. ಆದರೆ ಮಾರುತಿ ಕಾರು, ವ್ಯಾನ್, ಸ್ಯಾಂಟ್ರೊ ಸೇರಿದಂತೆ ಸಣ್ಣ ಪ್ರಮಾಣದ ಕಾರುಗಳು 130 ಕಿಲೋ ಮೀಟರ್ ಸ್ಪೀಡ್‌ನಲ್ಲಿ ಹೋದರೆ ಅಪಘಾತವಾಗದೇ ಇರುತ್ತವೆಯೇ? ಈ ವಾಸ್ತವ ಅರಿಯದೆ, ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆ ಅವೈಜ್ಞಾನಿಕ ಎಂದು ಕೆಲವು ಮಹಾನುಭಾವರು ಹೇಳುತ್ತಾರೆ ಎಂದು ಟೀಕಾಕಾರರಿಗೆ ಪ್ರತಾಪ್ ಸಿಂಹ ತಿರುಗೇಟು ಕೊಟ್ಟರು.

ಇಡೀ ಎಕ್ಸ್‌ಪ್ರೆಸ್ ಹೈವೆಯಲ್ಲಿ ಎಲ್ಲಿ ಅವೈಜ್ಞಾನಿಕತೆ ಇದೆ ಎಂದು ತೋರಿಸಿದರೆ ಗುತ್ತಿಗೆದಾರನ ಕತ್ತು ಪಟ್ಟಿ ಹಿಡಿದು ಕರೆತಂದು ಸರಿ ಮಾಡಿಸುತ್ತೇನೆ. ಅದು ಬಿಟ್ಟು ಸುಖಾ ಸುಮ್ಮನೆ ಆರೋಪ ಮಾಡುವುದು ಸರಿಯಲ್ಲ ಎಂದು ಪ್ರತಾಪ್ ಸಿಂಹ ಆರೋಪ ಮಾಡುವವರಿಗೆ ಟಾಂಗ್ ಕೊಟ್ಟರು.

ಹತ್ತು ದಿನ ಮುಂದೂಡಲು ತಿಳಿಸಿದ್ದೇನೆ...

ಮೈಸೂರು, ಜೂ. 28(ಆರ್‌ಕೆ)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯ ಎರಡನೇ ಟೋಲ್ ಪ್ಲಾಜಾದಲ್ಲಿ ಶುಲ್ಕ ವಸೂಲಿಯನ್ನು 10 ದಿನಗಳ ಕಾಲ ಮುಂದೂಡುವಂತೆ ತಿಳಿಸಿದ್ದೇನೆ ಎಂದು ಸಂಸದ ಪ್ರತಾಪ್ ಸಿಂಹ ಹೇಳಿದ್ದಾರೆ.

ಎಕ್ಸ್‌ಪ್ರೆಸ್‌ವೇನಲ್ಲಿ ಅಪಘಾತಗಳು ಜಾಸ್ತಿಯಾಗುತ್ತಿದ್ದು, ಎಡಿಜಿಪಿ ಅಲೋಕ್ ಕುಮಾರ್ ಅವರು ನಿನ್ನೆಯಷ್ಟೇ ಪರಿಶೀಲನೆ ನಡೆಸಿ, ಸೂಚನಾ ಫಲಕಗಳನ್ನು ಅಳವಡಿಸಿ ವೇಗ ನಿಯಂತ್ರಣದೊಂದಿಗೆ ಅಪಘಾತ ತಪ್ಪಿಸುವಂತೆ ಸಲಹೆ ನೀಡಿದ್ದು, ಅದರಂತೆ ಈಗಾಗಲೇ ಫಲಕ ಅಳವಡಿಸುವ ಕಾರ್ಯ ಆರಂಭವಾಗಿರುವ ಕಾರಣ ಶ್ರೀರಂಗಪಟ್ಟಣ ತಾಲೂಕು, ಗಣಂಗೂರು ಬಳಿಯ ಪ್ಲಾಜಾದಲ್ಲಿ ಟೋಲ್ ಫೀ ಸಂಗ್ರಹಿಸುವುದನ್ನು 10 ದಿನಗಳ ಕಾಲ ಮುಂದೂಡಿ ಎಂದು ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರದ ಅಧಿಕಾರಿಗಳಿಗೆ ಹೇಳಿದ್ದೇನೆ ಎಂದು ಅವರು ತಿಳಿಸಿದರು.

ಕೆಲವರು ಹೆದ್ದಾರಿಯಲ್ಲಿ ಅಳವಡಿಸಿರುವ ಕಬ್ಬಿಣದ ಬ್ಯಾರಿಕೇಡ್‌ಗಳನ್ನು ಕತ್ತರಿಸಿ ಕಳವು ಮಾಡಿದ್ದಾರೆ. ವೇಗ ನಿಯಂತ್ರಣಕ್ಕೆ ಸೈನೇಜ್ ಬೋರ್ಡ್ ಹಾಕಬೇಕಿದೆ, ಹೈವೇ ಪೆಟ್ರೋಲಿಂಗ್ ವಾಹನಗಳ ಕಾರ್ಯ ಆರಂಭಿಸಬೇಕಾಗಿರುವುದರಿಂದ ಜುಲೈ 1ರಿಂದ ಆರಂಭಿಸಲುದ್ದೇಶಿಸಿದ್ದ ಟೋಲ್ ಸಂಗ್ರಹವನ್ನು ಮುಂದೂಡಿ ಎಂದು ತಿಳಿಸಿದ್ದೇನೆ ಎಂದು ಪ್ರತಾಪ್ ಸಿಂಹ ಹೇಳಿದರು.

ಮೈಸೂರಲ್ಲಿ ಅ.4ರಿಂದ ಸ್ಕಾಲ್ ಇಂಡಿಯಾ ಕಾಂಗ್ರೆಸ್–2023

ಮೈಸೂರು, ಜೂ.28(ಆರ್‌ಕೆ)–ಸ್ಕಾಲ್ ಇಂಟರ್‌ನ್ಯಾಷನಲ್ ಟ್ರಾವೆಲ್ ಅಂಡ್ ಟೂರಿಸಂ ಸಂಸ್ಥೆಯು ಅಕ್ಟೋಬರ್ 4ರಿಂದ 8ರವರೆಗೆ ಮೈಸೂರು ಮತ್ತು ಬೆಂಗಳೂರಿನಲ್ಲಿ ಸ್ಕಾಲ್ ಇಂಡಿಯಾ ಕಾಂಗ್ರೆಸ್–2023 ಕಾರ್ಯಕ್ರಮವನ್ನು ಆಯೋಜಿಸಲು ನಿರ್ಧರಿಸಿದೆ.

ವಿಶ್ವಾದ್ಯಂತ ಸಂಪರ್ಕ ಜಾಲ ಸೃಷ್ಟಿಸುವ ಉದ್ದೇಶದಿಂದ ಆರಂಭವಾಗಿರುವ ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಸ್ಕಾಲ್ ಇಂಡಿಯಾ ಕಾಂಗ್ರೆಸ್–2023 ವೆಬ್‌ಸೈಟ್ ಮತ್ತು ಲಾಂಛನವನ್ನು ಸಂಸದ ಪ್ರತಾಪ್ ಸಿಂಹ ಅನಾವರಣಗೊಳಿಸಿದರು.

ಟ್ರಾವೆಲ್ ಉದ್ಯಮ, ಕರ್ನಾಟಕ ಪ್ರವಾಸೋದ್ಯಮ ಇಲಾಖೆಗಳು ವೃತ್ತಿಪರರಿಗೆ ಸೂಕ್ತ ಸಲಹೆ ಮತ್ತು ವೇದಿಕೆ ಕಲ್ಪಿಸಲು ಸ್ಕಾಲ್ ಇಂಡಿಯಾ ಕಾಂಗ್ರೆಸ್‌ನಿಂದ ಅನುಕೂಲವಾಗಲಿದೆ. ಅಕ್ಟೋಬರ್ 4ರಂದು ಮೈಸೂರಲ್ಲಿ ಸ್ಕಾಲ್ ಇಂಡಿಯಾ ಕಾಂಗ್ರೆಸ್‌ಗೆ ಚಾಲನೆ ದೊರೆಯಲಿದೆ.



ಮಂಗಳವಾರ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸ್ಕಾಲ್ ಇಂಡಿಯಾ ಕಾಂಗ್ರೆಸ್–2023ರ ಪೋಸ್ಟರ್ ಮತ್ತು ವೆಬ್‌ಸೈಟ್ ಅನ್ನು ಬಿಡುಗಡೆ ಮಾಡಲಾಯಿತು. (ಎಡದಿಂದ) ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರು ಉಪಾಧ್ಯಕ್ಷ ಸಿ.ಎ.ಜಯಕುಮಾರ್, ಅಧ್ಯಕ್ಷ ಸುದಿಪ್ತ ದೇಬ್, ಸಂಸದ ಪ್ರತಾಪ್ ಸಿಂಹ, ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ, ಸ್ಕಾಲ್ ಇಂಟರ್‌ನ್ಯಾಷನಲ್ ಇಂಡಿಯಾ ಅಧ್ಯಕ್ಷ ಕಾರ್ಲ್‌ವಾಜ್ ಹಾಗೂ ಸ್ಕಾಲ್ ಇಂಟರ್‌ನ್ಯಾಷನಲ್ ಬೆಂಗಳೂರು ಅಧ್ಯಕ್ಷ ಅಯ್ಯಪ್ಪ ಸೋಮಯ್ಯ ಅವರನ್ನು ಚಿತ್ರದಲ್ಲಿ ಕಾಣಬಹುದು.

ಅಕ್ಟೋಬರ್ 5ರಂದು 'ಅನ್‌ಸೀನ್ ಮೈಸೂರು' ಕಾರ್ಯಕ್ರಮ ನಡೆಯಲಿದ್ದು, ಅಕ್ಟೋಬರ್ 6ರಂದು ಪ್ರತಿನಿಧಿಗಳು ಎಕ್ಸ್‌ಪ್ರೆಸ್ ವೇ ಮೂಲಕ ಬೆಂಗಳೂರಿಗೆ ತೆರಳುವರು ಎಂದು ಸಂಸ್ಥೆಯು ಪ್ರಕಟಣೆಯಲ್ಲಿ ತಿಳಿಸಿದೆ. ಬೆಂಗಳೂರಲ್ಲಿ ಬ್ಯುಸಿನೆಸ್ ಟು ಬ್ಯುಸಿನೆಸ್ ಸಮ್ಮೇಳನ ಮತ್ತು ವಸ್ತುಪ್ರದರ್ಶನ ಏರ್ಪಡಿಸಲಾಗಿದ್ದು, ರಾಜ್ಯದಲ್ಲಿ ಟ್ರಾವೆಲ್ ಡೆಸ್ಟಿನೇಷನ್ಸ್, ಸೌಲಭ್ಯಗಳು, ಪ್ರವಾಸಿಸ್ನೇಹಿ ತಾಣಗಳನ್ನು ಅಭಿವೃದ್ಧಿಪಡಿಸುವ ಕುರಿತಂತೆ ಈ ಸಂದರ್ಭ ಚರ್ಚೆಗಳು ನಡೆಯಲಿವೆ. ಲೋಗೊ ಅನಾವರಣಗೊಳಿಸಿ ಮತನಾಡಿದ ಪ್ರತಾಪ್ ಸಿಂಹ, ಮೈಸೂರಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿಗೆ ಸ್ಕಾಲ್ ಇಂಡಿಯಾ ಪೂರಕ ವೇದಿಕೆಯಾಗಲಿದೆ. ಅತೀ ವೇಗವಾಗಿ ಬೆಳೆಯುತ್ತಿರುವ ಮೈಸೂರು ನಗರಕ್ಕೆ ರೈಲ್ವೇ, ರಸ್ತೆ, ವಿಮಾನ ಸಂಪರ್ಕವಿದೆ. ಅದನ್ನು ಬಳಸಿ ಇಲ್ಲಿನ ಟೂರಿಸಂಗೆ ಉತ್ತೇಜನ ನೀಡಬೇಕು ಎಂದು ಹೇಳಿದರು.

ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ, ಸ್ಕಾಲ್ ಇಂಡಿಯಾ ಕಾಂಗ್ರೆಸ್ ಅಧ್ಯಕ್ಷ ಸುದಿಪ್ತ ದೇಬ್, ಸ್ಕಾಲ್ ಇಂಟರ್‌ನ್ಯಾಷನಲ್ ಬೆಂಗಳೂರು ಅಧ್ಯಕ್ಷ ಅಯ್ಯಪ್ಪ ಸೋಮಯ್ಯ, ಸ್ಕಾಲ್ ಇಂಟರ್‌ನ್ಯಾಷನಲ್ ಇಂಡಿಯಾ ಅಧ್ಯಕ್ಷ ಕಾರ್ಲ್‌ವೇಜ್, ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರು ಅಧ್ಯಕ್ಷ ಬಿ.ಎಸ್.ಪ್ರಶಾಂತ್, ಉಪಾಧ್ಯಕ್ಷ ಸಿ.ಎ.ಜಯಕುಮಾರ್ ಈ ಸಂದರ್ಭ ಉಪಸ್ಥಿತರಿದ್ದರು.

ಕೇಂದ್ರ ಸರ್ಕಾರಕ್ಕೆ 9ನೇ ವರ್ಷದ ಸಂಭ್ರಮ

ಮನೆ–ಮನೆಗೆ ಬಿಜೆಪಿ ಸಾಧನೆ ತಲುಪಿಸಿದ ಮಾಜಿ ಶಾಸಕ ನಾಗೇಂದ್ರ



ಮೈಸೂರು, ಜೂ.28(ಜಿಎ)–ಕೇಂದ್ರ ಬಿಜೆಪಿ ಸರ್ಕಾರ 9 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಬಿಜೆಪಿ ವತಿಯಿಂದ ವಾರ್ಡ್ 19ರಲ್ಲಿ ಆಯೋಜಿಸಿದ್ದ ಮಹಾ ಸಂಪರ್ಕ ಅಭಿಯಾನದಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಯೋಜನೆಗಳ ಬಗ್ಗೆ ಮಾಜಿ ಶಾಸಕ ಎಲ್.ನಾಗೇಂದ್ರ ಮನೆ ಮನೆಗೆ ಭೇಟಿ ನೀಡಿ ಕರಪತ್ರ ಹಂಚುವ ಮೂಲಕ ಕೇಂದ್ರದ ಸಾಧನೆಗಳನ್ನು ತಿಳಿಸಿದರು.

ಈ ವೇಳೆ ಮಾತನಾಡಿದ ಅವರು, ಬಿಜೆಪಿ ಸರ್ಕಾರದ ಅವಧಿಯಲ್ಲಿ ಮೈಸೂರಿನ ಅನೇಕ ಅಭಿವೃದ್ಧಿ ಕಾರ್ಯಗಳಿಗೆ ಕೋಟ್ಯಾಂತರ ರೂ. ಅನುದಾನ ತರಲಾಗಿತ್ತು ಆದರೆ, ಈಗ ಎಲ್ಲಾ ಕಾಮಗಾರಿಗಳನ್ನು ರಾಜ್ಯ ಸರ್ಕಾರ ಸ್ಥಗಿತಗೊಳಿಸಿದೆ. ಮತ್ತೊಂದೆಡೆ ಮೈಸೂರಿನಲ್ಲಿ ಕ್ಲಬ್‌ಗಳು ಆರಂಭಿಸಲು ಸೂಚನೆ ನೀಡಲಾಗಿದೆ. ನಗರವನ್ನು ಕುಡುಕರ ಸಂತೆ ಮಾಡಲು ಹೊರಟಿರುವುದು ಎಷ್ಟು ಸರಿ ಎಂದು ಜಿಲ್ಲಾ ಉಸ್ತುವಾರಿ ಸಚಿವರನ್ನು ಪ್ರಶ್ನಿಸಿ, ಇದು ಸರಿಯಾಗದಿದ್ದರೆ ಮುಂದಿನ ದಿನಗಳಲ್ಲಿ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಸಿದರು. ಕಾಂಗ್ರೆಸ್ ಸರ್ಕಾರ ಪುಕ್ಕಟ್ಟೆ ಯೋಜನೆಗಳನ್ನು ನೀಡುತ್ತೇವೆಂದು ಶಕ್ತಿ ಯೋಜನೆ ಜಾರಿ ಮಾಡಿದ್ದು, ಇದರಿಂದ ಮಹಿಳೆಯರು ರಸ್ತೆಯಲ್ಲಿ ಕಿತ್ತಾಡುತ್ತಿದ್ದಾರೆ. ಡ್ರೈವರ್ ಮತ್ತು ಕಂಡಕ್ಟರ್‌ಗೆ ಕಿರುಕುಳವಾಗುತ್ತಿದೆ. ಆಟೋ, ಕ್ಯಾಬ್ ಚಾಲಕರು ಬಾಡಿಗೆ ಇಲ್ಲದೆ ಜೀವನ ನಡೆಸುವುದೇ ಕಷ್ಟಕರವಾಗಿದೆ. ರಾಜ್ಯ ಸರ್ಕಾರ ಜನರ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ. ಅವರು ನೀಡಿರುವ ಯೋಜನೆಗಳಲ್ಲಿ ಇನ್ನೂ ಗೊಂದಲವಿದೆ. ಡಿಗ್ರಿ ವಿದ್ಯಾರ್ಥಿಗಳಿಗೆ ಸಹಾಯಧನ ನೀಡುತ್ತೇವೆಂದು ಮತ್ತು 200 ಯೂನಿಟ್ ಉಚಿತ ಎಂದಿದ್ದರು. ಆದರೆ, ಈಗ ಎಲ್ಲಾ ಯೋಜನೆಗಳಿಗೂ ಹೊಸ ನಿಯಮಗಳನ್ನು ತಂದು ಸುಳ್ಳು ಹೇಳುತ್ತಿದ್ದಾರೆ ಎಂದು ತಿಳಿಸಿದರು.

ಶ್ವಾನದಳಕ್ಕೆ 2 ಡಾಬರ್ ಶ್ವಾನಗಳ ಕೊಡುಗೆ



ಮೈಸೂರು,ಜೂ.28(ಆರ್‌ಕೆ)–ದರ್ಶನ್ ಅಭಿಮಾನಿಗಳ ಸಂಘದ ವತಿಯಿಂದ ಮೈಸೂರು ನಗರ ಪೊಲೀಸ್ ಶ್ವಾನದಳಕ್ಕೆ ಎರಡು ಡಾಬರ್ ಶ್ವಾನಗಳನ್ನು ಕೊಡುಗೆಯಾಗಿ ನೀಡಲಾಗಿದೆ.

ನಾಲ್ಕು ತಿಂಗಳ ಈ ಗಂಡು ನಾಯಿಗಳು ಚುರುಕಾಗಿದ್ದು, ಅಪರಾಧ ಪ್ರಕರಣಗಳ ಮೂಲ ಹುಡುಕುವ ಸಾಮರ್ಥ್ಯ ಹೊಂದಿದ್ದು, ತಾವೂ ಸಹ ಆ ನಿಟ್ಟಿನಲ್ಲಿ ತರಬೇತಿ ನೀಡಿದ್ದೇವೆ ಎಂದು ಅಖಿಲ ಕರ್ನಾಟಕ ದರ್ಶನ್ ತೂಗುದೀಪ ಅಭಿಮಾನಿಗಳ ಸಂಘದ ರಾಜ್ಯಾಧ್ಯಕ್ಷ ನಾಗರಾಜ್ ರಾಚಯ್ಯ ತಿಳಿಸಿದ್ದಾರೆ.

ಮೈಸೂರಿನ ನಗರ ಪೊಲೀಸ್ ಕಮಿಷ್ನರ್ ಕಚೇರಿಯಲ್ಲಿ ಪೊಲೀಸ್ ಕಮಿಷ್ನರ್ ಬಿ.ರಮೇಶ್ ಅವರಿಗೆ ಶ್ವಾನಗಳನ್ನು ಹಸ್ತಾಂತರಿಸಲಾಯಿತು. ಈ ಸಂದರ್ಭ ನಗರ ಸಶಸ್ತ್ರ ಮೀಸಲು ಪಡೆ ಡಿಸಿಪಿ ಎ.ಮಾರುತಿ, ಶ್ವಾನದಳದ ಉಸ್ತುವಾರಿ ಅಧಿಕಾರಿಯಾದ ಪಿ.ಸುರೇಶ್, ಸಿಬ್ಬಂದಿಗಳಾದ ಪುರುಷೋತ್ತಮ್, ಬಸಂತ್ ಕುಮಾರ್, ನಾಗರಾಜ್ ರಾಚಯ್ಯ, ಪ್ರದೀಪ್ ಉಪಸ್ಥಿತರಿದ್ದರು.

ಈ ಕುರಿತು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಡಿಸಿಪಿ ಮಾರುತಿ, ಈ ಡಾಬರ್ ತಳಿಯ ಶ್ವಾನಗಳನ್ನು ಬೆಂಗಳೂರಿನ ಆಡುಗೋಡಿಯಲ್ಲಿರುವ ಶ್ವಾನ ತರಬೇತಿ ಸೆಂಟರ್‌ಗೆ ಕಳುಹಿಸಿ ತರಬೇತಿ ಕೊಡಿಸಲಾಗುವುದು ಎಂದರು.

ಶ್ವಾನದಳದಲ್ಲಿ 8 ಶ್ವಾನಗಳನ್ನು ನೀಡಿರುವುದರಿಂದ ಒಟ್ಟು 10 ಶ್ವಾನಗಳಿವೆ. ಪ್ರತಿಯೊಂದನ್ನು ಇಬ್ಬರು ತರಬೇತಿ ಹೊಂದಿದ ಪೊಲೀಸ್ ಸಿಬ್ಬಂದಿ ನಿರ್ವಹಿಸುತ್ತಿದ್ದಾರೆ. ಅವುಗಳನ್ನು ಕಾಲ ಕಾಲಕ್ಕೆ ಪಶು ವೈದ್ಯರು ವೈದ್ಯಕೀಯ ತಪಾಸಣೆ ನಡೆಸಿ, ಅವುಗಳ ಆರೋಗ್ಯದ ಮೇಲೆ ನಿಗಾ ಇರಿಸುತ್ತಾರೆ ಎಂದು ನುಡಿದರು.

ಪಕ್ಷ ವಿರೋಧಿ ಚಟುವಟಿಕೆ ಸಾಬೀತುಪಡಿಸದಿದ್ದರೆ ಎಂ.ಕೆ.ಸೋಮಶೇಖರ್ ರಾಜಕೀಯ ನಿವೃತ್ತಿ ಪಡೆಯಲಿ

ಕಾಂಗ್ರೆಸ್ ಮುಖಂಡ ನವೀನ್‌ಕುಮಾರ್ ಸವಾಲು



ಮೈಸೂರು, ಜೂ.28(ಎಂಟಿವೈ)–ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೆ.ಆರ್.ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರ ವಿರುದ್ಧ ಕೆಲಸ ಮಾಡಿರುವುದು ಸಾಬೀತು ಮಾಡದಿದ್ದರೆ, ಸೋಮಶೇಖರ್ ಅವರು ರಾಜಕೀಯ ನಿವೃತ್ತಿ ಪಡೆಯಬೇಕು ಎಂದು ಕಾಂಗ್ರೆಸ್ ಮುಖಂಡ ಎಂ.ಎನ್.ನವೀನ್‌ಕುಮಾರ್ ಸವಾಲೆಸೆದಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೆ.ಆರ್.ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಕೆ.ಸೋಮಶೇಖರ್ ಪರ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದರೂ, ಪಕ್ಷ ವಿರೋಧಿ ಚಟುವಟಿಕೆ ಆರೋಪ ಹೊರಿಸಿ ಪತ್ರ ಬರೆದಿರುವುದು ಖಂಡನೀಯ. ಸೋಮಶೇಖರ್ ಅವರು ಈ ಹಿಂದೆಯೂ ಸೋತಿದ್ದಾರೆ. ಕಳೆದ ಬಾರಿಗೆ ಹೋಲಿಸಿದರೆ ಅವರಿಗೆ ಹೆಚ್ಚು ಮತಗಳು ಬಂದಿವೆ. ಇದಕ್ಕೆ ನಮ್ಮ ಪರಿಶ್ರಮ ಕಾರಣ. ಅನ್ಯಾಯವಾಗಿದೆ ಎನಿಸಿದ್ದರೆ ಅವರು ಸ್ಥಳೀಯ ಘಟಕಕ್ಕೆ ದೂರು ನೀಡಬೇಕಾಗಿತ್ತು ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ. ದೂರನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕೆಂದಷ್ಟೇ ತಿಳಿಸಿ ಪಕ್ಷದ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಸಿದ್ದರಾಮಯ್ಯ ಪತ್ರವನ್ನು ವರ್ಗಾಯಿಸಿದ್ದಾರೆ. ಈ ಕುರಿತು ತನಿಖೆಗೆ ನಾವು ಸಿದ್ಧರಿದ್ದು, ತಮ್ಮನ್ನು ಆರೋಪಮುಕ್ತರನ್ನಾಗಿಸುವಂತೆ ಕೋರಿ ಸಿಎಂ ಸಿದ್ದರಾಮಯ್ಯ ಹಾಗೂ ಪಕ್ಷದ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಪತ್ರ ಬರೆದು ಮನವಿ ಮಾಡುವುದಾಗಿ ತಿಳಿಸಿದರು.

ರಾಜಕೀಯ ಏಳಿಗೆ ಸಹಿಸದ ಕಾರಣ ಈ ರೀತಿಯ ಆರೋಪ ಮಾಡುವುದು ಹಿರಿಯರಾದ ಎಂ.ಕೆ.ಸೋಮಶೇಖರ್ ಅವರ ವ್ಯಕ್ತಿತ್ವಕ್ಕೆ ತಕ್ಕುದಲ್ಲ. ಬೇಕಿದ್ದರೆ ಅವರು ಪತ್ರಕರ್ತರ ಭವನಕ್ಕೆ ಬಂದು ತಮ್ಮ ವಿರುದ್ಧದ ಆರೋಪ ಸಾಬೀತುಪಡಿಸಲಿ, ಇಲ್ಲದಿದ್ದರೆ ರಾಜಕೀಯ ಸನ್ಯಾಸ ಸ್ವೀಕರಿಸಲಿ ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಪಕ್ಷದ ಇನ್ನಿತರ ಮುಖಂಡರಾದ ಎಂ.ರಾಜೇಶ್, ಸುನಿಲ್‌ಕುಮಾರ್, ಭರತ್‌ಕುಮಾರ್ ಉಪಸ್ಥಿತರಿದ್ದರು.

ನಿಧನ

ಸುನೀತಾ




ಮೈಸೂರು,ಜೂ.28–ಮೈಸೂರಿನ ಸಿದ್ಧಾರ್ಥನಗರದ 8ನೇ ಮುಖ್ಯ ರಸ್ತೆ, ಶಾಂತಿ ಮಾರ್ಗದ ನಿವಾಸಿ ಹಾಗೂ ಆಕಾಶವಾಣಿಯ ಹಿರಿಯ ವರದಿಗಾರ ಜಿ.ಎಸ್.ನಂಜುಂಡಸ್ವಾಮಿ ಅವರ ಪತ್ನಿ ಸುನೀತಾ (54) ಮಂಗಳವಾರ ನಿಧನರಾದರು. ಮೃತರು ಪತಿ, ಪುತ್ರಿ ವೈಷ್ಣವಿ, ಪುತ್ರ ಎನ್.ಶ್ರೀಕಾಂತ್, ಅಳಿಯ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ಪಾದದ ರುದ್ರಭೂಮಿಯಲ್ಲಿ ನಾಳೆ (ಜೂ.29) ಬೆಳಗ್ಗೆ 10 ಗಂಟೆಗೆ ನೆರವೇರಿಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ

ಕೌಶಲ್ಯ ಶಿವಕುಮಾರ್



ಚಾರ್ಟರ್ಡ್ ಅಕೌಂಟೆಂಟ್ ಎಂ.ಶಿವಕುಮಾರ್ ಅವರ ಪತ್ನಿ ಶ್ರೀಮತಿ ಕೌಶಲ್ಯ ಶಿವಕುಮಾರ್(ರೇಖಾ) ಅವರು ಇಂದು ನಿಧನರಾದರು. ಅವರಿಗೆ 61 ವರ್ಷ ವಯಸ್ಸಾಗಿತ್ತು. ಮೈಸೂರಿನ ಕುವೆಂಪುನಗರ, ನವಿಲು ರಸ್ತೆ ನಿವಾಸಿಯಾದ ಶ್ರೀಮತಿಯವರು ಪ್ರಗತಿ ವಿದ್ಯಾ ಕೇಂದ್ರದಲ್ಲಿ ಮುಖ್ಯೋಪಾಧ್ಯಾಯರಾಗಿದ್ದರು. ದಿವಂಗತರು ಪತಿ, ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗುರುವಾರ (ಜೂ.29) ಮಧ್ಯಾಹ್ನ 2 ಗಂಟೆಗೆ ನಗರದ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಅವರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಿವರಾಂಪೇಟೆಯ ಮನ್ನಾರ್ಸ್ ಮಾರುಕಟ್ಟೆಯಲ್ಲಿ 2 ಅಂಗಡಿಗಳ ಶೆಟರ್ ಮೀಟಿ ನಗದು ಕಳವು





ಮೈಸೂರು,ಜೂ.28(ಆರ್‌ಕೆ)– ಮೈಸೂರಿನ ಶಿವರಾಂಪೇಟೆಯಲ್ಲಿರುವ ಮನ್ನಾರ್ಸ್ ಮಾರುಕಟ್ಟೆಯಲ್ಲಿ ಶೆಟರ್ ಮೀಟಿ ಎರಡು ಅಂಗಡಿಗಳಲ್ಲಿ ನಗದು ಕಳವು ಮಾಡಲಾಗಿದೆ.

ಕಳೆದ ರಾತ್ರಿ ಮಿಲನ್ ಸ್ಟೇಷನರಿ ಶಾಪ್ ಮತ್ತು ನಾವೆಲ್ಟಿ ಸ್ಟೋರ್ಸ್ ಅಂಗಡಿಗಳ ರೋಲಿಂಗ್ ಶೆಟರ್ಸ್ ಮೀಟಿ ಒಳ ನುಸುಳಿರುವ ಖದೀಮರು ಗಲ್ಲಾ ಪೆಟ್ಟಿಗೆಯನ್ನು ಜಾಲಾಡಿ ಅದರಲ್ಲಿದ್ದ 2,500 ರೂ. ನಗದನ್ನು ಹೊತ್ತೊಯ್ದಿದ್ದಾರೆ. ವ್ಯಾಪಾರ ಮುಗಿಸಿ ಮಂಗಳವಾರ ರಾತ್ರಿ ಅಂಗಡಿಗೆ ಬೀಗ ಹಾಕಿ ಹೋಗಿದ್ದ ಮಾಲೀಕರು, ಇಂದು ಬೆಳಗ್ಗೆ ಬಂದಾಗ ರೋಲಿಂಗ್ ಶೆಟರ್ ಮೀಟಿರುವುದು ಕಂಡಿತು. ಒಳ ಹೋಗಿ ನೋಡಿದಾಗ ಒಂದರಲ್ಲಿ 1000 ರೂ. ಹಾಗೂ ಮತ್ತೊಂದು ಅಂಗಡಿಯಲ್ಲಿ 1,500 ರೂ. ಹಣ ಕಳುವಾಗಿರುವುದು ತಿಳಿಯಿತು. ಅಂಗಡಿಯಲ್ಲಿದ್ದ ಲೇಖನ ಸಾಮಗ್ರಿ ಹಾಗೂ ಪ್ಲಾಸ್ಟಿಕ್ ಸಾಮಗ್ರಿಗಳನ್ನು ಮುಟ್ಟದ ಕಳ್ಳರು, ಕೇವಲ ನಗದು ಪೆಟ್ಟಿಗೆಯನ್ನು ಮಾತ್ರ ಶೋಧಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕೆ ತೆರಳಿದ ದೇವರಾಜ ಠಾಣೆ ಇನ್ಸ್‌ಪೆಕ್ಟರ್ ಶಿವಕುಮಾರ್, ಸಬ್ ಇನ್ಸ್ ಇನ್ಸ್‌ಪೆಕ್ಟರ್ ಪ್ರಭು ಹಾಗೂ ಸಿಬ್ಬಂದಿ ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಆದರೆ ಈ ಎರಡೂ ಅಂಗಡಿಗಳಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಲಾಗಿದೆಯಾದರೂ, ರಾತ್ರಿ ವ್ಯಾಪಾರ ಮುಗಿದ ಮೇಲೆ ಸಿಸಿಟಿವಿ ಕ್ಯಾಮೆರಾಗಳನ್ನು ಆಫ್ ಮಾಡಿ ಹೋಗಿರುವುದು ಮಹಜರ್ ಮಾಡುವ ಸಂದರ್ಭ ತಿಳಿದುಬಂದಿದೆ.

ಮೈಸೂರಿನಲ್ಲಿರುವ ಬಹುತೇಕ ಅಂಗಡಿಗಳಲ್ಲಿ ಹಗಲು ವೇಳೆ ಸಿಸಿಟಿವಿ ಕ್ಯಾಮರಾ ಆನ್ ಆಗಲಿದ್ದು, ರಾತ್ರಿ ಬೀಗ ಹಾಕುವಾಗ ಆಫ್ ಮಾಡಿ ಹೋಗುತ್ತಿರುವುದು ಕಂಡು ಬರುತ್ತಿದೆ. ರಾತ್ರಿ ವೇಳೆ ಯಾವುದೇ ಕಳ್ಳತನ, ಅಪರಾಧ ಪ್ರಕರಣಗಳ ಪತ್ತೆ ಹಾಗೂ ತಡೆಗಟ್ಟಲು ಸಿಸಿ ಕ್ಯಾಮರಾ ಅಳವಡಿಸಲಾಗುತ್ತದೆ. ಆದರೆ ಆ ವೇಳೆಯೇ ಕಾರ್ಯ ನಿರ್ವಹಿಸದಿದ್ದರೆ ಸಿಸಿಟಿವಿ ಅಳವಡಿಸಿ ಉಪಯೋಗವೇನು ಎಂದು ಪೊಲೀಸರು ಪ್ರಶ್ನಿಸಿದ್ದಾರೆ. ಪ್ರತಿಯೊಂದು ಅಂಗಡಿ–ಮುಂಗಟ್ಟು ವಾಣಿಜ್ಯ ಕೇಂದ್ರಗಳು, ಹೋಟೆಲ್, ಲಾಡ್ಜ್ ಹಾಗೂ ಇನ್ನಿತರ ಸಂಸ್ಥೆಗಳಲ್ಲಿ ತಪ್ಪದೇ ಸಿಸಿ ಟಿವಿ ಕ್ಯಾಮರಾ ಅಳವಡಿಸಿ, ಅವು ದಿನದ 24 ಗಂಟೆಯೂ ಕಾರ್ಯ ನಿರ್ವಹಿಸಬೇಕು. ಕನಿಷ್ಠ 3 ತಿಂಗಳ ಫುಟೇಜ್‌ಗಳನ್ನು ಸಂಗ್ರಹಿಸಿಡಲು ಸೂಕ್ತ ವ್ಯವಸ್ಥೆ ಮಾಡಬೇಕು ಎಂದು ದೇವರಾಜ ಠಾಣೆ ಸಬ್‌ಇನ್ಸ್‌ಪೆಕ್ಟರ್ ಪ್ರಭು ತಿಳಿಸಿದ್ದಾರೆ.



ಮೈಸೂರಿನ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನಲ್ಲಿ ಕೆಂಪೇಗೌಡರ ಜಯಂತಿ ಆಚರಿಸಲಾಯಿತು. ಈ ವೇಳೆ ಬ್ಯಾಂಕಿನ ಅಧ್ಯಕ್ಷ ಸಿ.ರೇವಣ್ಣ, ಉಪಾಧ್ಯಕ್ಷ ಹೆಚ್.ಹರೀಶ್‌ಕುಮಾರ್, ನಿರ್ದೇಶಕರಾದ ಎಸ್.ಬಿ.ಎಂ.ಮಂಜು, ಜೆ.ಯೋಗೇಶ್, ಕೆ.ಉಮಾಶಂಕರ್, ಎಸ್.ಸೋಮಣ್ಣ, ಎಸ್.ಅರವಿಂದ, ಎ.ಮಂಚಪ್ಪ, ಎಂ.ರಾಮಕೃಷ್ಣ, ಪಿ.ರಾಜೇಶ್ವರಿ, ಪಿ.ಸವಿತಾ, ವೃತ್ತಿಪರ ನಿರ್ದೇಶಕ ಸಿ.ಎಸ್.ರಾಮಕೃಷ್ಣಯ್ಯ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಹರ್ಷಿತ್‌ಗೌಡ ಮತ್ತು ಬ್ಯಾಂಕಿನ ಸಿಬ್ಬಂದಿ ಉಪಸ್ಥಿತರಿದ್ದರು.

ಮೈಸೂರು ನಗರಪಾಲಿಕೆಗೆ ವಿವಿಧ ಇಲಾಖೆಗಳಿಂದಲೇ 45 ಕೋಟಿ ನೀರಿನ ಶುಲ್ಕ ಬಾಕಿ ಬರಬೇಕಿದೆ

ಮೈಸೂರು,ಜೂ.28(ಜಿಎ)–ಮೈಸೂರು ಮಹಾನಗರಪಾಲಿಕೆಗೆ ವಿವಿಧ ಇಲಾಖೆಯಿಂದ ಬರೋಬ್ಬರಿ 45 ಕೋಟಿ ರೂ. ನೀರಿನ ಶುಲ್ಕ ಬಾಕಿಯಿದ್ದು, ಅದರಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ 24 ಕೋಟಿ ರೂ. ಬಾಕಿ ಬರಬೇಕಿದೆ.

ಪಾಲಿಕೆ ವ್ಯಾಪ್ತಿಯಲ್ಲಿ 1,678 ನೀರಿನ ಸಂಪರ್ಕಗಳಿದ್ದು, ಇದರಿಂದ 45,65,26,137 ರೂ. ಬಾಕಿ ಇದೆ. ಅದರಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ಬರೋಬ್ಬರಿ 24,83,76,256 ಸಂದಾಯವಾಗಬೇಕಿದೆ. 2022ರಲ್ಲಿ 55,73,10,966 ಕೋಟಿ ರೂ. ಬಾಕಿ ಉಳಿಸಿಕೊಂಡಿದ್ದ ಇಲಾಖೆಗಳು 2023ರ ಮೇ ತಿಂಗಳ ಅಂತ್ಯದೊಳಗೆ ವಿವಿಧ ಇಲಾಖೆಗಳು ಬಿಲ್ ಕಟ್ಟಿರುವ ಪರಿಣಾಮ ಬಾಕಿ ಮೊತ್ತ 45,65,26,137 ರೂ. ತಲುಪಿದ್ದು, 10,07,84,829 ಕೋಟಿ ರೂ. ಸಂಗ್ರಹವಾಗಿದೆ.




ಕೃಷಿ ಇಲಾಖೆ–32,256 ರೂ., ಎಟಿಐ–56,786 ರೂ., ಬ್ಯಾಂಕ್–5,05,889 ರೂ., ಚೆಸ್ಕಾಂ–72,68,109 ರೂ., ರಕ್ಷಣಾ–2,41,813 ರೂ., ವಸ್ತುಪ್ರದರ್ಶನ–6,25,803 ರೂ., ತೋಟಗಾರಿಕೆ–5,11,248 ರೂ., ರೈಲ್ವೆ–5,44,29,252 ರೂ., ಕಾರಾಗೃಹ–26,71,125 ರೂ., ಟೆಲಿಕಾಂ–4,07,677 ರೂ., ಪ್ರವಾಸೋದ್ಯಮ–1,05, 679 ರೂ., ಆರೋಗ್ಯ–1,13,21,531 ರೂ., ಶಿಕ್ಷಣ–1,32,40,639 ರೂ., ಪೊಲೀಸ್–5,59,13,892 ರೂ., ಎಸ್‌ಪಿ ಪೊಲೀಸ್–1,20,41,662 ರೂ., ಕ್ರೀಡೆ–1,29,136 ರೂ., ಸಮಾಜ ಕಲ್ಯಾಣ–4,04,437 ರೂ., ಸಣ್ಣ ಪ್ರಮಾಣದ ಉದ್ಯಮ–28,622 ರೂ., ಲೋಕೋಪಯೋಗಿ–17,67,780ರೂ., ಮೈಸೂರು ವಿವಿ–18,99,026 ರೂ., ಮುಡಾ–2,94, 735 ರೂ., ಕಾನೂನು–12,29,109 ರೂ., ಕೆಪಿಟಿಸಿಎಲ್–66,66,031 ರೂ., ಕುಚ್‌ಬಿ–3,02,972, ರೂ., ಅಗ್ನಿಶಾಮಕ ದಳ–1,43,016ರೂ., ಅಬಕಾರಿ–4,92,939 ರೂ. ಸೇರಿದಂತೆ ವಾಣಿಜ್ಯ ತೆರಿಗೆ, ಮೀನುಗಾರಿಕೆ, ಕೆಎಸ್‌ಆರ್‌ಟಿಸಿ, ಕೆಎಂಎಫ್, ರೇಡಿಯೋ, ರೇಸ್ ಕ್ಲಬ್, ಸ್ಕೌಟ್& ಗೈಡ್ಸ್, ಜಿಲ್ಲಾ ಪಂಚಾಯತ್, ಜಲ ಸಂಪನ್ಮೂಲ, ಎನ್‌ಸಿಸಿ, ವಿವಿ, ಕೈಗಾರಿಕೆ, ಅರಣ್ಯ ಇಲಾಖೆ ಸೇರಿದಂತೆ 45,65,26,137 ರೂ. ಬಾಕಿ ಇದೆ.

ಗಾಂಧಿನಗರ ಮಾರುಕಟ್ಟೆ ಪರಿಶೀಲಿಸಿದ ಸಚಿವ ಡಾ.ಹೆಚ್.ಸಿ.ಮಹದೇವಪ್ಪ



ಮೈಸೂರು,ಜೂ.28(ಆರ್‌ಕೆ)–ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮೈಸೂರಿನ ಗಾಂಧಿನಗರದ ಮಾರುಕಟ್ಟೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕಳೆದ ಹಲವು ವರ್ಷಗಳಿಂದ ಮಾರುಕಟ್ಟೆ ಕಟ್ಟಡ ಶಿಥಿಲಗೊಂಡು ವರ್ತಕರು ಮತ್ತು ಗ್ರಾಹಕರಿಗೆ ತೀವ್ರ ತೊಂದರೆಯಾಗುತ್ತದೆ ಎಂದು ಸ್ಥಳೀಯ ನಿವಾಸಿಗಳು ಪ್ರತಿಭಟನೆ ನಡೆಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಸ್ಥಳಕ್ಕೆ ಭೇಟಿ ನೀಡಿದ ಸಚಿವರು, ಆದ್ಯತೆ ಮೇಲೆ ಕ್ರಮ ಕೈಗೊಂಡು ಅಲ್ಲಿ ವ್ಯಾಪಾರಕ್ಕೆ ಅನುವು ಮಾಡಿಕೊಡುವಂತೆ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರಿಗೆ ತಿಳಿಸಿದರು. ನಂತರ ಗಾಂಧಿನಗರದ ರುದ್ರಭೂಮಿಗೂ ತೆರಳಿ ಪರಿಶೀಲಿಸಿದ ಸಚಿವರು, ಗಿಡ–ಗಂಟಿ ತೆರವುಗೊಳಿಸಿ ಸ್ವಚ್ಛಗೊಳಿಸುವುದಲ್ಲದೆ, ಮೂಲ ಸೌಲಭ್ಯದೊಂದಿಗೆ ಅಭಿವೃದ್ಧಿಗೊಳಿಸುವಂತೆಯೂ ಅಧಿಕಾರಿಗಳಿಗೆ ಡಾ.ಮಹದೇವಪ್ಪ ನಿರ್ದೇಶನ ನೀಡಿದರು. ಪಾಲಿಕೆ ಸದಸ್ಯೆ ಅಶ್ವಿನಿ ಶರತ್, ಮಾಜಿ ಸದಸ್ಯ ಆರ್.ಸಿದ್ದಪ್ಪ, ನಗರ ಕಾಂಗ್ರೆಸ್ ವಕ್ತಾರ ಎಸ್.ರಾಜೇಶ್, ಯೂತ್ ಕಾಂಗ್ರೆಸ್ ಕಾರ್ಯದರ್ಶಿ ನವೀದ್ ಪಾಷ, ಉದಯ ಕುಮಾರ್ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.6.2023 ಗುರುವಾರ, ಮಳೆ ನಕ್ಷತ್ರ: ಆರಿದ್ರಾ 22.06.2023 ರಿಂದ 7.07.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಸ್ವಾತಿ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

- **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ ಚಾರಿಟಬಲ್ ಟ್ರಸ್ಟ್:** 81ನೇ ಜಯಂತ್ಯುತ್ಸವ–2023, 19ನೇ ಬ್ರಹ್ಮರಥೋತ್ಸವ, ಬೆಳಗ್ಗೆ 8ಕ್ಕೆ ಅವಭೃತ ಸ್ನಾನ, ವಸಂತೋತ್ಸವ, ಪವಮಾನ ಹೋಮ, ಶ್ರೀ ಶಶಿಧರಶಾಸ್ತ್ರಿ ಅವರಿಂದ ಭಜನಾ ಕಾರ್ಯಕ್ರಮ, ಸ್ಥಳ: ಶ್ರೀಶಂಕರ ಪ್ರಾರ್ಥನಾ ಮಂದಿರ.
- **ಸೆಲೆಬ್ರಿಟಿ ಮೇಕಪ್ ಆರ್ಟಿಸ್ಟ್ ಸೋಮು ಹಾಸನ್ :** ಬ್ರೈಡಲ್ ಎಕ್ಸ್ಪೋ–2023, ಉದ್ಘಾಟನೆ : ಮೈಸೂರು ಜಿಲ್ಲಾ ಕೈಗಾರಿಕೆಗಳ ಕೇಂದ್ರದ ಜಂಟಿ ನಿರ್ದೇಶಕ ದಿನೇಶ್, ಮುಖ್ಯ ಅತಿಥಿಗಳು : ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಎಂಸಿಸಿಐ ಮಹಿಳಾ ಘಟಕದ ಅಧ್ಯಕ್ಷೆ ಟಿ.ಎ.ವಸಂತಕುಮಾರಿ, ಸ್ಥಳ: ಹೋಟೆಲ್ ಸಂದೇಶ್ ದಿ ಪ್ರಿನ್ಸ್, ನಜರ್‌ಬಾದ್, ಬೆಳಗ್ಗೆ 9.30ಕ್ಕೆ.
- **ಮೈಸೂರು ಶರಣ ಮಂಡಲಿ:** ಬಸವ ಜಯಂತಿ ಹಾಗೂ ಬಸವರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಸಮಾಜ ಕಲ್ಯಾಣ ಸಚಿವ ಡಾ.ಮಹದೇವಪ್ಪ, ಅಧ್ಯಕ್ಷತೆ: ಶಾಸಕ ಜಿ.ಟಿ.ದೇವೇಗೌಡ, ಪ್ರಶಸ್ತಿ ಪ್ರದಾನ: ಶಾಸಕ ಕೆ.ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ವಿಶೇಷ ಆಹ್ವಾನಿತರು: ಶಾಸಕ ಹೆಚ್.ಎಂ.ಗಣೇಶ್‌ಪ್ರಸಾದ್, ಸಿಎಂ ಜಂಟಿ ಕಾರ್ಯದರ್ಶಿ ಎಂ.ರಾಮಯ್ಯ, ಬಸವರತ್ನ ಪ್ರಶಸ್ತಿ ಪುರಸ್ಕೃತರು: ಕೆ.ಹೆಚ್.ನಂಜಪ್ಪ (ಪ್ರಗತಿಪರ ರೈತ), ಕೆ.ಶಿವಕುಮಾರ್ (ಪತ್ರಕರ್ತ), ಎ.ಪಿ.ನಾಗೇಶ್ (ಸಮಾಜ ಸೇವಕ), ಲಯನ್ ವೆಂಕಟೇಶ್ (ಸಂಘಟಕ), ವೈ.ವೀರಭದ್ರ (ಉದ್ಯಮಿ), ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 11ಕ್ಕೆ.
- **ಕಾಮಾಕ್ಷಿ ಆಸ್ಪತ್ರೆಗಳು :** ಸಂಸ್ಥಾಪಕರ ದಿನ ಮತ್ತು ಕಾಮಾಕ್ಷಿ ಆಸ್ಪತ್ರೆಯ 50ನೇ ವಾರ್ಷಿಕೋತ್ಸವ, ಗಣೇಶ ದೇವಸ್ಥಾನದಲ್ಲಿ ಪೂಜೆ, ಸಂಸ್ಥಾಪಕರಾದ ದಿವಂಗತ ಬಿ. ಮಾಧವ ಶೆಣೈ ಮತ್ತು ದಿವಂಗತರಾದ ಶ್ರೀಮತಿ ಸುಲೋಚನಾ ಮಾಧವ ಶೆಣೈ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಪಡೆದ ಆಸ್ಪತ್ರೆ ಸಿಬ್ಬಂದಿ ಮಕ್ಕಳಿಗೆ ವಿದ್ಯಾರ್ಥಿವೇತನ ವಿತರಣೆ, 25 ವರ್ಷ ಸೇವೆ ಸಲ್ಲಿಸಿದ ಸಿಬ್ಬಂದಿಗೆ ಸನ್ಮಾನ, ಸ್ಥಳ: ಆಸ್ಪತ್ರೆ ಸಭಾಂಗಣ, ಮಧ್ಯಾಹ್ನ 12ಕ್ಕೆ.
- **ಶ್ರೀರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪಂಡಿತ್ ಬೇ.ನಾ.ವಿಜಯೇಂದ್ರಾಚಾರ್ ಅವರಿಂದ ಮಹಾಭಾರತದ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 6.10ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಪದ ಸಂಸ್ಕೃತಿ, ಪ್ರಸ್ತುತಿ– ಸಂಗಮೇಶ್ ಸವದತ್ತಿ ಮಠ, 7.15 ಭಾವಗೀತೆ, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ– ಮೈಸೂರು ಉಮೇಶ್, 8.40ಪಂಪನ ಪೆಂಪು– ಪಂಪ ಭಾರತದ ನಾಟಕೀಯ ಸನ್ನಿವೇಶಗಳನ್ನಾಧರಿಸಿದ ಕಾರ್ಯಕ್ರಮ. ಪ್ರಸ್ತುತಿ– ಜಿ.ಶಾಂತಕುಮಾರ್, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00 ಎ.ವಿ. ಪ್ರಕಾಶ್–ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ– ರಾಧಾ ನಾಗರಾಜ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಕುರಿತ ಕಾರ್ಯಕ್ರಮ, 1.20 ಭಾವಗೀತೆ– ಜಿ.ಪುಷ್ಪಲತಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 4.00 ಜನಪದ ಸಂಗೀತ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.55 ಕೃಷಿರಂಗ–ಕಿಸಾನ್‌ವಾಣಿ–ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಎನ್.ರಂಗಸ್ವಾಮಿ ಅವರೊಂದಿಗೆ ಸಂದರ್ಶನ. ಸಂದರ್ಶಕರು ಎನ್.ಕೇಶವಮೂರ್ತಿ, 8.00 ಯುವವಾಣಿ–ಯುವಪ್ರತಿಭೆ–ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಸಂಶೋಧನಾ ವಿದ್ಯಾರ್ಥಿ ಹಾಗೂ ವೀಣಾವಾದಕ ಮೈಸೂರಿನ ಜೆ. ರಘುನಾಥ್ ಅವರೊಂದಿಗೆ ಮಾತುಕತೆ, 9.30 ಕನ್ನಡ ಭಾರತಿ, 10.00 ನಾಟಕ "ಮಹಾ ಕಲ್ಯಾಣ", ರಚನೆ–ಎಸ್.ವಿ.ಕೃಷ್ಣಶರ್ಮ, ನಿರ್ಮಾಣ–ಎಸ್.ಎಸ್.ಉಮೇಶ್, 10.30 ಸವಿನೆನಪು

- **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ದಿಗಂಬರ ಜೈನ ಸಮಾಜ, ಪದ್ಮಶ್ರೀ ಜೈನ ಮಹಿಳಾ ಸಮಾಜ:** ಆಷಾಢ ಮಾಸದ ನಂದೀಶ್ವರ ಅಷ್ಟಾಹ್ನಿಕ ಪರ್ವ, ಪದ್ಮಶ್ರೀ ಜೈನ ಮಹಿಳಾ ಸಮಾಜದ ಅಧ್ಯಕ್ಷೆ ಶ್ರೀಮತಿ ಲತಾ ಸುದರ್ಶನ್ ಅವರಿಂದ ವಿಷಯ: ಗಾಥ : 651 ರಿಂದ 675 ಕುರಿತು ಉಪನ್ಯಾಸ, ಸ್ಥಳ: ಶ್ರೀ ಶಾಂತೀಶ್ವರಸ್ವಾಮಿ ಬಸದಿ (ಕೋಟೆ ಬಸದಿ), ಸಂಜೆ 6.45ರಿಂದ.
- **ಕೋಟೆ ತ್ರಿನೇಶ್ವರ ದೇವಸ್ಥಾನ:** ಗಿರಿಜಾ ಕಲ್ಯಾಣ ಮಹೋತ್ಸವ, ಬೆಳಗ್ಗೆ ನಾಕ ಬಲಿ ಹೊಳಲು ಸುತ್ತುವುದು, ಅವಭೃತತೀರ್ಥ ಸ್ನಾನ, ರಾತ್ರಿ 8ಕ್ಕೆ ಹೂವಿನ ಪಲ್ಲಕ್ಕಿ ಉತ್ಸವ, ಪುದುವಟ್ಟು ಸೇವೆ, ಸ್ಥಳ: ದೇವಸ್ಥಾನ, ಕೋಟೆ ಆವರಣ.
- **ಶ್ರೀ ಕೃಷ್ಣ ಮಿತ್ರ ಮಂಡಳಿ, ಶ್ರೀ ಕೃಷ್ಣ ಟ್ರಸ್ಟ್ :** ಉಡುಪಿ ಶ್ರೀ ಪಲಿಮಾರು ಪೀಠಾಧಿಪತಿ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರಿಂದ ತಪ್ತ ಮುದ್ರಾಧಾರಣೆ, ಸ್ಥಳ: ಶ್ರೀಕೃಷ್ಣಧಾಮ, ಸಾಹುಕಾರ್ ಚೆನ್ನಯ್ಯ ರಸ್ತೆ, ಸರಸ್ವತಿಪುರಂ, ಮಧ್ಯಾಹ್ನ 12 ರಿಂದ ಹಾಗೂ ರಾತ್ರಿ 8 ರಿಂದ.
- **ಸಮತೆಂತೋ ರಂಗ ತಂಡ :** ಸಮತೆಂತೋ ರಂಗ ತಂಡದ ಕಲಾವಿದರಿಂದ ಸಾಹಿತಿ ಯು.ಆರ್. ಅನಂತಮೂರ್ತಿ ಅವರ ಕಾದಂಬರಿ ಆಧಾರಿತ 'ಅವಸ್ಥೆ' ನಾಟಕ ಪ್ರದರ್ಶನ, ನಿರ್ದೇಶನ : ಬಿ.ಎನ್. ಶಶಿಕಲಾ, ರಂಗರೂಪ: ಪ್ರಕಾಶ್ ಬೆಳವಾಡಿ, ಸಂಗೀತ : ಸುಬ್ರಹ್ಮಣ್ಯ ಮೈಸೂರು, ಸಹ ನಿರ್ದೇಶನ: ಜೀವನ್ ಕುಮಾರ್ ಬಿ.ಹೆಗೋಡು, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 7ಕ್ಕೆ.
- **ಶ್ರೀ ಗುರು ಕಲಾ ಶಾಲೆ:** ಎಚ್.ಎಸ್.ವೆಂಕಟೇಶ್‌ಮೂರ್ತಿ ಅವರ ಮಥನ ನಾಟಕ ಪ್ರದರ್ಶನ, ಸಂಗೀತ–ನಿರ್ದೇಶನ: ಹೆಚ್.ಎಸ್.ಕವಿತಾ ಧನಂಜಯ, ಸ್ಥಳ: ಕಿರುರಂಗ ಮಂದಿರ, ಸಂಜೆ 7ಕ್ಕೆ.

ಮೈಸೂರು ಮಿತ್ರ

ಮೈಸೂರು ರೈಲ್ವೆ ನಿಲ್ದಾಣದ ಹೊಸ ಟರ್ಮಿನಲ್ ಕಾಮಗಾರಿ ನವೆಂಬರ್‌ನಲ್ಲಿ ಆರಂಭ

ಮೈಸೂರು-ಕೊಡಗು ಸಂಸದ ಪ್ರತಾಪ್ ಸಿಂಹ ವಿವರಣೆ

● ಏರ್‌ಪೋರ್ಟ್ ಟರ್ಮಿನಲ್ ಮಾದರಿಯಲ್ಲಿ ನಿರ್ಮಾಣ; ಹೈಟೆಕ್ ಸ್ಪರ್ಶ ● 700 ಕೋಟಿ ರೂ. ವೆಚ್ಚದಲ್ಲಿ ಮೈಸೂರು ರೈಲ್ವೆ ನಿಲ್ದಾಣ ಅಭಿವೃದ್ಧಿ ● ಆಗಸ್ಟ್‌ನಲ್ಲಿ ನವೀಕೃತ ಅಶೋಕಪುರಂ ರೈಲು ನಿಲ್ದಾಣ ಉದ್ಘಾಟನೆ ● ಸೆಪ್ಟೆಂಬರ್‌ನಲ್ಲಿ ಮೈಸೂರು-ಕುಶಾಲನಗರ ರೈಲ್ವೆ ಯೋಜನೆ ಸರ್ವೆ ಕಾರ್ಯ ಆರಂಭ



ಮೈಸೂರಿನ ವಿಭಾಗೀಯ ರೈಲ್ವೆ ವ್ಯವಸ್ಥಾಪಕರ ಕಚೇರಿಯಲ್ಲಿ ನಡೆದ ಗತಿ ಶಕ್ತಿ ಯೋಜನೆ ಪರಿಶೀಲನಾ ಸಭೆಯಲ್ಲಿ ಸಂಸದ ಪ್ರತಾಪ್ ಸಿಂಹ ಮಾತನಾಡಿದರು. ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್, ಗತಿ ಶಕ್ತಿ ಯೋಜನೆಯ ಸಿಪಿಎಂ ವಿಷ್ಣು ಭೂಷಣ್ ಇತರರಿದ್ದಾರೆ.

ಮೈಸೂರು, ಜೂ.28(ಬಿಎಲ್‌ಯು)- ಮೈಸೂರು ರೈಲ್ವೆ ನಿಲ್ದಾಣದಲ್ಲಿ ನೂತನವಾಗಿ ನಿರ್ಮಾಣ ಮಾಡಲು ಉದ್ದೇಶಿಸಿರುವ 3ನೇ ಪ್ರವೇಶ ದ್ವಾರದ ಟರ್ಮಿನಲ್ ಕಾಮಗಾರಿ ನವೆಂಬರ್ ತಿಂಗಳಲ್ಲಿ ಆರಂಭವಾಗಲಿದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಮೈಸೂರಿನ ವಿಭಾಗೀಯ ರೈಲ್ವೆ ವ್ಯವಸ್ಥಾಪಕರ ಕಚೇರಿಯಲ್ಲಿ ಇಂದು ನಡೆದ ಗತಿ ಶಕ್ತಿ ಯೋಜನೆ ಪರಿಶೀಲನಾ ಸಭೆಯ ನಂತರ ಪ್ರತಾಪ್ ಸಿಂಹ ಈ ವಿಚಾರ ತಿಳಿಸಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ವಿಶ್ವ ಯೋಗ ದಿನಾಚರಣೆಯಲ್ಲಿ ಭಾಗವಹಿಸಲು ಮೈಸೂರಿಗೆ ಆಗಮಿಸಿದ್ದ ವೇಳೆ ಮೈಸೂರು ರೈಲ್ವೆ ನಿಲ್ದಾಣದಲ್ಲಿ 483 ಕೋಟಿ ರೂಪಾಯಿಗಳ ಗತಿ ಯೋಜನೆಗೆ ಭೂಮಿಪೂಜೆ ನೆರವೇರಿಸಿದ್ದರು. ಇದರಲ್ಲಿ 346 ಕೋಟಿ ರೂ. ಮೈಸೂರು ರೈಲ್ವೆ ನಿಲ್ದಾಣದ ಅಭಿವೃದ್ಧಿಗೆ ಮೀಸಲಿಡಲಾಗಿದೆ ಎಂದು ಹೇಳಿದರು.

ಏಪ್ರಿಲ್ 24ರಂದು ಗತಿ ಶಕ್ತಿ ಯೋಜನೆಯ ಟೆಂಡರ್ ಕರೆದಿದ್ದು, ಆಗಸ್ಟ್ 30ರಂದು ಟೆಕ್ನಿಕಲ್ ಬಿಡ್ ಓಪನ್ ಮಾಡಲಾಗುವುದು. ಈ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ನವೆಂಬರ್ ತಿಂಗಳಲ್ಲಿ ಯೋಜನೆಯ ಕಾಮಗಾರಿ ಆರಂಭಿಸಲಾಗುವುದು. 3 ವರ್ಷದ ಕಾಲಮಿತಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಲಾಗುವುದು ಎಂದು ಪ್ರತಾಪ್ ಸಿಂಹ ತಿಳಿಸಿದರು.

ಮೈಸೂರು ರೈಲ್ವೆ ನಿಲ್ದಾಣದಲ್ಲಿ ಈಗಾಗಲೇ ಎರಡು ಪ್ರವೇಶ ದ್ವಾರವಿದೆ. ಬೆಂಗಳೂರಿನ ಬೈಯ್ಯಪ್ಪನಹಳ್ಳಿ ಹಾಗೂ ಯಶವಂತಪುರ ಮಾದರಿಯಲ್ಲಿ ಮೈಸೂರು ರೈಲ್ವೆ ನಿಲ್ದಾಣದ ಮೂರನೇ ಹೊಸ ಪ್ರವೇಶ ದ್ವಾರದ ಟರ್ಮಿನಲ್ ಅನ್ನು ಏರ್‌ಪೋರ್ಟ್ ಟರ್ಮಿನಲ್‌ನಂತೆ ಹೈಟೆಕ್ ಆಗಿ ನಿರ್ಮಾಣ ಮಾಡಲಾಗುವುದು. ಶಾಪಿಂಗ್ ಮಾಲ್, ಕೆಫೆಟೇರಿಯಾ, ಸೂಪರ್ ಮಾರ್ಟ್ ಸೇರಿದಂತೆ ಆಧುನಿಕವಾದ ಹಲವು ಸೌಲಭ್ಯಗಳು ಹೊಸ ಟರ್ಮಿನಲ್‌ನಲ್ಲಿ ಇರುತ್ತವೆ. 483 ಕೋಟಿ ರೂ.ಗಳ ಗತಿ ಶಕ್ತಿ ಯೋಜನೆಯ ಜೊತೆಗೆ ಹೆಚ್ಚುವರಿಯಾಗಿ 200 ಕೋಟಿ ರೂ. ವೆಚ್ಚದಲ್ಲಿ ಮೈಸೂರು ರೈಲ್ವೆ ನಿಲ್ದಾಣವನ್ನು ಅಭಿವೃದ್ಧಿ ಮಾಡಲಾಗುವುದು. ಈ ಮೂಲಕ ಮೈಸೂರು ರೈಲ್ವೆ ನಿಲ್ದಾಣವನ್ನು ಸುಮಾರು 700 ಕೋಟಿ ರೂಪಾಯಿ ವೆಚ್ಚದಲ್ಲಿ ಅತ್ಯಾಕರ್ಷಕವಾಗಿ ಅಭಿವೃದ್ಧಿ ಮಾಡಲಾಗುವುದು ಎಂದು ಪ್ರತಾಪ್ ಸಿಂಹ ವಿವರಿಸಿದರು.

ನವೀಕರಣಗೊಳ್ಳುತ್ತಿರುವ ಮೈಸೂರಿನ ಅಶೋಕಪುರಂ ರೈಲ್ವೆ ನಿಲ್ದಾಣದ ಉದ್ಘಾಟನೆ ಆಗಸ್ಟ್ ಎರಡನೇ ವಾರದಲ್ಲಿ ನೆರವೇರಿಸಲಾಗುವುದು. ಇನ್ನು ಮುಂದೆ ವಿಶ್ವಮಾನವ ಎಕ್ಸ್‌ಪ್ರೆಸ್ ಸೇರಿದಂತೆ ಹಲವು ರೈಲುಗಳನ್ನು ಅಲ್ಲಿ ತನಕ ವಿಸ್ತರಣೆ ಮಾಡಲಾಗುವುದು. ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿ ರೈಲ್ವೆ ಓವರ್‌ಬ್ರಿಡ್ಜ್ ಹಾಗೂ ಕ್ರಾಫರ್ಡ್ ಹಾಲ್ ಬಳಿ ರೈಲ್ವೆ ಅಂಡರ್ ಪಾಸ್ ಮಾಡುವ ಕಾಮಗಾರಿ ಕೂಡ ಕೈಗೆತ್ತಿಕೊಳ್ಳಲಾಗುವುದು ಎಂದು ತಿಳಿಸಿದರು.

ಮೈಸೂರು ವಾರಣಾಸಿ ಎಕ್ಸ್‌ಪ್ರೆಸ್ ರೈಲು 4 ದಿನ ಮೈಸೂರು ರೈಲ್ವೆ ನಿಲ್ದಾಣದಲ್ಲಿ ಸುಮ್ಮನೆ ನಿಂತಿರುತ್ತದೆ. ಈ ಸಮಯದಲ್ಲಿ ಆ ರೈಲನ್ನು ತಮಿಳುನಾಡಿನ ರಾಮೇಶ್ವರದ ತನಕ ಸಂಚರಿಸುವ ಪ್ರಸ್ತಾವನೆಗೆ ರೈಲ್ವೆ ಮಂಡಳಿ ಅನುಮೋದನೆ ನೀಡಿದೆ. ಜೊತೆಗೆ ಚೆನ್ನೈ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ ರೈಲಿಗೆ ನಂದಿ ಎಕ್ಸ್‌ಪ್ರೆಸ್ ಎಂದು ನಾಮಕರಣ ಮಾಡುವ ಪ್ರಸ್ತಾವನೆಗೂ ಕೂಡ ರೈಲ್ವೆ ಅಭಿವೃದ್ಧಿ ಮಂಡಳಿ ಅನುಮತಿ ನೀಡಿದೆ ಎಂದು ಪ್ರತಾಪ್ ಸಿಂಹ ಹೇಳಿದರು.

ಮೈಸೂರು ಮತ್ತು ಬೆಂಗಳೂರು ನಡುವೆ ಸಂಚರಿಸುತ್ತಿರುವ ರೈಲು ಸಂಚಾರ ವಿಳಂಬವಾಗುತ್ತಿದೆ. ಈ ನಿಟ್ಟಿನಲ್ಲಿ ಕನಿಷ್ಠ ಎರಡು ಗಂಟೆಗಳ ಅವಧಿಯಲ್ಲಿ ಕೆಂಗೇರಿ ತಲುಪುವ ವ್ಯವಸ್ಥೆ ಮಾಡುವಂತೆ ಇಲಾಖೆ ಅಧಿಕಾರಿಗಳಿಗೆ ಮನವಿ ಮಾಡಿದ್ದೇನೆ ಎಂದರು.

ಮೈಸೂರು-ಕುಶಾಲನಗರ ರೈಲ್ವೆ ಯೋಜನೆಗೆ ಸರ್ವೆ ಕಾರ್ಯ ಸೆಪ್ಟಂಬರ್‌ನಲ್ಲಿ ಆರಂಭಿಸಲಾಗುವುದು. ಈ ಯೋಜನೆ ಜಾರಿಗೆ 550 ಹೆಕ್ಟೇರ್ ಭೂಮಿ ಅವಶ್ಯವಿದೆ. 1850 ಕೋಟಿ ರೂ.ಗಳ ಅಂದಾಜು ಯೋಜನಾ ವೆಚ್ಚ ಮಾಡಲಾಗಿದೆ. ಆದರೆ ಈ ವೆಚ್ಚ ಇನ್ನು ಹೆಚ್ಚಾಗುವ ಸಾಧ್ಯತೆ ಇದೆ ಎಂದರು.

ರೈಲ್ವೆ ಇಲಾಖೆಯ ಸಭೆಯಲ್ಲಿ ಗತಿ ಶಕ್ತಿ ಯೋಜನೆ ಸಂಬಂಧ ಅಧಿಕಾರಿಗಳು ಪವರ್ ಪಾಯಿಂಟ್ ಪ್ರಸೆಂಟೇಷನ್, ವಿಡಿಯೋ ಕಾನ್ಫರೆನ್ಸ್ ಮೂಲಕ ವಿವರಿಸಿದರು. ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್, ಗತಿ ಶಕ್ತಿ ಯೋಜನೆಯ ಸಿಪಿಎಂ ವಿಷ್ಣು ಭೂಷಣ್ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಹೊಸ ಟರ್ಮಿನಲ್ ಬಳಿ ಚಾಮರಾಜ ಒಡೆಯರ್ ಭವ್ಯ ಪ್ರತಿಮೆ ಸ್ಥಾಪನೆ

ಮೈಸೂರು, ಜೂ.28(ಬಿಎಲ್‌ಯು)-ಮೈಸೂರು ರೈಲ್ವೆ ನಿಲ್ದಾಣದಲ್ಲಿ ನಿರ್ಮಾಣ ಮಾಡುತ್ತಿರುವ ನೂತನ ಟರ್ಮಿನಲ್‌ನ 3ನೇ ಹೊಸ ಪ್ರವೇಶ ದ್ವಾರದ ಮಧ್ಯೆ ಚಾಮರಾಜ ಒಡೆಯರ್ ಅವರ ಭವ್ಯ ಪ್ರತಿಮೆ ಸ್ಥಾಪನೆ ಮಾಡುವಂತೆ ಸಂಸದ ಪ್ರತಾಪ್ ಸಿಂಹ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಮೈಸೂರಿನ ವಿಭಾಗೀಯ ರೈಲ್ವೆ ವ್ಯವಸ್ಥಾಪಕರ ಕಚೇರಿಯಲ್ಲಿ ಗತಿ ಯೋಜನೆಯ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಗೆ ಈ ಸೂಚನೆ ನೀಡಿದರು. ಮೈಸೂರಿನ ಅಂದಿನ ಮಹಾರಾಜ ಚಾಮರಾಜ ಒಡೆಯರ್ ಅವರು 1870ರಲ್ಲಿ ರೈಲ್ವೆ ನಿಲ್ದಾಣ ನಿರ್ಮಾಣ ಸ್ಥಾಪಿಸಿದರು. ಅವರ ಈ ಕೊಡುಗೆ ಸ್ಮರಿಸಿ ಅವರ ಪ್ರತಿಮೆ ನಿರ್ಮಾಣ ಮಾಡಬೇಕಿದೆ. 3ನೇ ಪ್ರವೇಶ ದ್ವಾರದಲ್ಲಿ ಭವ್ಯ ಪ್ರತಿಮೆ ನಿರ್ಮಾಣ ಮಾಡಲು ಡಿಪಿಆರ್‌ನಲ್ಲಿ ಸೇರ್ಪಡೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರು ನಾಮಕರಣ ಮಾಡುವ ಪ್ರಕ್ರಿಯೆ ಮುಂದುವರೆದಿದೆ ಎಂದು ಪ್ರತಾಪ್ ಸಿಂಹ ತಿಳಿಸಿದರು.

ಜು.1ರಿಂದ 7 ದಿನ ಯಶೋಧರಪುರದಲ್ಲಿ ಗಾಂಧಿ-ಯಶೋಧರಮ್ಮ ದಾಸಪ್ಪ ವ್ಯಕ್ತಿ ವಿಚಾರ ಕಾರ್ಯಕ್ರಮ



ಮೈಸೂರು, ಜೂ.28(ಎಂಟಿವೈ)- ಹುಣಸೂರು ತಾಲೂಕಿನ ಯಶೋಧರಪುರದಲ್ಲಿ ಜು.1ರಿಂದ 7ರವರೆಗೆ 'ಆರೋಗ್ಯಕರ ಸಮಾಜಕ್ಕಾಗಿ ಆರೋಗ್ಯಕರ ಯುವ ಜನತೆ' ಹಾಗೂ 'ಗಾಂಧಿ-ಯಶೋಧರಮ್ಮ ದಾಸಪ್ಪ ವ್ಯಕ್ತಿ ವಿಚಾರಗಳ ಪ್ರಸ್ತುತತೆ' ಕುರಿತು ಕಾರ್ಯಕ್ರಮ ರೂಪಿಸಲಾಗಿದೆ ಎಂದು ಮಾಜಿ ಶಾಸಕ ಹಾಗೂ ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆಯ ಅಧ್ಯಕ್ಷ ವಾಸು ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಭ್ಯ ರಾಜಕಾರಣಕ್ಕೆ ಹೆಸರುವಾಸಿಯಾದ ಹೆಚ್.ಸಿ.ದಾಸಪ್ಪ ಹಾಗೂ ಯಶೋಧರಮ್ಮ ಅವರ ಬಗ್ಗೆ ಯುವ ಪೀಳಿಗೆಗೆ ತಿಳಿಸುವ ಅಗತ್ಯವಿದೆ. ಇತ್ತೀಚಿನ ದಿನಗಳಲ್ಲಿ ಯುವ ಜನರಿಗೆ ಮೌಲ್ಯಗಳನ್ನು ಬಿತ್ತುವ ವ್ಯಕ್ತಿತ್ವಗಳ ಬಗ್ಗೆ ಪರಿಚಯ ಮಾಡಿಕೊಡುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಹುಣಸೂರು ಪಟ್ಟಣದ ಸಮೀಪವಿರುವ ಯಶೋಧರಪುರದಲ್ಲಿ ಯಶೋಧರಮ್ಮ ಅವರ ಕುರಿತಾದ ಕಾರ್ಯಕ್ರಮ ನಡೆಸಲು ಉದ್ದೇಶಿಸಲಾಗಿದೆ. ರಾಷ್ಟ್ರೀಯ ಸೇವಾ ಯೋಜನೆ, ವಿದ್ಯಾವರ್ಧಕ ಕಾನೂನು ಕಾಲೇಜು, ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ವೇದಿಕೆ, ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಿದ್ಯಾವಿಕಾಸ ಕಾನೂನು ಅಧ್ಯಯನ ಸಂಸ್ಥೆ, ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು ಹಾಗೂ ಕರ್ನಾಟಕ ಗಾಂಧಿಸ್ಮಾರಕ ನಿಧಿ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದಲ್ಲಿ ಏಳು ದಿನಗಳ ವಿವಿಧ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದರು.

ಜು.1ರಂದು ಸಂಜೆ 4ಕ್ಕೆ ಕಾರ್ಯಕ್ರಮವನ್ನು ನ್ಯಾಯಮೂರ್ತಿ ಕೆ.ಎಸ್.ಮುದಗಲ್ ಉದ್ಘಾಟಿಸಲಿದ್ದಾರೆ. ಜಿಲ್ಲಾ ಪ್ರಧಾನ ನ್ಯಾಯಾಧೀಶ ಜಿ.ಎಸ್.ಸಂಗ್ರೇಶಿ, ಯಶೋಧರಮ್ಮ ಅವರ ಭಾವಚಿತ್ರ ಅನಾವರಣಗೊಳಿಸಲಿದ್ದಾರೆ. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಯಶೋಧರಪುರ ಮಹಾದ್ವಾರಕ್ಕೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಮಾಜಿ ಶಾಸಕ ವಾಸು ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ಹುಬ್ಬಳ್ಳಿ ಕಾನೂನು ವಿವಿ ಕುಲಪತಿ ಡಾ.ಸಿ.ಬಸವರಾಜು, ಬೆಂಗಳೂರಿನ ಗಾಂಧಿ ಭವನದ ಅಧ್ಯಕ್ಷ ನಾಡೋಜ ಡಾ.ವೂಡೇ ಪಿ.ಕೃಷ್ಣ, ಡಿಸಿಎಫ್ ಸೀಮಾ, ಮಾಜಿ ಮೇಯರ್ ಪಿ.ವಿಶ್ವನಾಥ್, ನಿವೃತ್ತ ಹಿರಿಯ ಅಧಿಕಾರಿ ಎ.ಸಿ.ಲಕ್ಷ್ಮಣ್, ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆಯ ಕಾರ್ಯದರ್ಶಿ ಸರೋಜಮ್ಮ ತುಳಸಿದಾಸ್ ಸೇರಿದಂತೆ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಜು.6ರವರೆಗೆ ಸೇವಾಕಾರ್ಯ, ಉಪನ್ಯಾಸ ಸೇರಿದಂತೆ ವಿವಿಧ ಕಾರ್ಯಕ್ರಮ ಜರುಗಲಿದೆ. ಜು.7ರಂದು ಬೆಳಗ್ಗೆ 11 ಗಂಟೆಗೆ ಸಮಾರೋಪ ಸಮಾರಂಭ ಜರುಗಲಿದೆ. ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಡಾ.ವೈ.ಎನ್.ಸಿದ್ದೇಗೌಡ ಸಮಾರೋಪ ಭಾಷಣ ಮಾಡಲಿದ್ದಾರೆ ಎಂದರು. ಕರ್ನಾಟಕದ ಕಸ್ತೂರಬಾ ಎಂದೇ ಖ್ಯಾತರಾಗಿದ್ದ ಯಶೋಧರಮ್ಮ ದಾಸಪ್ಪ ಅವರು ಈ ಗ್ರಾಮದ ಅಭಿವೃದ್ಧಿಗಾಗಿ ಸಾಕಷ್ಟು ಕೊಡುಗೆ ನೀಡಿರುವುದು ಗಮನಕ್ಕೆ ಬಂದಿದೆ. ಹೀಗಾಗಿ ಸ್ಥಳೀಯರು ಸಹಾ ಅವರ ಬಗ್ಗೆ ಆಸಕ್ತಿ ಹೊಂದಿರುವುದು ಗಮನಿಸಿ, ಈ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಪಿ.ವಿಶ್ವನಾಥ್, ಪ್ರೊ.ಶಿವರಾಜು ಉಪಸ್ಥಿತರಿದ್ದರು.

ಟಿಕೆಟ್ ಕೊಟ್ಟರೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧೆ
ಮಾಜಿ ಶಾಸಕ ವಾಸು

ಮೈಸೂರು, ಜೂ.28 (ಎಂಟಿವೈ)- ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪಕ್ಷ ಟಿಕೆಟ್ ನೀಡಿದರೆ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುವುದಾಗಿ ಮಾಜಿ ಶಾಸಕ ವಾಸು ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ನಾನು ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿದ್ದೇನೆ. ನನ್ನ ರಾಜಕೀಯ ಜೀವನದಲ್ಲಿ ಎಂದಿಗೂ ಅಧಿಕಾರದ ಹಿಂದೆ ಬಿದ್ದವನಲ್ಲ. ಅಧಿಕಾರಕ್ಕಾಗಿ ಹಂಬಲಿಸಿದ ವ್ಯಕ್ತಿಯೂ ನಾನಲ್ಲ. ಹಾಗಾಗಿ ಟಿಕೆಟ್ ನೀಡಿ ಎಂದು ಕೇಳುವುದಿಲ್ಲ. ಒಂದು ವೇಳೆ ಪಕ್ಷ ಲೋಕಸಭಾ ಚುನಾವಣೆಯಲ್ಲಿ ನನಗೆ ಟಿಕೆಟ್ ನೀಡಿದರೆ, ಸ್ಪರ್ಧಿಸುತ್ತೇನೆ. ಇಲ್ಲದಿದ್ದರೆ ಸುಮ್ಮನಿರುತ್ತೇನೆ. ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಿಲ್ಲ ಎಂದರು.

ಸಣ್ಣ ಚಾಕಲೇಟ್ ಪಡೆಯುವುದಕ್ಕೂ ಜನ ಬಯಸುತ್ತಾರೆ. ಪರಿಸ್ಥಿತಿ ಹಾಗಿರುವಾಗ ಲೋಕಸಭಾ ಚುನಾವಣೆಯ ಟಿಕೆಟ್ ಆಕಾಂಕ್ಷಿಯಾಗುವುದರಲ್ಲಿ ತಪ್ಪೇನು? ಎಂದು ಪ್ರಶ್ನಿಸಿದರು. ನಾನು ಕಾಂಗ್ರೆಸ್‌ನ ಎಲ್ಲಾ ನಾಯಕರಿಗಿಂತಲೂ ಹೆಚ್ಚಿನ ತೃಪ್ತಿ ಹೊಂದಿದವನಾಗಿದ್ದಾನೆ. ಒಂದು ವೇಳೆ ನಾನು ಅತೃಪ್ತನಾಗಿದ್ದರೆ ಬೇರೆ ಪಕ್ಷಕ್ಕೆ ಹಾರಿ ಸಚಿವನೂ ಆಗಿರುತ್ತಿದ್ದೆ. ಹಾಗಾಗಿ ತೃಪ್ತಿ ಇರೋದರಿಂದಲೇ ಕಾಂಗ್ರೆಸ್‌ನಲ್ಲೇ ಉಳಿದುಕೊಂಡಿದ್ದೇನೆ ಎಂದರು.





ಬೆಂಗಳೂರಿನಲ್ಲಿ ಬುಧವಾರ ಮಾಜಿ ಶಾಸಕರಾದ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ಸಿಹಿ ತಿನಿಸುವ ಮೂಲಕ ಹುಟ್ಟುಹಬ್ಬದ ಶುಭಾಶಯಗಳನ್ನು ಮುಖಂಡರಾದ ರವಿ ಎನ್.ಗೌಡ, ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅನುಕುಮಾರ್‌ಗೌಡ ಹಂಗರಹಳ್ಳಿ, ಸಂತೋಷ್ ಇತರರು ಕೋರಿದರು. ಬಲಚಿತ್ರದಲ್ಲಿ ಕೆಪಿಸಿಸಿ ಓಬಿಸಿ ರಾಜ್ಯ ಕಾರ್ಯದರ್ಶಿ ಹರೀಶ್ ಮೊಗಣ್ಣ, ಮುಖಂಡರಾದ ಪೈ.ಬೀರೇಶ್, ಅನಿಲ್‌ಕುಮಾರ್, ಕಾರ್ತಿಕ ಇತರರು ಮಕ್ಕಳಿಗೆ ಸಿಹಿ ವಿತರಿಸುವ ಮೂಲಕ ಸಂಭ್ರಮಿಸಿದರು.

ಮೈಸೂರಲ್ಲಿ ಇಂದೋರ್ ಮಾದರಿ ಸ್ವಚ್ಛತೆಗೆ ನಗರಪಾಲಿಕೆ ನಿರ್ಧಾರ



ಮೈಸೂರು, ಜೂ.28 (ಆರ್‌ಕೆ)-ಇಂದೋರ್ ನಗರದ ಮಾದರಿಯಲ್ಲಿ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಸ್ವಚ್ಛತಾ ಕಾರ್ಯ ಕೈಗೊಳ್ಳಲು ಮೈಸೂರು ಮಹಾನಗರ ಪಾಲಿಕೆಯು ಮುಂದಾಗಿದೆ.

ಇತ್ತೀಚೆಗಷ್ಟೇ ಮೇಯರ್ ಶಿವಕುಮಾರ್ ನೇತೃತ್ವದಲ್ಲಿ ನಗರಪಾಲಿಕೆ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಇಂದೋರ್‌ಗೆ ತೆರಳಿ ಅಲ್ಲಿನ ಸ್ವಚ್ಛತಾ ಕ್ರಮದ ಬಗ್ಗೆ ವೀಕ್ಷಿಸಿ, ಅಧ್ಯಯನ ಮಾಡಿ ಹಿಂದಿರುಗಿದ್ದರು. ಅಲ್ಲಿನ ಸ್ವಚ್ಛತಾ ಕಾರ್ಯ ವಿಧಾನವನ್ನು ಮೈಸೂರು ನಗರದಲ್ಲಿ ಅನುಷ್ಠಾನಗೊಳಿಸುವ ಸಂಬಂಧ ಬುಧವಾರ ಪಾಲಿಕೆ ಕಚೇರಿಯ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಮೇಯರ್ ಶಿವಕುಮಾರ್ ವಿವಿಧ ಸ್ಥಾಯಿ ಸಮಿತಿ ಅಧ್ಯಕ್ಷರು, ಕಾರ್ಪೊರೇಟರ್‌ಗಳು ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಸುದೀರ್ಘ ಚರ್ಚೆ ನಡೆಸಿದರು.

ಸ್ವಚ್ಛತೆಗೆ ವೈಜ್ಞಾನಿಕ ವಿಧಾನ ಅನುಸರಿಸಿ ಪರಿಣಾಮಕಾರಿಯಾಗಿ ಜಾರಿಗೊಳಿಸುತ್ತಿರುವುದರಿಂದ ಇಂದೋರ್ ನಗರ ಸ್ವಚ್ಛವಾಗಿದ್ದು, ಅದೇ ಕಾರಣಕ್ಕೆ ಆ ನಗರವು ನಿರಂತರವಾಗಿ ಸ್ವಚ್ಛತಾ ಸರ್ವೇಕ್ಷಣೆಯಲ್ಲಿ ಇಂದೋರ್ ಪ್ರಥಮ ಸ್ಥಾನ ಗಳಿಸುತ್ತಿದೆ ಎಂದು ಶಿವಕುಮಾರ್ ತಿಳಿಸಿದರು.

ಇಂದೋರ್‌ನಲ್ಲಿ ಅನುಷ್ಠಾನಗೊಳಿಸಿರುವಂತೆ ಮೈಸೂರಲ್ಲಿ ಹಸಿ ಕಸ ಮತ್ತು ಒಣ ಕಸವನ್ನು ವಿಂಗಡಿಸಿ ಮನೆ-ಮನೆಯಿಂದ ಸಂಗ್ರಹಿಸುವುದು, ಪ್ಲಾಸ್ಟಿಕ್ ನಿಷೇಧ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿ ಮಾರಾಟ, ಶೇಖರಣೆ ಹಾಗೂ ಬಳಕೆ ಮಾಡದಂತೆ ಕ್ರಮ ವಹಿಸುವುದು, ಸೆಕೆಂಡರಿ ಪಾಯಿಂಟ್‌ಗಳಲ್ಲಿ ಕಸ ಬಿಸಾಡದಂತೆ ಎಚ್ಚರ ವಹಿಸಬೇಕೆಂದೂ ಇಂದೋರ್ ಪ್ರವಾಸ ಮುಗಿಸಿ ಬಂದ ಕಾರ್ಪೊರೇಟರ್‌ಗಳು ಸಭೆಯಲ್ಲಿ ಸಲಹೆ ನೀಡಿದರು.

ನಿತ್ಯ ಒಂದು ಬಾರಿಗೆ ಬದಲು ಎರಡು ಬಾರಿ ನಗರ ಸ್ವಚ್ಛಗೊಳಿಸಿ, ಅಗತ್ಯ ಬಿದ್ದರೆ ವಾಣಿಜ್ಯ ಪ್ರದೇಶಗಳಲ್ಲಿ ದಿನಕ್ಕೆ 3 ಬಾರಿ ಕಸ ಗುಡಿಸಿ ಸಂಗ್ರಹವಾದ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವುದು, ಅದಕ್ಕಾಗಿ ಅಗತ್ಯವಿರುವ ಹೆಚ್ಚುವರಿ ಪೌರಕಾರ್ಮಿಕರ ನೇಮಕ, ಕಟ್ಟಡ ನಿರ್ಮಾಣ ಮತ್ತು ನೆಲಸಮಗೊಳಿಸಿದಾಗ ಉತ್ಪತ್ತಿಯಾಗುವ ತ್ಯಾಜ್ಯ ವಿಲೇವಾರಿ ಮತ್ತು ರೀಸೈಕಲ್ ಮಾಡಿ ಬಯೋಗ್ಯಾಸ್ ಉತ್ಪಾದಿಸಿ ವಾಹನಗಳಿಗೆ ಇಂಧನವಾಗಿ ಬಳಸಲು ಮಾರಾಟ ಮಾಡಿ ಆದಾಯ ಕ್ರೋಢೀಕರಿಸಬೇಕೆಂದು ನಗರಪಾಲಿಕೆ ಸದಸ್ಯರು ತಿಳಿಸಿದರು.

> ಹಸಿ-ಒಣ ಕಸ ವಿಂಗಡಣೆ, ಪ್ಲಾಸ್ಟಿಕ್ ಬಳಕೆ ನಿಷೇಧ, ಕಟ್ಟಡ ತ್ಯಾಜ್ಯ ವಿಲೇವಾರಿ, ದಿನದಲ್ಲಿ ಎರಡು ಬಾರಿ ಸ್ವಚ್ಛತೆ, ಜನ ಜಾಗೃತಿ, ಫುಟ್‌ಪಾತ್ ನಿರ್ವಹಣೆ, ವೇಸ್ಟ್‌ನಿಂದ ಬಯೋಗ್ಯಾಸ್ ಉತ್ಪತ್ತಿ, ಕಸ ಸಂಗ್ರಹ ವಾಹನಗಳ ಮೇಲೆ ನಿಗಾ, ಸ್ವಚ್ಛತೆಗೆ ಹೆಚ್ಚುವರಿ ಪೌರಕಾರ್ಮಿಕರ ನೇಮಕ ಮಾಡಲು ಮುಂದಾಗಿರುವ ಮೈಸೂರು ಮಹಾನಗರಪಾಲಿಕೆ.

ಮನೆ-ಮನೆಯಿಂದ ಕಸ ಸಂಗ್ರಹಿಸಿ ಸಾಗಣೆ ಮಾಡುವ ವಾಹನಗಳ ಜಿಪಿಎಸ್ ಕಾರ್ಯ ಕಾರ್ಯ ನಿರ್ವಹಿಸುವಂತೆ ಕ್ರಮ ವಹಿಸಿ ನಿಗದಿತ ಸಮಯದೊಳಗೆ ನಿಯೋಜಿಸಿದ ರಸ್ತೆ, ಬಡಾವಣೆಯಲ್ಲಿ ಸಿಬ್ಬಂದಿಗಳು ಕೆಲಸ ನಿರ್ವಹಿಸುತ್ತಿವೆಯೇ ಎಂಬುದನ್ನು ಅಧಿಕಾರಿಗಳು ನಿಗಾ ವಹಿಸಿ ಕ್ರಮ ವಹಿಸಬೇಕೆಂದು ಅವರು ತಿಳಿಸಿದರು.

ಫುಟ್‌ಪಾತ್ ನಿರ್ವಹಣೆ, ರಸ್ತೆ ಬದಿ ಗಿಡ ನೆಡುವುದು, ಸಾರ್ವಜನಿಕರಿಗೆ ಹಸಿರೀಕರಣ ಮತ್ತು ಸ್ವಚ್ಛತೆ ಬಗ್ಗೆ ಅರಿವು ಮೂಡಿಸಿ ಎಲ್ಲೆಂದರಲ್ಲಿ ಕಸ ಬಿಸಾಡದಂತೆ ನೋಡಿಕೊಂಡು ಅಂಗಡಿ-ಮುಂಗಟ್ಟು, ಟೀ ಶಾಪ್‌ಗಳಲ್ಲಿ, ಮಾಂಸದಂಗಡಿ ಬಳಿ ಸ್ವಚ್ಛವಾಗಿರಿಸುವಂತೆ ಪಾಲಿಕೆ ಅಧಿಕಾರಿಗಳು ಎಚ್ಚರ ವಹಿಸಿದರೆ ಮಾತ್ರ ಮೈಸೂರು ನಗರಕ್ಕೂ ಸ್ವಚ್ಛತೆಯಲ್ಲಿ ಪ್ರಶಸ್ತಿ ಬರಲು ಸಾಧ್ಯ ಎಂದು ನಗರ ಪಾಲಿಕೆ ಸದಸ್ಯರು ಸಲಹೆ ನೀಡಿದರು.

32 ಲಕ್ಷ ಜನಸಂಖ್ಯೆ ಇರುವ ಇಂದೋರ್‌ನಲ್ಲಿ 10 ಸಾವಿರ ಮಂದಿ ಪೌರಕಾರ್ಮಿಕರು ನಗರ ಸ್ವಚ್ಛತಾ ಕಾರ್ಯದಲ್ಲಿ ನಿರತರಾಗಿದ್ದು, ಪ್ರತೀ ದಿನ 2 ಪಾಳಿಯಲ್ಲಿ ಸ್ವಚ್ಛಗೊಳಿಸುತ್ತಾರೆ. ಆದರೆ 15 ಲಕ್ಷ ಜನಸಂಖ್ಯೆ ಇರುವ ಮೈಸೂರಲ್ಲಿ ಕೇವಲ 2,000 ಮಂದಿ ಪೌರಕಾರ್ಮಿಕರಿದ್ದಾರೆ. ಅಗತ್ಯವಿರುವ ಹೆಚ್ಚುವರಿ ಪೌರಕಾರ್ಮಿಕರನ್ನು ನೇಮಿಸಿಕೊಳ್ಳಲು ಹಣಕಾಸಿನ ಸಂಪನ್ಮೂಲಬೇಕು ಎಂದು ಮೇಯರ್ ಶಿವಕುಮಾರ್ ಸಭೆಗೆ ವಿವರಿಸಿದರು.

ಕೊರತೆ ಇರುವ ಸಿಬ್ಬಂದಿಯನ್ನು ನೇಮಿಸಿಕೊಳ್ಳಲು 5 ಕೋಟಿ ರೂ. ಅನುದಾನ ಅಗತ್ಯವಿದ್ದು, ಇಂದೋರ್ ಮಾದರಿ ಸ್ವಚ್ಛತಾ ವಿಧಾನ ಅನುಸರಿಸಲು ಹೆಚ್ಚುವರಿ ಪೌರ ಕಾರ್ಮಿಕರ ನೇಮಿಸಲು ಅನುಮತಿ ನೀಡಬೇಕು ಎಂದು ಮುಖ್ಯಮಂತ್ರಿ ಬಳಿ ನಿಯೋಗ ತೆರಳಿ, ಮನವಿ ಮಾಡುವುದಾಗಿಯೂ ತಿಳಿಸಿದರು. ಮುಂದಿನ ಪಾಲಿಕೆ ಕೌನ್ಸಿಲ್ ಸಭೆ ಮುಂದೆ ವಿಷಯ ಮಂಡಿಸಿ ಚರ್ಚಿಸಿ ನಿರ್ಣಯ ಕೈಗೊಂಡು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಮೇಯರ್ ತಿಳಿಸಿದರು. ಪಾಲಿಕೆ ಆಯುಕ್ತ ಜಿ.ಲಕ್ಷ್ಮಿಕಾಂತ ರೆಡ್ಡಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್, ಹಿರಿಯ ಆರೋಗ್ಯಾಧಿಕಾರಿ ಡಾ. ಡಿ.ಜಿ.ನಾಗರಾಜ್, ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು, ಪರಿಸರ ಇಂಜಿನಿಯರ್‌ಗಳು ಸಭೆಯಲ್ಲಿ ಹಾಜರಿದ್ದರು. ವಿವಿಧ ಸ್ಥಾಯಿ ಸಮಿತಿ ಅಧ್ಯಕ್ಷರಾದ ಆರ್.ನಾಗರಾಜು, ಸವಿತಾ ಸುರೇಶ್, ಶಾಂತಕುಮಾರಿ, ಮಾಜಿ ಮೇಯರ್‌ಗಳಾದ ಅಯೂಬ್ ಖಾನ್, ಆರಿಫ್ ಹುಸೇನ್, ಮಾಜಿ ಉಪ ಮೇಯರ್ ಅನ್ವರ್ ಬೇಗ್, ಕಾರ್ಪೊರೇಟರ್‌ಗಳಾದ ಪ್ರೇಮಾ ಶಂಕರೇಗೌಡ, ಕೆ.ವಿ.ಶ್ರೀಧರ್, ಶಾಂತಕುಮಾರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

> ಮಳೆಗಾಲ ಆರಂಭವಾಗಿದೆ. ಈಗಾಗಲೇ ರಸ್ತೆಗಳಲ್ಲಿ ಹಳ್ಳ-ಕೊಳ್ಳ, ಹೊಂಡಗಳಾಗಿವೆ. ಮಳೆ ಬಂದರೆ, ನೀರು ನಿಂತು ಅಪಾಯದ ಹೊಂಡಗಳಾಗುತ್ತವೆ ಎಂಬುದರ ಅರಿವು ಪಾಲಿಕೆಗಿರಲಿ. ಜನರ ಸುರಕ್ಷತೆ ಬಗ್ಗೆ ಮೊದಲ ಆದ್ಯತೆ ನೀಡಬೇಕಿದ್ದ ಪಾಲಿಕೆ ಆಡಳಿತ, ಅದರ ಬಗ್ಗೆ ಗಮನವನ್ನೇ ಹರಿಸುತ್ತಿಲ್ಲ. ಉದಾಹರಣೆ ಒಂದನ್ನು ನೀಡುವುದೇ ಆದರೆ ಬನ್ನಿಮಂಟಪ ಜೋಡಿ ತೆಂಗಿನಮರ ಸ್ಮಶಾನ ರಸ್ತೆ ಅಪಾಯದ ಹಾದಿಯಾಗಿರುವ ಸಂಬಂಧ ಸಾರ್ವಜನಿಕರಿಂದ ದೂರುಗಳ ಸುರಿಮಳೆ ಇದ್ದರೂ ಇತ್ತ ಗಮನವನ್ನೇ ಹರಿಸಿಲ್ಲ. ಇದರಂತೆ ಮೈಸೂರಲ್ಲಿ ಹಲವು ರಸ್ತೆಗಳು ಹಾಳಾಗಿವೆ. ಅವುಗಳ ಸುಧಾರಿಸಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಬೇಕಿದೆ.

ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಅಗತ್ಯ ಕ್ರಮ

ಮೈಸೂರು, ಜೂ.28(ಆರ್‌ಕೆ)-ಮಳೆ ಬಾರದೇ ಜಲಾಶಯಗಳ ನೀರಿನ ಮಟ್ಟ ಕುಸಿದು ಮೈಸೂರು ನಗರಕ್ಕೆ ಕುಡಿಯುವ ನೀರಿಗೆ ಸಮಸ್ಯೆ ಎದುರಾಗದಂತೆ ಮುಂಜಾಗ್ರತಾ ಕ್ರಮ ವಹಿಸಲಾಗುವುದು ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ಈಗಿನಿಂದಲೇ ನದಿ ಮೂಲಗಳಿಂದ ನೀರು ಪೂರೈಸುತ್ತಿರುವ ಪಂಪಿಂಗ್ ಸ್ಟೇಷನ್‌ಗಳ ಸ್ಥಿತಿ-ಗತಿ, ಒಂದು ವೇಳೆ ಜಲಾಶಯಗಳಲ್ಲಿ ನೀರಿನ ಮಟ್ಟ ಕುಸಿದರೆ ಡೆಡ್ ಸ್ಟೋರೇಜ್‌ನಿಂದ ನೀರೆತ್ತುವ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಸಂಗ್ರಹಿಸಲಾಗುತ್ತಿದ್ದು, ಮುಂಜಾಗ್ರತೆ ವಹಿಸಲು ಸೂಚಿಸಲಾಗಿದೆ ಎಂದ ಅವರು, ಅಂತಹ ಪರಿಸ್ಥಿತಿ ಎದುರಾದಲ್ಲಿ ನಿತ್ಯದ ಬದಲು ದಿನ ಬಿಟ್ಟು ದಿನ ನೀರು ಪೂರೈಸುವ ಬಗ್ಗೆಯೂ ಚಿಂತನೆ ನಡೆಸಲಾಗಿದೆ ಎಂದರು. ಪರಿಸ್ಥಿತಿ ಅರ್ಥ ಮಾಡಿಕೊಂಡು ಸಾರ್ವಜನಿಕರೂ ಮಿತವಾಗಿ ನೀರನ್ನು ಬಳಸಬೇಕು. ಅನಗತ್ಯವಾಗಿ ನೀರನ್ನು ಪೋಲು ಮಾಡಬಾರದೆಂದು ಶಿವಕುಮಾರ್ ಮನವಿ ಮಾಡಿದ್ದಾರೆ.

ಪತ್ರಕರ್ತರ ಕುಟುಂಬಕ್ಕೂ ಆರೋಗ್ಯ ನೆರವಿಗೆ ಮನವಿ



ಮೈಸೂರು, ಜೂ.28(ಎಂಕೆ)- ಮೈಸೂರು ಮಹಾನಗರ ಪಾಲಿಕೆಯಲ್ಲಿ ಪತ್ರಕರ್ತರ ಸಂಘದ ಸದಸ್ಯರಿಗೆ ಸ್ಥಾಪಿಸಿರುವ 50 ಲಕ್ಷ ರೂ.ಗಳ ಆರೋಗ್ಯ ಸಹಾಯ ನಿಧಿಯನ್ನು ಪತ್ರಕರ್ತರ ಕುಟುಂಬ ಸದಸ್ಯರಿಗೂ ವಿಸ್ತರಿಸುವಂತೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಬುಧವಾರ ಮನವಿ ಸಲ್ಲಿಸಲಾಯಿತು.

ಪತ್ರಕರ್ತರ ಸಂಘದ ಸದಸ್ಯರ ಚಿಕಿತ್ಸೆಗಾಗಿ ಸಹಾಯಧನ ನೀಡಲು ಪ್ರಸಕ್ತ ಸಾಲಿನಲ್ಲಿ ಸಹಾಯ ನಿಧಿಯನ್ನು 25 ಲಕ್ಷ ರೂ.ಗಳಿಂದ 50 ಲಕ್ಷಕ್ಕೆ ಹೆಚ್ಚಳ ಮಾಡಿರುವ ಹಿನ್ನೆಲೆಯಲ್ಲಿ ಸಹಾಯಧನದ ಸೌಲಭ್ಯವನ್ನು ಪತ್ರಕರ್ತರ ಕುಟುಂಬ ಸದಸ್ಯರಿಗೂ ವಿಸ್ತರಿಸುವಂತೆ ಮೇಯರ್ ಶಿವಕುಮಾರ್, ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ ಹಾಗೂ ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷ ಆರ್.ನಾಗರಾಜ್ ಅವರಿಗೆ ಮನವಿ ಸಲ್ಲಿಸಲಾಯಿತು. ಮನವಿಗೆ ಸ್ಪಂದಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಕಾರ್ಯಕಾರಿ ಸಮಿತಿ ಸದಸ್ಯ ಎ.ಕೃಷ್ಣ ಜಿ.ರಾವ್ ಇನ್ನಿತರರು ಉಪಸ್ಥಿತರಿದ್ದರು.

ಆ.2, ಸಾಲೂರು ಮಠದಲ್ಲಿ ಮಹದೇಶ್ವರರ ಗುಡ್ಡಪ್ಪ, ನೀಲಗಾರರ ಸಮಾವೇಶ

ಮೈಸೂರು,ಜೂ.28(ಎಂಟಿವೈ)- ದಕ್ಷಿಣ ಭಾರತದ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಶ್ರೀ ಮಲೆ ಮಹದೇಶ್ವರ ಸ್ವಾಮಿ ಬೆಟ್ಟದ ಸಾಲೂರು ಬೃಹನ್ಮಠದ ಆವರಣದಲ್ಲಿ ಆ.2ರಂದು ಮಲೆ ಮಹದೇಶ್ವರ ಸ್ವಾಮಿಯ ದೀಕ್ಷಕ ತಮ್ಮಡಿಗಳು, ಗುಡ್ಡಪ್ಪ ಹಾಗೂ ನೀಲಗಾರರ ಬೃಹತ್ ಸಮಾವೇಶ ಆಯೋಜಿಸಲಾಗಿದೆ. ಇದೇ ಮೊದಲ ಬಾರಿಗೆ ಐತಿಹಾಸಿಕ ಕಾರ್ಯಕ್ರಮದ ಮೂಲಕ ಶ್ರೀ ಮಹದೇಶ್ವರ ಸ್ವಾಮಿಯವರ ಶರಣ ಪರಂಪರೆಯ ಆಚರಣೆಗಳು ಮತ್ತು ಧಾರ್ಮಿಕ ವಿಚಾರಗಳ ಬಗ್ಗೆ ಅರಿವು ಮೂಡಿಸುವ ಪ್ರಯತ್ನ ನಡೆಯುತ್ತಿದೆ. 12ನೇ ಶತಮಾನದಲ್ಲಿ ಉತ್ತರ ದೇಶದಲ್ಲಿ ಅವತರಿಸಿ, ದಕ್ಷಿಣ ಭಾಗದಲ್ಲಿ ಅಟ್ಟಹಾಸದಿಂದ ಮೆರೆಯುತ್ತಿದ್ದ ಶ್ರವಣಾಸುರನ ಸಂಹಾರ ಮಾಡಿ, ಈ ಭಾಗದ ಜನರ ಶ್ರೇಯೋಭಿವೃದ್ಧಿಗಾಗಿ ಕಂಸಾಳೆ ನಾದ ನುಡಿಸಿಕೊಂಡು, ವ್ಯಾಘ್ರರೂಢರಾಗಿ ಕಾಡಿನ ಮುಗ್ಧ ಜನರ ಸಂಕಷ್ಟಗಳನ್ನು ನಿವಾರಿಸಿದ್ದರು. ಅವರನ್ನೆಲ್ಲ ತನ್ನೊಕ್ಕಲು ಮಾಡಿಕೊಂಡು 77 ಮಲೆ ಕೈಲಾಸದಲ್ಲಿ ಲಿಂಗರೂಪಿಯಾಗಿ ನೆಲೆಗೊಂಡಿರುವ ಮಲೆ ಮಹದೇಶ್ವರಸ್ವಾಮಿಯವರ ಮಹಿಮೆ ಅಪಾರವಾದದ್ದು, ಈ ಸಂದೇಶವನ್ನು ಪಸರಿಸುವ ನಿಟ್ಟಿನಲ್ಲಿ ಸಮಾವೇಶ ನಡೆಸಲು ನಿರ್ಧರಿಸಲಾಗಿದೆ. ಸಾಲೂರು ಬೃಹನ್ಮಠದ ಪೀಠಾಧ್ಯಕ್ಷರಾದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಜಿ ದಿವ್ಯ ಸಾನ್ನಿಧ್ಯದಲ್ಲಿ ಸಮಾವೇಶ ನಡೆಯಲಿದ್ದು, ವಿವಿಧೆಡೆ ಗುಡ್ಡಪ್ಪಂದಿರು ಹಾಗೂ ನೀಲಗಾರರು ಸೇರಿ, ಶರಣ ಪರಂಪರೆಯನ್ನು ಹಾಗೂ ಸಾಂಪ್ರದಾಯಿಕ ಆಚರಣೆಗಳನ್ನು ಪಸರಿಸಬೇಕು ಎಂಬ ಅಭಿಲಾಷೆಯಿಂದ ಸಮಾವೇಶ ನಡೆಸಲಾಗುತ್ತಿದೆ. ನಶಿಸುತ್ತಿರುವ ಗುರು ಶಿಷ್ಯ ಪರಂಪರೆಯ ಪುನರುತ್ಥಾನಕ್ಕಾಗಿ, ದೇವರ ಗುಡ್ಡಪ್ಪಂದಿರ ಮೂಲ ಸಂಪ್ರದಾಯಗಳ ಆಚರಣೆಗಳ ಉಳಿವಿಗಾಗಿ ಸಮಾವೇಶ ನಡೆಸಲು ಉದ್ದೇಶಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಆನಂದ 919880174358, ನಾಗರಾಜು 9036453121, ಬಂಡಳ್ಳಿ ಚೇತನ್ 9844584406, ನಾಗೇಂದ್ರ ಎಂ.ಬೆಟ್ಟ 9877733071, ಎಸ್.ಜೆ.ಹೇಮಂತ್ 9663716261, ಸಿದ್ದು 9740935039 ಇವರನ್ನು ಸಂಪರ್ಕಿಸಬಹುದಾಗಿದೆ.







ಸಿದ್ದಲಿಂಗಪುರ ಜಿಲ್ಲಾ ಪಂಚಾಯಿತಿ ಉಸ್ತುವಾರಿ ಹಾಗೂ ಎಂಸಿಡಿಸಿಸಿ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ಮಂಜುಗೌಡ ಅವರ ಹುಟ್ಟುಹಬ್ಬವನ್ನು ವಕೀಲರು ಹಾಗೂ ಗ್ರಾಪಂ ಸದಸ್ಯರಾದ ಕೆ.ಜೆ.ಮಾದೇಶ್ ನೇತೃತ್ವದಲ್ಲಿ ಆಚರಿಸಲಾಯಿತು. ಈ ವೇಳೆ ಕೃಷಿ ಪತ್ತಿನ ಅಧ್ಯಕ್ಷ ನಾರಾಯಣಪ್ಪ, ಶಿವರಾಜ್ ಫ್ರೆಂಡ್ಸ್ ಮತ್ತು ಕಾಮನಕೆರೆಹುಂಡಿ ಮುಖಂಡರು ಉಪಸ್ಥಿತರಿದ್ದರು. (ಮಧ್ಯಚಿತ್ರ) ಮಂಜುಗೌಡರನ್ನು ಯಜಮಾನ್ ರಾಮಚಂದ್ರ, ಟಿಎಪಿಸಿಎಂಎಸ್ ಸದಸ್ಯ ಪ್ರಕಾಶ್, ಮಹದೇಶ್ವರ ಟ್ರಸ್ಟ್ ಅಧ್ಯಕ್ಷ ಪುರುಷೋತ್ತಮ್, ಶಿವರಾಜು ಕಾಮನಕೆರೆಹುಂಡಿ, ಮೂರ್ತಿ, ದೇವರಾಜು ಮತ್ತು ಕಾಮನಕೆರೆ ಹುಂಡಿ ಯುವಕರು ಅಭಿನಂದಿಸಿದರು. ರಮ್ಮನಹಳ್ಳಿ ಗ್ರಾಮದ ವತಿಯಿಂದ ಮಂಜುಗೌಡರ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಈ ವೇಳೆ ಮಾಜಿ ಗ್ರಾಪಂ ಅಧ್ಯಕ್ಷ ಶ್ರೀಕಾಂತ್ ಅರಸು, ವೆಂಕಟಯ್ಯ, ಮಾದೇವು, ರಾಜಶೇಖರ್, ಕುಮಾರ್, ಮಂಜು, ಬಸವರಾಜ್, ರಘು, ರಾಜು, ಶಂಕರ್, ಮಾದೇಶ್ ಇದ್ದರು. (ಕೊನೆ ಚಿತ್ರ)

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ರೀ ನಾನ್ಯಾವಾಗ್ಲೂ ನಿಮ್ಮ ಹೃದಯದಲ್ಲೇ ಇರಬೇಕು.
ಗಂಡ : ಆಯ್ತು ಕಣೆ. ಆದ್ರೆ ಅಲ್ಲಿರುವ ಬೇರೆ ಹೆಂಗಸರೊಂದಿಗೆ ಜಗಳ ಆಡಬೇಡ

ಮೈಸೂರು ಮಿತ್ರ
ಗುರುವಾರ, 29 ಜೂನ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಒಳ್ಳೆಯ ಕೆಲಸವನ್ನು ಮಾಡುವವನು ಯಾವತ್ತೂ ದುರ್ಗತಿಯನ್ನು ಹೊಂದುವುದಿಲ್ಲ – ಭಗವದ್ಗೀತೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕರೆದು ಹೋಳಿಗೆ ಕೊಟ್ಟರೆ ಬೆಲ್ಲ ಸಾಲದು ಎಂದನಂತೆ

ನಿಮ್ಮ ಪತ್ರಗಳು

ಸಚಿವರು ಹಾಸ್ಟೆಲ್‌ಗಳತ್ತ ಗಮನ ಹರಿಸಲಿ

ಮಾನ್ಯರೆ,

ಇತ್ತೀಚೆಗೆ ಮೈಸೂರು ವಿವಿಯ ಹಾಸ್ಟೆಲ್‌ಗಳ ಅವ್ಯವಸ್ಥೆ ಕುರಿತು ಪತ್ರಿಕೆಯೊಂದರಲ್ಲಿ ಪ್ರಕಟವಾದ ವರದಿಗೆ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರು ಅತೀ ಶೀಘ್ರದಲ್ಲೇ ಪ್ರತಿಕ್ರಿಯಿಸಿ ಆ ಕುರಿತು ಸಂಬಂಧಪಟ್ಟ ಹಿರಿಯ ಅಧಿಕಾರಿಗಳಿಗೆ ವಿವಿಯ ಎಲ್ಲಾ ಹಾಸ್ಟೆಲ್‌ಗಳಿಗೂ ಖುದ್ದು ಭೇಟಿ ನೀಡಿ ವರದಿ ನೀಡುವಂತೆ ನಿರ್ದೇಶನ ನೀಡಿರುವುದು ನಿಜಕ್ಕೂ ಶ್ಲಾಘನೀಯ. ಅದರಂತೆ ಮರುದಿನ ಹಿರಿಯ ಅಧಿಕಾರಿಗಳು ಖುದ್ದು ಸ್ಥಳಕ್ಕೆ ಭೇಟಿ ನೀಡಿದ್ದು ಪರಿಶೀಲಿಸಿ ವರದಿ ಸಂಗ್ರಹಿಸಿದ್ದಾರೆ. ಇದು ಪತ್ರಿಕೆಯೊಂದರ ನಿಜವಾದ ಸಾಮಾಜಿಕ ಕಳಕಳಿಗೆ ಅದರ ಬದ್ಧತೆಗೆ ಸಿಕ್ಕ ಗೆಲುವು ಅಂದರೆ ತಪ್ಪಾಗಲಾರದು.

ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಅದರಲ್ಲೂ ದಲಿತ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಪಾಲಿಗೆ ಹಾಸ್ಟೆಲ್‌ಗಳು "ಮರುಹುಟ್ಟು" ಪಡೆಯುವ ಸ್ಥಳಗಳಾಗಿವೆ. ಅಂತಹ ಹಾಸ್ಟೆಲ್‌ಗಳು ಎಲ್ಲಾ ಮೂಲ ಸೌಕರ್ಯಗಳಿಂದ ಕೂಡಿದ್ದರೆ ಅದು ದೂರದ ಊರುಗಳಿಂದ, ಕುಗ್ರಾಮಗಳಿಂದ ಉನ್ನತ ವ್ಯಾಸಂಗಕ್ಕಾಗಿ ನಗರ ಪ್ರದೇಶಗಳಿಗೆ ಬರುವ ಸಾಕಷ್ಟು ವಿದ್ಯಾರ್ಥಿಗಳ ಉತ್ತಮ ಭವಿಷ್ಯಕ್ಕೆ ತುಂಬಾ ಅನುಕೂಲವಾಗಲಿದೆ. ಹಾಗಾಗಿ ಮಾನ್ಯ ಸಚಿವರು ವಿವಿಯ ಹಾಸ್ಟೆಲ್‌ಗಳ ಕಡೆ ಗಮನಹರಿಸಿದಂತೆ ತಮ್ಮ ವ್ಯಾಪ್ತಿಯಲ್ಲಿ ಬರುವ ಸಮಾಜ ಕಲ್ಯಾಣ ಇಲಾಖೆಗೆ ಸೇರಿದ ಎಲ್ಲಾ ಹಾಸ್ಟೆಲ್‌ಗಳ ಕಡೆಗೂ ಗಮನಹರಿಸಿ ಅಲ್ಲಿಯೂ ಸಹ ಇಂತಹ ಸಾಕಷ್ಟು ಸಮಸ್ಯೆಗಳಿದ್ದು, ಆ ಸಮಸ್ಯೆಗಳಿಗೂ ಸಹ ಸಚಿವರು ಪೂರಕವಾಗಿ ಸ್ಪಂದಿಸಿ ವಿದ್ಯಾರ್ಥಿಗಳಿಗೆ ಬೇಕಾದ ಮೂಲ ಸೌಕರ್ಯಗಳನ್ನು ಒದಗಿಸುವಂತಾಗಲಿ.

–ಅಪುರಾ, ಅಗತಗೌಡನಹಳ್ಳಿ, ಗುಂಡ್ಲುಪೇಟೆ ತಾ

ಭಾರತದಲ್ಲಿ ರಸ್ತೆಗಳ ಅಭಿವೃದ್ಧಿ ಶ್ಲಾಘನೀಯ

ಮಾನ್ಯರೆ,

ಭಾರತ ವಿಶ್ವದಲ್ಲಿ ಅತಿದೊಡ್ಡ ರಸ್ತೆ ಸಂಪರ್ಕ ಜಾಲವನ್ನು ಹೊಂದಿದ್ದು, ಪ್ರಸ್ತುತ ಜಗತ್ತಿನಲ್ಲಿ ಎರಡನೇ ಅತೀ ದೊಡ್ಡ ರಸ್ತೆ ಸಂಪರ್ಕ ಜಾಲವನ್ನು ಹೊಂದಿದ ದೇಶಗಳ ಪಟ್ಟಿಯಲ್ಲಿ ಅತಿ ಹೆಚ್ಚು ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಚೀನಾವನ್ನು ಹಿಂದಿಕ್ಕಿ, ಅಮೆರಿಕದ ನಂತರ ಎರಡನೇ ಅತೀ ದೊಡ್ಡ ರಸ್ತೆ ಸಂಪರ್ಕ ಜಾಲವನ್ನು ಹೊಂದಿರುವ ಕೀರ್ತಿಗೆ ಪಾತ್ರವಾಗಿರುವುದು ಹೆಮ್ಮೆಯ ವಿಷಯವಾಗಿದೆ.

ಅತಿದೊಡ್ಡ ಭೂ ಪ್ರದೇಶವನ್ನು ಹೊಂದಿರುವ ಭಾರತದಲ್ಲಿ ರಸ್ತೆಗಳು ಅಭಿವೃದ್ಧಿ ಹೊಂದಿದರೆ ಮಾತ್ರ ದೇಶ ಅಭಿವೃದ್ಧಿ ಸಾಧಿಸಲು ಸಾಧ್ಯವಾಗುತ್ತದೆ. ಸರಕು ಸಾಗಣೆ ಮಾಡಲು ಉತ್ತಮ ಗುಣಮಟ್ಟದ ರಸ್ತೆಗಳು ಅವಶ್ಯಕ. ಭಾರತದಲ್ಲಿ ಉತ್ತಮ ಗುಣಮಟ್ಟದ ರಸ್ತೆಗಳು ನಿರ್ಮಾಣವಾದರೆ ಮಾತ್ರ ಅಭಿವೃದ್ಧಿಯನ್ನು ವೇಗವಾಗಿ ಸಾಧಿಸಲು ಸಾಧ್ಯವಾಗುತ್ತದೆ. ವಿಶ್ವದಲ್ಲಿ ಅಮೆರಿಕ ಅತಿ ದೊಡ್ಡ ರಾಷ್ಟ್ರೀಯ ಹೆದ್ದಾರಿಗಳನ್ನು ಹೊಂದಿರುವ ದೇಶವಾಗಿದ್ದು, ಆ ದೇಶದ ಅಭಿವೃದ್ಧಿಯಲ್ಲಿ ರಸ್ತೆಗಳ ಪಾಲು ಬಹು ದೊಡ್ಡದು.

ಅಂಕಿ ಅಂಶಗಳ ಪ್ರಕಾರ 2014ರ ನಂತರ ದೇಶದಲ್ಲಿ 1.45 ಲಕ್ಷ ಕಿ.ಮೀ ರಸ್ತೆ ನಿರ್ಮಿಸಿರುವ ಕೇಂದ್ರ ಸರ್ಕಾರದ ಸಾಧನೆ ಪ್ರಶಂಸೆಗೆ ಅರ್ಹವಾಗಿದ್ದು, ಈ ಮೂಲಕ ಚೀನಾವನ್ನು ರಸ್ತೆಗಳ ವಿಚಾರದಲ್ಲಿ ಹಿಂದಿಕ್ಕಿರುವುದು ಸಾಧನೆಯಾಗಿದೆ. ಭಾರತ ಗಡಿ ಭಾಗಗಳಲ್ಲಿ ರಸ್ತೆಗಳನ್ನು ವೇಗವಾಗಿ ಅಭಿವೃದ್ಧಿಪಡಿಸುತ್ತಾ ಗಡಿಗಳ ರಕ್ಷಣೆಗೆ ಒತ್ತು ಕೊಡುತ್ತಿದೆ.

ಇಲ್ಲಿಯವರೆಗೆ "ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರಸ್ತೆ ನಿರ್ಮಾಣದಲ್ಲಿ 7 ವಿಶ್ವ ದಾಖಲೆ ನಿರ್ಮಾಣ ಮಾಡಿದೆ. ಉದಾಹರಣೆಗೆ ಈ ವರ್ಷ ಮೇನಲ್ಲಿ 100 ಕೀಮಿ ಉದ್ದದ ಗಾಝಿಯಾಬಾದ್– ಆಲಿಗಢ ಎಕ್ಸ್‌ಪ್ರೆಸ್‌ವೇಯನ್ನು ಕೇವಲ 100 ಗಂಟೆಗಳಲ್ಲಿ ನಿರ್ಮಾಣ ಮಾಡಿದ್ದು, ರಾಷ್ಟ್ರೀಯ ಹೆದ್ದಾರಿ 53 ರಲ್ಲಿ 75 ಕಿಮೀ ಉದ್ದದ ಕಾಂಕ್ರೀಟ್ ರಸ್ತೆಯನ್ನು 105 ಗಂಟೆ 33 ನಿಮಿಷದಲ್ಲಿ ನಿರ್ಮಾಣ ಮಾಡಿರುವುದು ದಾಖಲೆಯಾಗಿದೆ.

–ರಾಸುಮ ಭಟ್, ಚಿಕ್ಕಮಗಳೂರು.

ಖಾಕಿಯೊಳಗಿನ ಕಾವ್ಯ ಜಗತ್ತು

ಮಾನ್ಯರೇ,

ಪೊಲೀಸರೆಂದರೆ ದಿನದ 24 ಗಂಟೆಯಲ್ಲೂ ಸಮಾಜದ ಮತ್ತು ನಾಗರಿಕರ ಬದುಕಿಗಾಗಿ ದುಡಿಯುವವರು, ಯಾವುದೇ ಹಬ್ಬ ಹರಿದಿನಗಳಲ್ಲಿ ಭಾಗವಹಿಸದೇ ಇರುವವರು, ಕಾನೂನು ಸುವ್ಯವಸ್ಥೆಗಾಗಿ ಬಂದೋಬಸ್ತ್ ಮಾಡುವವರು, ಗಣ್ಯರಿಗೆ ಸೂಕ್ತ ಭದ್ರತೆಯನ್ನು ನೀಡುವವರು ಎಂಬುದು ಜನಸಾಮಾನ್ಯರ ಮಾತು. ಹೀಗಿರುವಾಗ ಕರ್ತವ್ಯಗಳ ಸಾಲಿನಲ್ಲಿ ತಮ್ಮ ಕುಟುಂಬಗಳಿಗೂ ಸಮಯವನ್ನು ನೀಡದೆ ಸಾಗುವ ಪೊಲೀಸ್ ಕರ್ತವ್ಯದಲ್ಲಿ ಸಾಹಿತ್ಯಗಾರರು, ಬರಹಗಾರರು ಮತ್ತು ಕವಿಗಳು ಇರುವುದು ನಿಜಕ್ಕೂ ಬಹಳ ವಿಶೇಷ. ಕಾರಣ ದೈಹಿಕ ಮತ್ತು ಮಾನಸಿಕವಾಗಿ ಬಳಲುವ ಈ ಕರ್ತವ್ಯದಲ್ಲಿ ಸಮಯವನ್ನು ಬಿಡುವು ಮಾಡಿಕೊಂಡು ಸಮಾಜದ ಪರಿಸ್ಥಿತಿಗಳನ್ನು ಹಾಗೂ ಪೊಲೀಸರ ದಿನನಿತ್ಯದ ಕೆಲಸವನ್ನು ಸಾಹಿತ್ಯ, ಲೇಖನ ಮತ್ತು ಕಾವ್ಯದಲ್ಲಿ ಚಿತ್ರಿಸುವ ಆರಕ್ಷಕರು ಸಾಹಿತ್ಯ ಲೋಕದಲ್ಲೂ ಸಹ ಇದ್ದಾರೆ ಎನ್ನುವುದಕ್ಕೆ ಬಹಳಷ್ಟು ಉದಾಹರಣೆ ಇದೆ. ಅಂತಹವುಗಳ ಪೈಕಿ ಇತ್ತೀಚೆಗೆ 21 ಜನ ಪೋಲಿಸರು ಸೇರಿ ಬರೆದ ಕವನ ಸಂಕಲನ "ಖಾಕಿಯೊಳಗಿನ ಕಾವ್ಯ ಜಗತ್ತು" ನಿರೂಪಿಸಿದೆ.

ಪೊಲೀಸ್ ಅಧಿಕಾರಿಯಾಗಿದ್ದರೂ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಒಲವುಳ್ಳ ಡಾ. ಶಿವಕುಮಾರ ದಂಡಿನ (ಅಡಿಷನಲ್ ಎಸ್ಪಿ) ಅವರು ಪೊಲೀಸರಲ್ಲಿರುವ ಕವಿ ಹೃದಯಗಳಿಗೆ ಸಂಚರಿಸಿ ಅವರಲ್ಲಿರುವ ಸಾಹಿತ್ಯ ಅಭಿರುಚಿಗೆ ವೇದಿಕೆಯನ್ನು ನಿರ್ಮಾಣ ಮಾಡಿ "ಖಾಕಿಯೊಳಗಿನ ಕಾವ್ಯ ಜಗತ್ತು" ಎಂಬ ಅದ್ಭುತವಾದ ಕವನ ಸಂಕಲನವನ್ನು ಹೊರತರಲು ಕಾರಣಕರ್ತರಾಗಿದ್ದಾರೆ. ಪೊಲೀಸರು ಲಾಠಿಯ ಜೊತೆಗೆ ಪೆನ್ನನ್ನು ಸಹ ಹಿಡಿದಿದ್ದಾರೆ ಎಂಬುದು ಖಾಕಿಯೊಳಗಿನ ಕಾವ್ಯಜಗತ್ತು ಎಂಬ ಕವನ ಸಂಕಲನ ಸಮಾಜಕ್ಕೆ ತೋರಿಸಿ ಕೊಟ್ಟಿದೆ.

–ಪವನ್ ಜಯರಾಂ, ಸಿದ್ದಯ್ಯನಪುರ, ಚಾ ನಗರ

ಬೆಂಗಳೂರಿನಲ್ಲಿ ಅಮೆರಿಕ ಕಾನ್ಸುಲೇಟ್ ಕಚೇರಿ

ಮಾನ್ಯರೆ,

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಮೆರಿಕ ಪ್ರವಾಸ ಫಲಪ್ರದವಾಗಿದ್ದು, ಅಮೆರಿಕ ಮತ್ತು ಭಾರತದ ನಡುವಿನ ಬಾಂಧವ್ಯವನ್ನು ಮತ್ತಷ್ಟು ಹೆಚ್ಚಿಸುವ ದೃಷ್ಟಿಯಿಂದ ಕಾನ್ಸುಲೇಟ್ (ದೂತಾವಾಸ) ಕಚೇರಿಗಳ ಸಂಖ್ಯೆಯನ್ನು ಹೆಚ್ಚಿಸಲು ಉದ್ದೇಶಿಸಿರುವುದು ತುಂಬಾ ಹರ್ಷದಾಯಕ ಸಂಗತಿ. ಕರ್ನಾಟಕ ರಾಜ್ಯದವರಾದ ನಾವುಗಳು ಅಮೆರಿಕಕ್ಕೆ ತೆರಳಲು ವೀಸಾಗೆ ಚೆನ್ನೈಗೆ ಹೋಗುವ ಅನಿವಾರ್ಯತೆ ಎದುರಾಗಿ ವೀಸಾ ಪಡೆಯಲು ಬವಣೆ ಪಡಬೇಕಾಗಿತ್ತು ಆದರೆ ಈಗ ವೀಸಾ, ವಿದ್ಯಾರ್ಥಿ ವೀಸಾ ಹಾಗೂ ವೀಸಾಗಳನ್ನು ನವೀಕರಿಸಲು ಬೆಂಗಳೂರಿನಲ್ಲಿ ಹೊಸದಾಗಿ ಕಾನ್ಸುಲೇಟ್ (ದೂತಾವಾಸ) ಕಚೇರಿ ತೆರೆಯಲು ಉಭಯ ದೇಶಗಳು ಒಡಂಬಡಿಕೆ ಮಾಡಿಕೊಂಡಿರುವುದರಿಂದ ಕರ್ನಾಟಕದ ಜನತೆಗೆ ತುಂಬಾ ಅನುಕೂಲವಾಗುತ್ತದೆ. ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿ ಅವರ ಅಮೆರಿಕ ಭೇಟಿ ಉಭಯ ದೇಶಗಳ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಹಾಯಕವಾಗಲಿದೆ.

– ಬೆಸಗರಹಳ್ಳಿ ರವಿ ಪ್ರಸಾದ್, ಕೆ.ಸಿ. ನಗರ, ಮೈಸೂರು.

ಸಮಾಜಮುಖಿ



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಉಚಿತ ಬಸ್ ಪ್ರಯಾಣ ಮಹಿಳೆಯರ ಉನ್ನತಿಗೆ ಹಾದಿ



> ಈ ಯೋಜನೆ ನಿಜವಾಗಿ ಮಹಿಳೆಯರ ಬದುಕಿನಲ್ಲಿ ಅರ್ಥಪೂರ್ಣವಾದ ಬದಲಾವಣೆಯನ್ನು ತರಬೇಕಾದರೆ ಅವರ ಜೀವನಾಧಾರವಾದ ಉಚಿತ ಶಿಕ್ಷಣ ಮತ್ತು ಉಚಿತ ಆರೋಗ್ಯ ಸೇವೆಗಳು, ಪೌಷ್ಟಿಕ ಆಹಾರ, ಉದ್ಯೋಗ ಮತ್ತು ಸಾಮರ್ಥ್ಯ ಬಲವರ್ಧನೆಯ ಅವಕಾಶಗಳು–ಇವುಗಳೆಲ್ಲ ಅವರಿಗೆ ಸುಲಭ ದರಗಳಲ್ಲಿ ಲಭ್ಯವಾಗುವಂತಹ ಪೂರಕ ವ್ಯವಸ್ಥೆಯನ್ನು ಸೃಷ್ಟಿಸ ಬೇಕು. ಮಹಿಳೆಯರ ಬದುಕಿನ ಮೇಲೆ ಉಚಿತ ಬಸ್ ಯೋಜನೆ ಗಮನಾರ್ಹವಾದ ಉತ್ತಮ ಪರಿಣಾಮಗಳನ್ನು ಬೀರಬೇಕೆಂದರೆ ಮುಂಬರುವ ರಾಜ್ಯ ಬಜೆಟ್‌ನಲ್ಲಿ ಇದಕ್ಕೆಂದು ವಿಶೇಷ ನಿಧಿಯನ್ನು ಮೀಸಲಿಡಬೇಕು. ಸರ್ಕಾರಿ ಮತ್ತು ಖಾಸಗಿ ಸಾರಿಗೆ ವ್ಯವಸ್ಥೆಗಳೆರಡರ ಲಾಭ–ನಷ್ಟಗಳನ್ನು ಬಹು ಆಯಾಮಗಳಿಂದ ಪರೀಕ್ಷೆಗೆ ಒಳಪಡಿಸುವುದು ಕೂಡಾ ಅಷ್ಟೇ ಮುಖ್ಯ.

ಕರ್ನಾಟಕದಲ್ಲಿ ಹೊಸ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸುದ್ದಿ ಮಾಡುತ್ತಿರುವ ವಿಚಾರಗಳಲ್ಲಿ, ತನ್ನ ಚುನಾವಣಾಪೂರ್ವ ಆಶ್ವಾಸನೆಯಾದ ಮಹಿಳೆಯರಿಗೆ ಉಚಿತ ಪ್ರಯಾಣದ ಸೌಲಭ್ಯವನ್ನು ಜಾರಿಗೆ ತಂದಿದ್ದು, ಸರ್ಕಾರಿ ಬಸ್ಸುಗಳಲ್ಲಿ ಮಾತ್ರ ಇದು ಲಭ್ಯವಿದೆ. ಈಗಾಗಲೇ ರಾಜ್ಯದ ಅನೇಕ ಭಾಗಗಳಲ್ಲಿ ಜೂನ್ 11 ರಿಂದ 'ಶಕ್ತಿ' ಎಂಬ ಹೆಸರಿನಿಂದ ಜಾರಿಗೆ ಬಂದಿರುವ ಈ ಯೋಜನೆ ರಾಜ್ಯದ ನಿವಾಸಿಗಳಾದ ಮಹಿಳೆಯರು, ಹೆಣ್ಣು ಮಕ್ಕಳು, ಲೈಂಗಿಕ ಅಲ್ಪಸಂಖ್ಯಾತರು ಮತ್ತು ವಿದ್ಯಾರ್ಥಿನಿಯರಿಗೆ ಅನ್ವಯವಾಗುತ್ತದೆ. ಸರ್ಕಾರದ ಸೇವಾ ಸಿಂಧು ಪೋರ್ಟಲ್ ಮೂಲಕ ಶಕ್ತಿ ಕಾರ್ಡುಗಳು ದೊರೆಯುವವರೆಗೂ ತಮ್ಮ ಗುರುತಿನ ಚೀಟಿಯನ್ನು ತೋರಿಸಿ ಮಹಿಳೆಯರು ರಾಜ್ಯದ ಸಾರಿಗೆ ಸಂಸ್ಥೆಗಳ ಸಾಮಾನ್ಯ ಹಾಗೂ ಎಕ್ಸ್‌ಪ್ರೆಸ್ ಬಸ್ಸುಗಳಲ್ಲಿ ಪ್ರಯಾಣ ಮಾಡಬಹುದು. ಅಂತರರಾಜ್ಯ ಹಾಗೂ ಐಷಾರಾಮಿ ಬಸ್ಸುಗಳು ಶಕ್ತಿ ಯೋಜನೆಯ ವ್ಯಾಪ್ತಿಗೆ ಬರುವುದಿಲ್ಲ. ಲಭ್ಯ ಮಾಹಿತಿಯ ಅನ್ವಯ ರಾಜ್ಯ ಬೊಕ್ಕಸಕ್ಕೆ 4700 ಕೋಟಿ ರೂಪಾಯಿಗಳ ವೆಚ್ಚ ವಾರ್ಷಿಕವಾಗಿ ಈ ಯೋಜನೆಗೆ ತಗಲಲಿದೆ.

ಇದು ಸುದ್ದಿ ಹೊರ ಬೀಳುತ್ತಿದ್ದಂತೆ ವಿವಿಧ ರೀತಿಯ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತಿವೆ. ಉಚಿತವಾಗಿ ಪ್ರಯಾಣ ಮಾಡುವ ಅವಕಾಶ ಸಿಕ್ಕಿ ಬಿಟ್ಟರೆ 'ಮಹಿಳೆಯರು ದಿನವೂ ತವರಿಗೆ ಹೋಗುತ್ತಾರೆ', 'ತೀರ್ಥಯಾತ್ರೆಗೆ ಹೋಗುತ್ತಾರೆ ' ಇಲ್ಲ ' ಶಾಪಿಂಗಿಗೆ ಹೋಗುತ್ತಾರೆ' ಹೀಗೆ ಹಗುರವಾದ ಮಾತುಗಳನ್ನಾಡಿ ಲಿಂಗ ಪೂರ್ವಾಗ್ರಹಗಳನ್ನು ಮತ್ತಷ್ಟು ಬಲಗೊಳಿಸಿ, ಅದರಲ್ಲಿ ವಿಲಕ್ಷಣ ಆನಂದ ಪಡೆಯುತ್ತಿರುವವರು ಒಂದೆಡೆಯಾದರೆ, ಉಚಿತ ಪ್ರಯಾಣದಿಂದ ಅವರ ಜೀವನ ಕೃತಾರ್ಥವಾದಂತೆ ಎಂದು ಬಿಂಬಿಸುತ್ತಿರುವ ವರ್ಗ ಮತ್ತೊಂದೆಡೆ ನಮಗೆ ಕಂಡು ಬರುತ್ತಿದೆ. ಆದರೆ ಪಕ್ಷಾತೀತವಾಗಿ ವಿಷಯವನ್ನು ವಿಶ್ಲೇಷಿಸಿ ಅದರ ಸಾಧಕ–ಬಾಧಕಗಳನ್ನು ಚರ್ಚೆಗೆ ಒಳಪಡಿಸುವ ಅಗತ್ಯವಿದೆ.

ಚಲನೆ ಎನ್ನುವುದು ಮಾನವ ಬದುಕಿನ ಮೂಲಭೂತ ಅವಶ್ಯಕತೆ. ಆದ್ದರಿಂದ ದೇಹಕ್ಕಷ್ಟೇ ಅಲ್ಲ, ಸಾಮಾಜಿಕ ಬೆಳವಣಿಗೆಗೂ ಅವಕಾಶಗಳು ತೆರೆದುಕೊಳ್ಳುತ್ತವೆ. ಮಹಿಳೆಯರ ವಿಚಾರದಲ್ಲಿ ಇದು ಮತ್ತಷ್ಟು ನಿಜ. ಶತಮಾನಗಳ ಕಾಲ ಅನೇಕ ಮಹಿಳೆಯರು ನಾಲ್ಕು ಗೋಡೆಗಳೊಳಗೆ ಬಂಧಿತರಾಗಿದ್ದು, ಸಾಮಾಜಿಕ ಚಲನೆಯ ಮಾತಿರಲಿ, ಭೌತಿಕ ಚಲನೆಗೂ ಅವಕಾಶವಿರಲಿಲ್ಲ. ಮತ್ತನೇಕರಿಗೆ ಹೊರ ಪ್ರಪಂಚವನ್ನು ಕಾಣ ಬೇಕೆಂದರೂ ಅದಕ್ಕೆ ಅಗತ್ಯವಾದ ಆರ್ಥಿಕ ಬೆಂಬಲವಿರಲಿಲ್ಲ, ಇಂದಿಗೂ ಅನೇಕರಿಗಿಲ್ಲ. ಸಾರ್ವಜನಿಕ ವಾಹನಗಳಲ್ಲಿ ಪ್ರಯಾಣ ಮಾಡಬೇಕೆಂದರೂ ಒಂದು ಸಾಪೇಕ್ಷಿಕ ಮಟ್ಟದಲ್ಲಿ ಖಾಸಗಿ ವಾಹನಗಳಿಗಿಂತ ಪ್ರಯಾಣ ದರ ಕಡಿಮೆ ಇದ್ದರೂ ಮನೆಯವರನ್ನು, ಅದರಲ್ಲೂ ಪುರುಷರನ್ನು ಅವಲಂಬಿಸಬೇಕಿತ್ತು. ಮನೆಯಿಂದ ಹೊರಗೆ ಹೋಗಬೇಕೆಂದರೆ ಒಂದೆಡೆ ಪುರುಷರ ಅನುಮತಿ, ಮತ್ತೊಂದೆಡೆ ಅವರಿಗೆ ಹಣದ ಕೊರತೆ– ಈ ಕಾರಣದಿಂದಾಗಿ ಅನೇಕ ಮಹಿಳೆಯರ ಚಲನಾ ಶಕ್ತಿಯೇ ಕುಂಠಿತವಾಗಿ ಬಿಟ್ಟಿದೆ.

ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಚಲನಶೀಲತೆಯ ಮೇಲೆ ಮಿತಿಗಳನ್ನು ಹೇರಲು ಮತ್ತೊಂದು ಕಾರಣವೂ ಇದೆ. ಅದೆಂದರೆ ಸ್ತ್ರೀಯ ಜೈವಿಕತೆ. ಈ ಕಾರಣದಿಂದಾಗಿ ಆಕೆಯ ದೇಹದ ಮೇಲೆ ಆಕ್ರಮಣ ನಡೆಯಬಹುದು. ಆದ್ದರಿಂದ ಅವಳನ್ನು ಸಂರಕ್ಷಿಸಬೇಕು ಎಂಬುದು ಒಂದು ಸಾಂಸ್ಕೃತಿಕ ಮಿಥ್ಯೆ. ಅನೇಕ ಸಂದರ್ಭಗಳಲ್ಲಿ ಅಂತ ಘಟನೆಗಳು ನಡೆದಿವೆ ಕೂಡ. ಇದನ್ನೇ ಮುಂದಿಟ್ಟುಕೊಂಡು ಸಾರ್ವಜನಿಕ ವಾಹನ ಸೌಲಭ್ಯವಿಲ್ಲದಿರುವ ಕಡೆಗಳಲ್ಲಿ ಹೆಣ್ಣು ಮಕ್ಕಳನ್ನು ದೂರವಿರುವ ಶಿಕ್ಷಣ ಸಂಸ್ಥೆಗಳಿಗೆ ಕಳುಹಿಸುವುದಾಗಲೀ, ಉದ್ಯೋಗ ದೊರೆತರೂ ಅವರಿಗೆ ಬಸ್ ಸೌಕರ್ಯವಿಲ್ಲವೆಂದೋ, ಇದ್ದರೂ ಪ್ರಯಾಣ ವೆಚ್ಚವನ್ನು ಭರಿಸಲಾಗದೆಂದೋ ಅವರನ್ನು ಗೃಹಬಂಧಿಗಳನ್ನಾಗಿ ಮಾಡಿ ಅವರಿಗೆ ತಮ್ಮ ಬದುಕಿನಲ್ಲಿ ಬದಲಾವಣೆಗಳನ್ನು ಕಾಣಲು ಅವಕಾಶಗಳನ್ನು ನಿರಾಕರಿಸಲಾಗುತಿತ್ತು. ಇಂಥ ಪರಿಸ್ಥಿತಿಗಳಲ್ಲಿ ಅನೇಕ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಅವರಿಗೆ ಬದುಕಿನಲ್ಲಿ ಹೊಸ ದಾರಿಗಳನ್ನು ತೋರಿಸುವ ಮಾರ್ಗವಾಗಿ ಪರಿಣಮಿಸಬಹುದು.

ಮಹಿಳೆಯರಿಗೆ ಹೊರ ಪ್ರಪಂಚದ ಸಂಪರ್ಕವಿರುವುದು ಮತ್ತೊಂದು ಕಾರಣಕ್ಕಾಗಿ ಬಹು ಮುಖ್ಯ. ಅದು ಅವರ ಬದುಕಿನಲ್ಲಿ ಸ್ಥಾಪಿತವಾಗುವ ಸಾಮಾಜಿಕ ಸಂಪರ್ಕ ಜಾಲಗಳಿಗೆ ಸಂಬಂಧಿಸಿದ್ದು. ಮನೆಯ ಸೀಮಿತ ವಾತಾವರಣದಿಂದ ಹೊರ ಹೋಗಿ ಇತರ ಮಹಿಳೆಯರೊಡನೆ ಅಥವಾ ಸಮ ವಯಸ್ಕರೊಡನೆ ಸಂಪರ್ಕ ಸ್ಥಾಪನೆಯಾದಾಗ, ಬದುಕಿನ ಅನುಭವಗಳನ್ನು ಪರಸ್ಪರ ಹಂಚಿಕೊಳ್ಳಲು, ಹೊಸ–ಹೊಸ ವಿಚಾರಗಳಿಗೆ ಮನಸ್ಸನ್ನು ತೆರೆದುಕೊಳ್ಳಲು, ತಮ್ಮ ಕನಸುಗಳನ್ನು ಸಾಕಾರ ಮಾಡಿಕೊಳ್ಳುವ ಮಾರ್ಗಗಳನ್ನು ಹುಡುಕಿಕೊಳ್ಳಲು ಹಾಗೂ ತಮ್ಮ ಬದುಕಿನ ಸಮಸ್ಯೆಗಳನ್ನು ಎದುರಿಸಲು, ವಿಶೇಷವಾಗಿ ದೌರ್ಜನ್ಯವನ್ನು ತಡೆಗಟ್ಟಲು ದಾರಿಗಳನ್ನು ಗುರುತಿಸಲು ಹೊರ ಪ್ರಪಂಚದೊಡನೆ ನಿರಂತರ ಸಂಪರ್ಕ ಹೊಂದಿರುವುದು ಸ್ತ್ರೀ ಬದುಕಿನಲ್ಲಿ ಅತ್ಯಂತ ಮುಖ್ಯವಾಗಿ ಆಗಲೇ ಬೇಕಾದ ಬದಲಾವಣೆ. ಈ ಶಕ್ತಿಯನ್ನು 'ಶಕ್ತಿ' ಯೋಜನೆ ನೀಡಿದೆಯೇ ಅಥವಾ ನೀಡಬಲ್ಲದೇ ಎಂದು ಪರಿಶೀಲಿಸಿ ನೋಡಬೇಕಾಗಿದೆ.

ಭಾರತದಲ್ಲಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಸೌಲಭ್ಯವನ್ನು ಕರ್ನಾಟಕಕ್ಕೂ ಮುನ್ನವೇ ದೆಹಲಿ ಮತ್ತು ತಮಿಳುನಾಡು ನೀಡಿವೆ. ದೆಹಲಿ ಸರ್ಕಾರ ನವೆಂಬರ್ 10, 2019 ರಿಂದ ಮಹಿಳೆಯರಿಗೆ ಸಾರ್ವಜನಿಕ ಸಾರಿಗೆಯಲ್ಲಿ ಉಚಿತ ಪ್ರಯಾಣದ ಯೋಜನೆಯನ್ನು ಪರಿಚಯಿಸಿತು. ಅವರಿಗೆ ಸುರಕ್ಷಿತ ಪ್ರಯಾಣದ ಅನುಭವವನ್ನು ನೀಡಲು ಹಾಗೂ ಅವರ ಉದ್ಯೋಗಾವಕಾಶಗಳ ಬಳಕೆಯನ್ನು ಹೆಚ್ಚಿಸಲು ಈ ಕ್ರಮ ನೆರವಾಗುತ್ತದೆ, ದೆಹಲಿಯ ಮಹಿಳಾ ಕೆಲಸಗಾರ ವರ್ಗದಲ್ಲಿ ಶೇಕಡಾ 11 ರಷ್ಟು ಮಾತ್ರ ಮಹಿಳೆಯರಿದ್ದು, ಉಚಿತ ಪ್ರಯಾಣದ ಸೌಲಭ್ಯ ಚಲನಶೀಲತೆಯನ್ನು ಹೆಚ್ಚಿಸುವುದರ ಮೂಲಕ ಅವರನ್ನು ಹೆಚ್ಚು ಸ್ವಾವಲಂಬಿಗಳಾಗಿ ಮಾಡುತ್ತದೆ ಎಂಬುದು ದೆಹಲಿ ಆಡಳಿತ ಈ ಯೋಜನೆಗೆ ನೀಡಿದ ಸಮರ್ಥನೆ.

ತಮಿಳುನಾಡಿನಲ್ಲಿ ಈ ಯೋಜನೆ ಜಾರಿಗೆ ಬಂದಿದ್ದು 2021ರ ಮೇ ತಿಂಗಳ 8ನೇ ತಾರೀಕಿನಂದು. ಒಂದು ಸಮೀಕ್ಷೆಯ ಪ್ರಕಾರ ತಮಿಳುನಾಡಿನಲ್ಲಿರುವ ಮಹಿಳೆಯರಿಗೆ ಉಚಿತ ಪ್ರಯಾಣ ಯೋಜನೆಯಿಂದ 12,000 ರೂ.ಗಳಿಗೂ ಕಡಿಮೆ ಮಾಸಿಕ ಆದಾಯ ಇರುವ ಮಹಿಳೆಯರಿಗೆ ತಿಂಗಳಿಗೆ 800–1000 ರೂ.ಗಳವರೆಗೆ ಉಳಿತಾಯವಾಗುತ್ತದೆ. ಅದನ್ನು ಅವರು ತಮ್ಮ ಮಕ್ಕಳ ಶಿಕ್ಷಣ, ಆರೋಗ್ಯ ರಕ್ಷಣೆ ಮುಂತಾದ ಜೀವನಾವಶ್ಯಕತೆಗಳ ಪೂರೈಕೆಗಾಗಿ ಬಳಸುತ್ತಿದ್ದಾರೆ. ಈ ಯೋಜನೆಯನ್ನು ಜಾರಿಗೆ ತರಲು ತಮಿಳುನಾಡು ಸರ್ಕಾರ ರಾಜ್ಯ ಬಜೆಟ್‌ನಲ್ಲಿ ಪ್ರತಿ ವರ್ಷವೂ ಹೆಚ್ಚು–ಹೆಚ್ಚು ಹಣವನ್ನು ನಿಗದಿಪಡಿಸುತ್ತಿದೆ.

ಉಚಿತ ಬಸ್ ಪ್ರಯಾಣ ಇರಲಿ ಬಿಡಲಿ ಇಂದಿಗೂ ಬಹುತೇಕ ಮಹಿಳೆಯರು ತಮ್ಮ ಗಳಿಕೆಯನ್ನು ಬಳಸುವುದು ಕೌಟುಂಬಿಕ ಅಗತ್ಯಗಳ ಪೂರೈಕೆಗಾಗಿಯೇ ಎಂಬುದನ್ನು ಅನೇಕ ಅಧ್ಯಯನಗಳು ತೋರಿಸಿವೆ. ಈ ಯೋಜನೆಯಿಂದ ವಿಶೇಷವಾಗಿ ನೆರವಾಗುವುದು ತರಕಾರಿ, ಸೊಪ್ಪು ಅಥವಾ ಇತರ ವಸ್ತುಗಳನ್ನು ನಗರಗಳಿಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡುವ ಸಣ್ಣ ವ್ಯಾಪಾರಿಗಳಿಗೆ. ದೇಶದ ಶೇಕಡಾ 40 ರಷ್ಟು ಕುಟುಂಬಗಳ ದಿನ ನಿತ್ಯದ ಬದುಕು ನಡೆಯುತ್ತಿರುವುದೇ ಮಹಿಳೆಯರ ಗಳಿಕೆಯಿಂದ. ಇವರಲ್ಲಿ ಬಹು ಸಂಖ್ಯಾತ ಮಹಿಳೆಯರು ದುಡಿಯುತ್ತಿರುವುದು ಅತೀ ಕಡಿಮೆ ವೇತನ ಮತ್ತು ಅತೀ ಕಡಿಮೆ ಸೌಲಭ್ಯಗಳಿರುವ ಅಸಂಘಟಿತ ಆರ್ಥಿಕ ಕ್ಷೇತ್ರಗಳಲ್ಲಿ. ಇವರ ಬದುಕಿನಲ್ಲಿ ಉಚಿತ ಬಸ್ ಪ್ರಯಾಣದ ಯೋಜನೆ ಬದಲಾವಣೆಗಳನ್ನು ತರಬಹುದಾದರೆ ಅದೊಂದು 'ಉಪಯುಕ್ತ ಸಾರ್ವಜನಿಕ ಬಂಡವಾಳ' ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ.

ರೈಲು ಪ್ರಯಾಣಕ್ಕಿಂತ ಬಸ್ ಪ್ರಯಾಣ ಹೆಚ್ಚು ದುಬಾರಿಯಾಗುತ್ತಿರುವ ಈ ಕಾಲದಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಸೌಲಭ್ಯ ಮೇಲ್ಮುಖ ಸಾಮಾಜಿಕ ಚಲನೆಗೆ ದಾರಿ ಮಾಡಿ ಕೊಡಬಲ್ಲದು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಈಗಾಗಲೇ ಖಾಸಗಿ ಬಸ್ ಉದ್ಯಮಕ್ಕೆ ಆದಾಯ ಕಡಿಮೆಯಾಗುತ್ತಿರುವ ವರದಿಗಳು ಬರುತ್ತಿವೆ. ಇಲ್ಲಿಯೂ ಮಹಿಳಾ ಉದ್ಯೋಗಿಗಳು ಇದ್ದಾರೆ ಅಥವಾ ಈ ಕ್ಷೇತ್ರದಲ್ಲಿ ಉದ್ಯೋಗಿಗಳ ಗಳಿಕೆಯನ್ನು ಜೀವನ ನಿರ್ವಹಣೆಗಾಗಿ ಅವಲಂಬಿಸಿರುವ ಕುಟುಂಬಗಳೂ ಇವೆ. ಖಾಸಗಿ ಬಸ್ ಪ್ರಯಾಣಿಕರ ಸಂಖ್ಯೆ ಕಡಿಮೆಯಾಯಿತೆಂದು ಈ ಉದ್ಯಮ ತನ್ನ ಉದ್ಯೋಗಿಗಳನ್ನು ಕೆಲಸದಿಂದ ತೆಗೆದು ಹಾಕಲಾರಂಭಿಸಿದರೆ ಮೊದಲು ಗದಾಪ್ರಹಾರವಾಗುವುದು ಮಹಿಳೆಯರ ಮೇಲೆಯೇ. ಇನ್ನು ಪುರುಷರು ಉದ್ಯೋಗಗಳನ್ನು ಕಳೆದುಕೊಂಡರೆ ಅನೇಕ ಕುಟುಂಬಗಳಲ್ಲಿ ಒತ್ತಡ ಬೀಳುವುದೂ ಮಹಿಳೆಯರ ಮೇಲೆಯೇ.

ಈ ಯೋಜನೆ ನಿಜವಾಗಿ ಮಹಿಳೆಯರ ಬದುಕಿನಲ್ಲಿ ಅರ್ಥಪೂರ್ಣವಾದ ಬದಲಾವಣೆಯನ್ನು ತರಬೇಕಾದರೆ ಅವರ ಜೀವನಾಧಾರವಾದ ಉಚಿತ ಶಿಕ್ಷಣ ಮತ್ತು ಉಚಿತ ಆರೋಗ್ಯ ಸೇವೆಗಳು, ಪೌಷ್ಟಿಕ ಆಹಾರ, ಉದ್ಯೋಗ ಮತ್ತು ಸಾಮರ್ಥ್ಯ ಬಲವರ್ಧನೆಯ ಅವಕಾಶಗಳು– ಇವುಗಳೆಲ್ಲ ಅವರಿಗೆ ಸುಲಭ ದರಗಳಲ್ಲಿ ಲಭ್ಯವಾಗುವಂತಹ ಪೂರಕ ವ್ಯವಸ್ಥೆಯನ್ನು ಸೃಷ್ಟಿಸಬೇಕು. ಮಹಿಳೆಯರ ಬದುಕಿನ ಮೇಲೆ ಉಚಿತ ಬಸ್ ಯೋಜನೆ ಗಮನಾರ್ಹವಾದ ಉತ್ತಮ ಪರಿಣಾಮಗಳನ್ನು ಬೀರಬೇಕೆಂದರೆ ಮುಂಬರುವ ರಾಜ್ಯ ಬಜೆಟ್‌ನಲ್ಲಿ ಇದಕ್ಕೆಂದು ವಿಶೇಷ ನಿಧಿಯನ್ನು ಮೀಸಲಿಡಬೇಕು.

ಸರ್ಕಾರಿ ಮತ್ತು ಖಾಸಗಿ ಸಾರಿಗೆ ವ್ಯವಸ್ಥೆಗಳೆರಡರ ಲಾಭ–ನಷ್ಟಗಳನ್ನು ಬಹು ಆಯಾಮಗಳಿಂದ ಪರೀಕ್ಷೆಗೆ ಒಳಪಡಿಸುವುದು ಕೂಡಾ ಅಷ್ಟೇ ಮುಖ್ಯ.

ಡಾ.ಅಂಬೇಡ್ಕರ್ ಉನ್ನತ ಚಿಂತನೆಗಳಿಂದ ನಮ್ಮ ಸಂವಿಧಾನ ಸರ್ವರೂ ಒಪ್ಪುವಂತಿದೆ

ಚಾಮರಾಜನಗರ ವಿವಿ ಕುಲಪತಿ ಪ್ರೊ.ಎಂ.ಆರ್. ಗಂಗಾಧರ್ ಅಭಿಮತ



ಮೈಸೂರು, ಜೂ.28(ಎಸ್‌ಪಿಎನ್)– ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿಂತನೆಗಳು ಸಾರ್ವಕಾಲಿಕ ಸತ್ಯಗಳನ್ನು ಬಿಂಬಿಸುತ್ತದೆ. ಹಾಗೆಯೇ ಅವರ ನೇತೃತ್ವದಲ್ಲಿ ರಚಿಸಿದ ಸಂವಿಧಾನ ಸರ್ವರಿಗೂ ಒಪ್ಪುವ ಸಂವಿಧಾನವಾಗಿದೆ ಎಂದು ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎಂ.ಆರ್.ಗಂಗಾಧರ್ ಅಭಿಪ್ರಾಯಪಟ್ಟರು.

ಮೈಸೂರು ವಿವಿ ವಿಶ್ವವಿದ್ಯಾನಿಲಯ ಸಂಜೆ ಕಾಲೇಜು ಆವರಣದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ 132ನೇ ಜನ್ಮ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಸಮಾರಂಭದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ವ್ಯವಸ್ಥೆಯೊಂದಿಗೆ ರಾಜೀಮಾಡಿಕೊಳ್ಳದೇ, ಸಾರ್ವಜನಿಕ ಹಿತಕ್ಕಾಗಿ ಕೆಲವು ಗಟ್ಟಿ ನಿರ್ಧಾರಗಳನ್ನು ತೆಗೆದುಕೊಂಡಿದ್ದರು. ಅಲ್ಲದೆ ಸದಾ ಸ್ವಾಭಿಮಾನಕ್ಕೆ ಹೆಚ್ಚಿನ ಮಹತ್ವ ನೀಡುತ್ತಿದ್ದರು. ಅಂಬೇಡ್ಕರ್ ಕಾನೂನು ಮಂತ್ರಿಯಾಗಿದ್ದಾಗ ಮಹಿಳೆಯರಿಗೆ ವಿಶೇಷ ಸವಲತ್ತು ನೀಡಲು ಶ್ರಮಿಸಿದ್ದರಲ್ಲದೆ, ಭಾರತೀಯ ಸಂವಿಧಾನವು ಧಾರ್ಮಿಕ ಸ್ವಾತಂತ್ರ್ಯ, ಅಸ್ಪೃಶ್ಯತೆ ನಿರ್ಮೂಲನೆ, ಎಸ್ಸಿ, ಎಸ್ಟಿ, ಒಬಿಸಿ ವರ್ಗ ಸೇರಿದಂತೆ ಎಲ್ಲಾ ವರ್ಗಗಳಿಗೂ ನ್ಯಾಯ ಒದಗಿಸುವ ಕೆಲಸವನ್ನು ಸಂವಿಧಾನದಲ್ಲಿ ಅಳವಡಿಸಿದ್ದಾರೆ ಎಂದರೆ ತಪ್ಪಾಗಲಾರದು ಎಂದು ತಿಳಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಚಿಂತನೆಗಳು ಎಲ್ಲಾ ವರ್ಗಕ್ಕೂ, ಎಲ್ಲಾ ಕಾಲಕ್ಕೂ ಸಲ್ಲುವ ಚಿಂತನೆಗಳಾಗಿವೆ. ಅವರ ಚಿಂತನೆಗಳು ಬಡವರು, ದೀನ–ದಲಿತರಿಗೆ ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಸದೃಢರಾಗಿಸುವ ಪರ ಇದ್ದವು. ಇಂತಹ ಅಪರೂಪದ ಚೇತನವನ್ನು ಇಂದು ಇಡೀ ವಿಶ್ವವೇ ಕೊಂಡಾಡುತ್ತಿದೆ. ಅವರ ತತ್ವಾದರ್ಶಗಳನ್ನು ಇಂದಿನ ಯುವ ಪೀಳಿಗೆ ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಅಂಬೇಡ್ಕರ್ ಜೀವನ ಚರಿತ್ರೆಯನ್ನು ಪ್ರತಿಯೊಬ್ಬ ಕಾಲೇಜು ವಿದ್ಯಾರ್ಥಿ ಅಧ್ಯಯನ ನಡೆಸಬೇಕು. ಅಂದಿನ ಕಾಲದ ಅನೇಕ ಕಟ್ಟುಪಾಡುಗಳನ್ನು ಮೀರಿ ಉನ್ನತ ಶಿಕ್ಷಣ ಅಧ್ಯಯನ ನಡೆಸಿ, ಮಹಾಜ್ಞಾನಿ. ಜಗತ್ತಿನ ಎಲ್ಲಾ ಧರ್ಮ ಗ್ರಂಥಗಳ ಬಗ್ಗೆ ಅಧ್ಯಯನ ನಡೆಸಿದ್ದರು. ಅವರಲ್ಲಿನ ವಿದ್ವತ್ ಗುರುತಿಸಿರುವ ವಿಶ್ವಸಂಸ್ಥೆ, ಅಂಬೇಡ್ಕರ್ ಹುಟ್ಟಿದ ದಿನವನ್ನು 'ವಿಶ್ವ ಜ್ಞಾನ ದಿನ' ಎಂದು ಘೋಷಣೆ ಮಾಡಿರುವುದೇ ಸಾಕ್ಷಿ ಎಂದರು.

ಈ ವೇಳೆ ವಿಶ್ವವಿದ್ಯಾನಿಲಯ ಸಂಜೆ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಚ್. ಸೋಮಶೇಖರಪ್ಪ, ಕನ್ನಡ ಪ್ರಾಧ್ಯಾಪಕಿ ಡಾ.ಕೆ. ಸೌಭಾಗ್ಯವತಿ, ಪಠ್ಯೇತರ ಚಟುವಟಿಕೆಗಳ ಸಮಿತಿ ಸಂಚಾಲಕ ಡಾ.ನಿಂಗರಾಜು, ಡಾ.ಎನ್.ಪ್ರಕಾಶ್ ಉಪಸ್ಥಿತರಿದ್ದರು.

ನೇರಳೆ ಬೆಲೆ ದಿಢೀರ್ ಕುಸಿತ; ಖರೀದಿ ಭರಾಟೆ ಜೋರು



ಮೈಸೂರು, ಜೂ.28(ಸಿಎನ್)– ಹಣ್ಣುಗಳ ರಾಜ ಮಾವಿನ ಹಣ್ಣಿನ ಜೊತೆಗೆ ಏಕಕಾಲಕ್ಕೆ ಮಾರುಕಟ್ಟೆಗೆ ಲಗ್ಗೆ ಇಟ್ಟಿದ್ದ ನೇರಳೆಹಣ್ಣಿನ ಬೆಲೆಯಲ್ಲಿ ದಿಢೀರ್ ಕುಸಿತ ಕಂಡಿದೆ. ವರ್ಷದಲ್ಲಿ ಒಂದು ತಿಂಗಳು ಮಾತ್ರ ಸೀಸನ್ ಇರುವ ನೇರಳೆ, ಮಾರುಕಟ್ಟೆಯಲ್ಲಿ ದುಬಾರಿ ಬೆಲೆಗೆ ಮಾರಾಟ ಆಗುತ್ತಿತ್ತು. ಆದರೆ ಇದೀಗ ಅಗ್ಗದ ದರದಲ್ಲಿ ಮಾರುವ ಅನಿವಾರ್ಯತೆ ಉಂಟಾಗಿದೆ.

ನಗರದ ದೇವರಾಜ ಮಾರುಕಟ್ಟೆ, ಡಿಸಿ ಕಚೇರಿ, ಬನ್ನಿಮಂಟಪ, ಮೈಸೂರು ವಿವಿಯ ರಸ್ತೆಗಳಲ್ಲಿ ನೇರಳೆಹಣ್ಣು ಹೇರಳವಾಗಿ ಕಂಡು ಬರುತ್ತಿದೆ. ಇನ್ನು ಮಾರುಕಟ್ಟೆಗೆ ಬಂದಾಗ ನೇರಳೆ ಬೆಲೆ ಕೆಜಿಗೆ 400 ರೂ. ಇತ್ತು. ಇದೀಗ ಗಣನೀಯ ಕುಸಿತ ಕಂಡು ಗಾತ್ರಾನುಸಾರ 1 ಕೆಜಿಗೆ 70 ರಿಂದ 100 ರೂ.ನಂತೆ ಮಾರಾಟವಾಗುತ್ತಿದೆ. ನೇರಳೆ ಬೇಸಿಗೆಯಲ್ಲಿ ಹೆಚ್ಚಾಗಿ ಮಾರುಕಟ್ಟೆಯಲ್ಲಿ ಕಾಣಸಿಗುತ್ತದೆ. ಇದನ್ನು 'ಜಾಮೂನ್' ಎಂದೂ ಕರೆಯುತ್ತಾರೆ. ಈ ಹಣ್ಣು ಅದರ ಗಾಢ ಬಣ್ಣ ಮತ್ತು ಹುಳಿ–ಸಿಹಿ ರುಚಿಯಿಂದಾಗಿ ತುಂಬಾ ಜನರು ಇಷ್ಟಪಡುತ್ತಾರೆ. ಅಲ್ಲದೇ ಅನೇಕ ಆಯುರ್ವೇದ ಗುಣಗಳನ್ನು ಹೊಂದಿರುವ ಈ ಹಣ್ಣಿನಲ್ಲಿ ವಿಟಮಿನ್‌ಗಳು ಹೇರಳವಾಗಿವೆ.

ಈ ಹಣ್ಣು ಅನೇಕ ತಳಿಗಳನ್ನು ಹೊಂದಿವೆ. ಜಂಬೂ ನೇರಳೆ, ನಾಯಿ ನೇರಳೆ, ಗುಂಡು ನೇರಳೆ, ಸಣ್ಣ ನೇರಳೆ ಎಂಬಿತ್ಯಾದಿ ತಳಿಗಳಿವೆ. ಜಂಬೂ ನೇರಳೆಯಲ್ಲಿ, ನಾಟಿ ನೇರಳೆ ಹಾಗೂ ಫಾರಂ ನೇರಳೆ ಮಾತ್ರ ಮಾರುಕಟ್ಟೆಯಲ್ಲಿ ಹೆಚ್ಚು ಬೇಡಿಕೆ ಹೊಂದಿವೆ ಉಳಿದ ನೇರಳೆಯನ್ನು ಮಾರಾಟ ಮಾಡುವುದು ವಿರಳವಾಗಿದೆ. ಇನ್ನು ಔಷಧೀಯ ಗುಣ ಹೊಂದಿರುವ ನೇರಳೆ ಹಣ್ಣಿನ ಬೆಲೆ ಏರು–ಪೇರಿನ ನಡುವೆಯೂ ಗ್ರಾಹಕರು ಖರೀದಿಗೆ ಮುಂದಾಗಿದ್ದಾರೆ.

ವಿವಿಧ ರೋಗಕ್ಕೆ ನೇರಳೆ ರಾಮಬಾಣ: ರಕ್ತಹೀನತೆ, ಕೆಮ್ಮು, ಐಬಿಎಸ್, ಅತಿಸಾರ, ಅತಿಯಾದ ರಕ್ತಸ್ರಾವ, ಹೈಪರ್ಗ್ಲೈಸೀಮಿಯಾ, ಲ್ಯುಕೋರಿಯಾ, ವಾಕರಿಕೆ ಮತ್ತು ವಾಂತಿ ಸಮಸ್ಯೆಯಿಂದ ಬಳಲುತ್ತಿರುವ ಜನರಿಗೆ ನೇರಳೆ ಹಣ್ಣು ಅಮೃತವಾಗಿದೆ ಎಂದು ವೈದ್ಯರ ಸಂಶೋಧನೆ ಬಳಿಕ ತಿಳಿದು ಬಂದಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದೆ

ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ಯಾದವಗಿರಿ, ಮೇಟಗಳ್ಳಿ, ಹೆಬ್ಬಾಳು ಕಡೆ ಶೆಡ್ ಸ್ವಂತಕ್ಕೆ ಬೇಕಾಗಿದೆ. ಮಾರಾಟಗಾರರು ಇದ್ದರೆ ಸಂಪರ್ಕಿಸಿ:

ಪ್ರಕಾಶ್ ಕುಮಾರ್

89714–60235

ಬಾಡಿಗೆಗೆ / ಲೀಸ್‌ಗೆ ಸಿಗುತ್ತದೆ

ವಾಣಿಜ್ಯ ಉದ್ದೇಶ
ಗ್ರೌಂಡ್ ಫ್ಲೋರ್ – 750 sq.ft.
ಮೊದಲ ಫ್ಲೋರ್ – 800 sq.ft.
(ಲಿಫ್ಟ್ ಸೌಲಭ್ಯವಿದೆ)
ಸಂಪರ್ಕಿಸಿ:

80953-33038 / 98803-93339

ವಿಳಾಸ: ನಂ.83, ಎಸ್.ಡಿ. ಜಯರಾಮ್ ಲೇಔಟ್, ರಿಂಗ್ ರಸ್ತೆ, ಆಲನಹಳ್ಳಿ, ಮೈಸೂರು. (ದೇವೇಗೌಡ ಸರ್ಕಲ್ ಬಳಿ)

IMMEDIATE REQUIREMENTS

We Electrical India Pvt. Ltd.
Male & Female candidates
- SSLC / PUC
- HR 2 years experience
- Front Receptionist 2 years experience

Hootagalli Industrial Area

76769-28664 / 77957-90081

ಕೆಲಸಕ್ಕೆ ಬೇಕಾಗಿದ್ದಾರೆ

ಶ್ರೀ ಮಹಾದೇಶ್ವರ ಸೂಪರ್ ಸರ್ವೀಸ್ (HPCL ಪೆಟ್ರೋಲ್ ಬಂಕ್) ವಿವೇಕಾನಂದ ಸರ್ಕಲ್ ಬಳಿ, ವಿವೇಕಾನಂದನಗರ, ಮೈಸೂರು–570 023. ಸಂಪರ್ಕಿಸಿ:

8951195363, 7259849439

ಮನೆ ಭೋಗ್ಯಕ್ಕೆ ಇವೆ

ಶ್ರೀರಂಗಪಟ್ಟಣ ರಂಗನಾಥ ದೇವಸ್ಥಾನದ ಹತ್ತಿರ, ರೈಲ್ವೆ ಸ್ಟೇಷನ್ ಹತ್ತಿರ, ಶ್ರೀ ಮಾತಾ ಲಾಡ್ಜ್ ಹಿಂಭಾಗ, ಪೂರ್ವಕ್ಕೆ ಹಾಗೂ ಉತ್ತರಕ್ಕೆ ಬಾಗಿಲು 30'x40', 2 BHK, ಮನೆಗಳು, Ground Floor, 1st Floor, 2nd Floor, ಪಾರ್ಕಿಂಗ್ ವ್ಯವಸ್ಥೆ ಸೌಲಭ್ಯವಿದೆ.

90083-31340 / 87927-60090

ಬೇಕಾಗಿದ್ದಾರೆ

ಮೆಡಿಕಲ್ ಶಾಪ್ ಸೇಲ್ಸ್‌ನಲ್ಲಿ ಅನುಭವವಿರುವ ಯುವಕರು / ಯುವತಿಯರು ಬೇಕಾಗಿದ್ದಾರೆ. ಕರೆ ಮಾಡಿ

90192–03326

ಮೈಸೂರಿನಲ್ಲಿ ಉದ್ಯೋಗ

ಕುವೆಂಪುನಗರದಲ್ಲಿ ನೂತನವಾಗಿ ಆರಂಭವಾಗಿರುವ AWBM, ಕಂಪನಿಗೆ Freshers & Experience ಇರುವ ಕನ್ನಡಬಲ್ಲ ಅಭ್ಯರ್ಥಿಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC (pass) PUC, ITI, Dip. any Degree
ವಯೋಮಿತಿ: 18 to 30 year
ತಿಂಗಳಿಗೆ: 26000 – 35000
(ಉಚಿತ: ಊಟ । ವಸತಿ ಸೌಲಭ್ಯವಿದೆ)

ಪ್ರಗತಿ ಗೌಡ **84948-28606 73496-99460**

ಹೆಸರು ಬದಲಾವಣೆ

ಯತೀಶ ಎಂ. ಆದ ನಾನು ಮೈಸೂರು ಸಿಟಿ–570009 ಟಿ.ಕೆ. ಲೇಔಟ್, 8ನೇ ಮೇನ್, 9ನೇ ಕ್ರಾಸ್, ಮನೆ ನಂ. 289 ನಲ್ಲಿ ವಾಸವಾಗಿರುತ್ತೇನೆ. ನನ್ನ ವಯಸ್ಸು 45 ವರ್ಷ, ನನ್ನ ತಂದೆ ಹೆಸರು ಮಾದಶೆಟ್ಟಿ, ಹಳೆಯ ಹೆಸರು – Yathisha .M ಆಗಿರುತ್ತದೆ. ಬದಲಾವಣೆ ಹೆಸರು – Yatheesha .M ಎಂದು ಬದಲಾಯಿಸಲು ನೋಟರಿ ವಾಸುದೇವ ಅವರ ಮುಂದೆ ಪ್ರಮಾಣಿಸಿರುತ್ತೇನೆ. Sd/-Yatheesha .M

HOUSE FOR RENT

2 BHK, Big Rooms & Hall, 2nd Floor at Nazarbad (near Siddhartha Hotel), Mysore-10

Mob: **93425-42942 80735-52347**

ಮನೆ ಬಾಡಿಗೆಗೆ ಇದೆ

30'x40', ಗ್ರೌಂಡ್ ಫ್ಲೋರ್, 2 ಬೆಡ್ ರೂಂ, ವಾಹನ ನಿಲುಗಡೆಗೆ, ನೀರು, ಸೋಲಾರ್ ಸೌಲಭ್ಯವಿದೆ. ಪಶ್ಚಿಮಕ್ಕೆ ಬಾಗಿಲು. ಸಂಪರ್ಕಿಸಿ ಸಂಜೆ 6ರ ನಂತರ.

Mob: **94489-58429 94801-02135**

ಉಚಿತ ತರಬೇತಿ

ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಆಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:

7406375196, 9880548596

ಮಂಟಪ ಮನೆ

ನಿತ್ಯ ಪೂಜೆ ಮಾಡಲು ನಿಮಗೊಂದು ದೇವರ ಮಂಟಪ ಬೇಕೇ ಬೀಟೆ ಮತ್ತು ಹಲಸು ಮರದಿಂದ ತಯಾರಿಸುತ್ತೇವೆ ಸಂಪರ್ಕಿಸಿ: ಶ್ರೀನಗರ ಮೈಸೂರು



9448207634 9036742526

WANTED

MARKETING EXECUTIVE

BODHA DIGITAL ACADEMY
Kuvempunagar, Mysuru
Salary 15K + Incentives

Call: 9964723355

ಶ್ರೀ ಗೌರಿಶಂಕರ ಟ್ರಾವೆಲ್ಸ್

8-7-2023 (4 ದಿನ): ಭೀಮಾಶಂಕರ, ಶಿರಡಿ, ಎಲ್ಲೋರ, ಘೃಷ್ಣೇಶ್ವರ, ತ್ರಯಂಬಕೇಶ್ವರ.
30-7-23 (1 ದಿನ): ಕೋಟಿಲಿಂಗ, ಇಶಾ ಫೌಂಡೇಷನ್.
26–8–23 (7 ದಿನ): ಅಯೋಧ್ಯೆ, ಕಾಶಿ, ಗಯಾ, ಬಾಬಾ ಬೈದ್ಯನಾಥ್.
21–9–23 (13 ದಿನ): ಗಂಗೋತ್ರಿ, ಯಮುನೋತ್ರಿ, ಬದರಿನಾಥ್, ಕೇದಾರ್‌ನಾಥ್.

Mob: 9620002114

ಕೆಲಸಕ್ಕೆ ಬೇಕಾಗಿದ್ದಾರೆ

ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಅನಿಮಲ್ ಫೀಡ್ ಕಂಪನಿಗೆ 18 ರಿಂದ 45 ವರ್ಷದ ಒಳಗಿನ ಪುರುಷರು ಲೋಡಿಂಗ್, ಪ್ಯಾಕಿಂಗ್ ಮತ್ತು ಪೌಡರಿಂಗ್ ಕೆಲಸ ಮಾಡಲು ಬೇಕಾಗಿದ್ದಾರೆ. ವಿದ್ಯಾರ್ಹತೆ ಅವಶ್ಯಕತೆ ಇಲ್ಲ. ಸಂಬಳ: 8 ಗಂಟೆ ಕೆಲಸಕ್ಕೆ 18,000/- ಸಂಪರ್ಕಿಸಿ: **ಸಾಯಿಕೃಪ ಎಂಟರ್ ಪ್ರೈಸಸ್,**

ಜೋರೇಗೌಡ – 80509–05152
ರತ್ನಮ್ಮ – 99008–89325
ಪ್ರಕಾಶ – 89714–60235

Looking for FINANCE INVESTORS

(Only for Land Developers)

ಹಣಕಾಸು ಹೂಡಿಕೆದಾರರಿಗೆ
ಎದುರು ನೋಡಲಾಗುತ್ತಿದೆ
(ಭೂಮಿ ಅಭಿವೃದ್ಧಿಗಾಗಿ ಮಾತ್ರ)

Mob: 97396-27282

ಸುವರ್ಣ ಯಾತ್ರ

9 ದಿನಗಳ ನೇಪಾಳ ಪ್ರವಾಸ 18–07–23
8 ದಿನಗಳ ಗುಜರಾತ್ ಪ್ರವಾಸ 2 ಜ್ಯೋತಿರ್ಲಿಂಗ ಸೇರಿ 11–08–23
3 ದಿನಗಳ ಶಿರಡಿ ಪ್ರವಾಸ 3 ಜ್ಯೋತಿರ್ಲಿಂಗ್ ಸೇರಿ 18–08–23

9019462508 9008381022

ತಕ್ಷಣ ಬೇಕಾಗಿದ್ದಾರೆ

ಅನುಭವವುಳ್ಳ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ಉತ್ತಮವಾದ ಸಂಬಳ ವಯೋಮಿತಿ 35 ರಿಂದ 48 ರವರೆಗೆ ಮೇಟಗಳ್ಳಿ, ಬೆಳವಾಡಿ, ಜೆ.ಪಿ.ನಗರ, ಬೋಗಾದಿ ಹಾಗೂ ಮೈಸೂರಿನ ಸುತ್ತ ಮುತ್ತ ಇರುವ ಪ್ರದೇಶಗಳಿಗೆ

0821-4852002 9538886328

ಪ್ರದರ್ಶನಕಾರರು ಬೇಕಾಗಿದ್ದಾರೆ

ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ ಜಿಲ್ಲೆಯ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ನಮ್ಮ ಭಾರತ ಮಕ್ಕಳ ಚಲನಚಿತ್ರವನ್ನು ಪ್ರದರ್ಶನ ಮಾಡಲು ಹಂಚಿಕೆದಾರರು ಬೇಕಾಗಿದ್ದಾರೆ. ಚಿತ್ರವು DDPE ಅವರಿಂದ ಪ್ರದರ್ಶನ ಮಾಡಲು ಅಂಗೀಕೃತವಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ,

ಕುಮಾರಸ್ವಾಮಿ, ನಿರ್ದೇಶಕರು

9448263260

ಹೋಲ್‌ಸೇಲ್ ದರದಲ್ಲಿ

ಜೀವಂತ ನಾಟಿ ಕೋಳಿ ಕೆ.ಜಿ. ರೂ. 260, ರೂ. 350, ರೂ. 580



ಗೌಡ್ರು ನಾಟಿಕೋಳಿ ಅಂಗಡಿ
ನಂ. 198/1, ಪಿ&ಟಿ ಕ್ವಾಟ್ರಸ್ ಮೇನ್ ರೋಡ್, ದೊಡ್ಡಮ್ಮ ತಾಯಿ ಕಲ್ಯಾಣ ಮಂಟಪ ಪಕ್ಕ, ಎನ್.ಆರ್. ಮೊಹಲ್ಲಾ, ಮೈಸೂರು–570 007

9448048576, 9632378020

ITIಗೆ ಪ್ರವೇಶಾವಕಾಶ

ಎರಡು ವರ್ಷದ ITI ತರಬೇತಿಗೆ SSLC, PUC ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ NCVT ಭಾರತ ಸರ್ಕಾರದಿಂದ ಸಂಯೋಜನೆ ಗೊಂಡಿರುತ್ತದೆ.

ಬೆನಕ ಐ.ಟಿ.ಐ. ಕಾಲೇಜ್

ಕಾವೇರಿ ವೃತ್ತದ ಹತ್ತಿರ, ಡಾ|| ರಾಜ್‌ಕುಮಾರ್ ರಸ್ತೆ, ರಾಘವೇಂದ್ರ ನಗರ, ಮೈಸೂರು–29

9342123467,9141756695

NEW APPARTMENT FOR SALE OR RENT

Kuvempunagar
1100 sq.ft.
North Face

Mob: **94806-06154 94483-24232**

ಮೈಸೂರಿನಲ್ಲಿ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಸೈಟುಗಳು ಬೇಕಾದಲ್ಲಿ ಕೂಡಲೇ

ಸಂಪರ್ಕಿಸಿ:

82770–47300

DTCP SITES FOR SALE

DTCP Sites
Rs. 699 per sq.ft.,
Near Jayapura,
H.D. Kote Road, Mysore.

9590491194,9606783264

ಮಾರಾಟಕ್ಕಿದೆ

30X40, S/F ಬೆಲೆ – 57 ಲಕ್ಷ, ರೂಪ ನಗರ, ಮೈಸೂರು
25X29, W/F ಬೆಲೆ – 27 ಲಕ್ಷ, ಬೋಗಾದಿ, ಮೈಸೂರು

9986856999

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.

SMART HAIR FIXING

574, 9th Cross, Anikethana Road, kuvempunagar, Nysuru

MYSURU 9611028523 MANGALORE 9343142258

SITES FOR SALE

MUDA APPROVED
SEREIN VILLAS
30X40, 30X50
NEAR RAINBOW SCHOOL
MARTIKYATHANALLI
BOGADI ROAD, MYSORE

9448054390

ಬರವಣಿಗೆ ಕೆಲಸ

ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.

97318 91409

ಸೈಟ್ ಮಾರಾಟಕ್ಕಿವೆ

JSS ಲೇಔಟ್, 1ನೇ ಹಂತ ಹಾಗೂ 2ನೇ ಹಂತ,
40'x60', 30'x50',
ಪೂರ್ವ ದಿಕ್ಕು, ಉತ್ತರ ದಿಕ್ಕು

Mob: 99017-72178

WANTED

SERVICE ENGINEER
B.E / DIPLOMA / ITI / MECHANICAL
KENT RO WATER PURIFIER
AUTHORISED SERVICE CENTER / HOME APPLIANCES
TELE CALLER / OFFICE WORK - FEMALE

99002-37315 / 98459-63421

ಸಂಪು ಕ್ಲೀನಿಂಗ್

ಸಂಪರ್ಕಿಸಿ:

8431541631

ಉದ್ಯೋಗ ಅವಕಾಶ

ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ. ಸಂಬಳ+ಓಟಿ 15200/- to 86000/-

9740733021 9535028750

WANTED FOR Bhaskar Heart Centre

Post	Qualification
Receptionist	Degree / PUC
Marketing / PRO (M)	Degree / PUC
Staff Nurses (F)	GNM / ANM
Laboratory Technician	CMLT / DMLT
Housekeeping	7th Standard

0821-2499188 / 9880186386

WANTED

Receptionist ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
ಸಂಬಳ **20000-30000/-**

Ph.8860369369

SHIVARAMPET, MYSURU

ಸಂಪು ಕ್ಲೀನಿಂಗ್‌ಗಾಗಿ

ಸಂಪರ್ಕಿಸಿ:

8861612486

SITE FOR SALE

30'x40', North Facing,
Mysore Government allotted Sites
1 km to NH 75 Mysore-Bengaluru Road, within 1.5 km Hospital, School, Colleges, 2 mins drive from Manipal Hospital & Narayana Hridayalaya.
Price: 40 lakhs (Negotiable)

Contact: 89719-55449

ಸೈಟುಗಳು ಮತ್ತು ಜಮೀನಿಗೆ

ಫೆನ್ಸಿಂಗ್ ಕಲ್ಲುಗಳು ಹಾಗೂ ಕಾಂಪೌಂಡ್ ಹಾಕಿ ಕೊಡಲಾಗುತ್ತದೆ ಮತ್ತು ಗ್ರಾವೆಲ್ ಮಣ್ಣು ದೊರೆಯುತ್ತದೆ.

72594-07518 / 83102-20458

WANTED

We require ITI Turner, Fitter, Electrical and Diploma in mechanical, preferably Female. Contact:

0821-2582668 / 7204445679

Address: **Mystech Machines** #Q113, 4th Cross, 8th Main, Hebbal Industrial Estate, Mysore-570016

Sudarshan Saur

SOLAR WATER HEATER



ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available

SUNZONE SOLAR SYSTEM
Vishwamanava Double Road, Kuvempunagar, Mysuru

9845175443

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್

ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.

Mob: 9008711654

ಸೈಟು ಬೇಕಾಗಿದೆ

ರಾಜ್‌ಕುಮಾರ್ ರಸ್ತೆ
HPO & RMS Layout
Shakthinagar.
30x40, North or East.
ಮಧ್ಯವರ್ತಿಗಳು ಕ್ಷಮಿಸಿ.

Mob: 9945323573

ಸೈಟು ಮಾರಾಟಕ್ಕಿದೆ

40x60 ಅಳತೆಯ DTCP "A" ಖಾತೆಯುಳ್ಳ ಸೊಸೈಟಿ ಸೈಟು ಮಾರಾಟಕ್ಕಿದೆ. 26 ಲಕ್ಷಗಳು ಮಾತ್ರ, ನಂಜುಂಡೇಶ್ವರ ನಗರ, T.V.S. ಫ್ಯಾಕ್ಟರಿ ಹತ್ತಿರ, ಮೈಸೂರು.

Mob: 97421 98093

SITE FOR SALE

30'x40' Site for Sale at Somanathanagar (near Adithya Circle)

Call: 98802-73834

ಉಚಿತ ಚಿಕಿತ್ಸೆ

ತಲೆ ನೋವು, ತಲೆ ಹೊಟ್ಟು, ಕೂದಲು ಉದುರುವುದು, ಇನ್ನಿತರ ಸಮಸ್ಯೆಗಳಿಗೆ ಉಚಿತ ಚಿಕಿತ್ಸೆ ನೀಡಲಾಗುತ್ತದೆ.
ಸಮಯ: ಬೆಳಿಗ್ಗೆ 10 ರಿಂದ 5 ರವರೆಗೆ
ಸ್ಥಳ: ನಾರಾಯಣಶಾಸ್ತ್ರಿ ರಸ್ತೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

94487-44888

ಬೇಕಾಗಿದ್ದಾರೆ

ವೆಜ್ ರೆಸ್ಟೋರೆಂಟ್‌ನಲ್ಲಿ ಅಡುಗೆ ಭಟ್ಟರು, ದೋಸೆ ಮಾಡುವವರು, ಸಪ್ಲೇಯರ್ಸ್ (ಹುಡುಗ, ಹುಡುಗಿ) ಬೇಕಾಗಿದ್ದಾರೆ.
ರೂಂ ವ್ಯವಸ್ಥೆ ಇದೆ. ಕೂಡಲೇ ಸಂಪರ್ಕಿಸಿ:

7795518038, 8884208814

COMMERCIAL PROPERTY FOR SALE

85x150
DC Conversion land, Manandavadi Main Road, Srirampura, Mysuru.

7795405060, 9886655642

REQUIRED

TELECALLERS, MEN & WOMEN
For Bajaj Finance Company
Any qualification eligible.
Langauge: Tamil, Telugu, Malayalam and Kannada.

6969567994, 8105624293

Wanted Immediately

1) Marketing Executive - Male
2) Receptionist - Female

having relevance experience in Health Care Hospital for a reputed Hospital.
Interested candidate may contact Admin

9482607226, 8951220795

Shree Mahadeshwara Nursing Home
No. 7, Buddha Marga, Siddarthanagar, Mysore

ಕೆಲಸಕ್ಕೆ ಬೇಕಾಗಿದ್ದಾರೆ

ಪಾನಿ ಪೂರಿ, ಮಸಾಲೆಪೂರಿ, ಗೋಬಿ, ಬೋಂಡ, ಬಜ್ಜಿ, ಸಮೋಸ, ಕಾಫಿ, ಟೀ ಕೆಲಸಕ್ಕೆ ಬೇಕಾಗಿದ್ದಾರೆ.

Mob: 7975755792

WANTED

SALES BOYS for **SPORTS SHOP**
Part Time
Evening 5 pm to 9.15 pm
Mysore.

Mob: **77601-09047 81053-68325**

ಕಳೆದಿದೆ

ಶಶಿಧರ್ ಕೆ.ಆರ್., ಮನೆ ನಂ. 158, 1ನೇ ಮೇನ್, 11ನೇ ಕ್ರಾಸ್, ಬೆಳವಾಡಿ, ಮೈಸೂರು, ನಮಗೆ ಸೇರಿದ ನಿವೇಶನ ಸಂಖ್ಯೆ 8097 ರ ಮೈಸೂರು ನಗರದ ವಿಜಯನಗರ 4ನೇ ಹಂತ, 2ನೇ ಫೇಸ್ ಮೂಲ ನಿವೇಶನ ನೋಂದಾಯಿತ ಶುದ್ಧ ಕ್ರಯ ಪತ್ರವು (MYS-1-04208-2014-15) ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:

Mob: 8105668686

FOR RENT

2 BHK, G/F, vetrified tiles / modular kitchen. Cars / Bikes parking space. Suitable for Office cum Residence / Guest House / Quarters, Hinkal (Vijayanagar 3rd Stage).

Mob: 9481426957

ಪಾರ್ಟ್ ಟೈಂ ಕೆಲಸ ಇದೆ

ರೆಡಿಮೇಡ್ ಅಂಗಡಿಗೆ ಹೆಲ್ಪರ್ ಸೇಲ್ಸ್‌ಗರ್ಲ್ ಮಾತ್ರ 30 ವರ್ಷ ಒಳಗೆ
9.30 am to 3.00 pm 1 post
3.00 pm to 8.30 pm 1 post
4.00 pm to 8.30 pm 1 post
ಅನುಭವ ವಿದ್ಯಾರ್ಹತೆ ಬೇಕಿಲ್ಲ.
ಅಗ್ರಹಾರ ಬಸವೇಶ್ವರ ರಸ್ತೆ, 5ನೇ ಕ್ರಾಸ್

9591327746

ಪ್ರಮಾಣ ಪತ್ರ

ನಾಜಿಯಾ ಬಾನು, ನಂ. 3150, ಸಾಡೆರಸ್ತೆ, ಅಶೋಕ ರಸ್ತೆ, ಮಂಡಿ ಮೊಹಲ್ಲಾ, ಮೈಸೂರು, ಇಲ್ಲಿ ವಾಸವಿದ್ದು, ನನ್ನ ಮಗುವನ್ನು ಪ್ರೆಸಿಂಡೆಷನ್ ಪಬ್ಲಿಕ್ ಸ್ಕೂಲ್‌ಗೆ ದಾಖಲು ಮಾಡುವಾಗ ಹೆಸರನ್ನು ಮಹಮ್ಮದ್ ಮಜೀದ್ ಷರೀಫ್ ಎಂದು ನಮೂದಿಸಿದ್ದು, ಜನನ ಪ್ರಮಾಣ ಪತ್ರದಲ್ಲಿ Kushaan Rizwan Shariff (ಕುಶಾನ್ ರಿಜ್ವಾನ್ ಶರೀಫ್) ಎಂದು ಹೆಸರು ನಮೂದಿಸಲಾಗಿದೆ. ಆದ್ದರಿಂದ ಶಾಲಾ ದಾಖಲಾತಿಯಲ್ಲಿ ತಿದ್ದುಪಡಿ ಮಾಡಲು ಮೇಲ್ಕಂಡ ಅಂಶಗಳನ್ನು ಧೃಢೀಕರಿಸಿ, ನೋಟರಿ ಸಿ.ಆರ್. ಸೀತಾರಾಮ್ ಎದುರು ಪ್ರಮಾಣೀಕರಿಸಿರುತ್ತೇನೆ. ಸಹಿ/– ನಾಜಿಯಾ ಬಾನು

ಬೇಕಾಗಿದ್ದಾರೆ

ಮೈಸೂರಿನ ಪ್ರಸಿದ್ಧ ಆಟೋಮೊಬೈಲ್ ಕಂಪನಿಗೆ ಬೇಕಾಗಿದ್ದಾರೆ.
* ಮಾರ್ಕೆಟಿಂಗ್ ಸೇಲ್ಸ್ ಎಕ್ಸಿಕ್ಯೂಟಿವ್.
ಕೂಡಲೇ ಸಂಪರ್ಕಿಸಿ:

Mob: 8660381094

Email: starmysoreresume@gmail.com

ಮನೆ ಸಾಲ

ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
#2921/ಎ, ಸರಸ್ವತಿಪುರಂ, ಮೈಸೂರು

11B ಮತ್ತು 9 & 11A ಖಾತಾಗಳಿಗೂ ಮುಡಾ & ಕಾರ್ಪೋರೇಷನ್ ಖಾತೆ ಇದ್ದರು, ಇಲ್ಲದಿದ್ದರೂ ಹಾಗೂ 15,000 ಮೇಲ್ಪಟ್ಟ ಸಂಬಳ ಇರುವವರಿಗೆ ಪರ್ಸನಲ್ ಲೋನ್ ಹಾಗೂ ಇಂಡಸ್ಟ್ರಿಯಲ್ ಮಾರ್ಟ್‌ಗೇಜ್ ಲೋನ್ ಸೌಲಭ್ಯ ದೊರೆಯುತ್ತದೆ.

8088647887

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು

Famous Astrologer
ಪಂಡಿತ್ ಸಂತೋಷ್. **9741250896**

ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.

ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ., ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು

ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990

ತಾಯಿ ಚಾಮುಂಡೇಶ್ವರಿ ಕಾಣತೂರ ನಾಲ್ವರ ದೈವ ಚೌಡಿಕ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸಬರ್ಬ್ ಬಸ್‌ಸ್ಟಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೀರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಬೇವಿನ ಹಿಂಡಿ

ಉತ್ತಮ ದರ್ಜೆಯ ಪರಿಶುದ್ಧವಾದ ಗಾಣದ ಬೇವಿನ ಹಿಂಡಿ (Cold Pressed) ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ–ನೀಮ್
#203, ಬನ್ನಿಮಂಟಪ ಬಡಾವಣೆ, ಮೈಸೂರು–570 015

Mob: 80888-87802

ಅಡುಗೆಯವರು ಬೇಕಾಗಿದ್ದಾರೆ

ಮಡಿಕೇರಿಯ ಹೋಂ ಸ್ಟೇ ಗೆ ಅಡುಗೆಯವರು ಬೇಕಾಗಿದ್ದಾರೆ. ಊಟ ಮತ್ತು ವಸತಿ ಸೌಲಭ್ಯ ಹಾಗೂ ಆಕರ್ಷಕ ವೇತನ ನೀಡಲಾಗುವುದು. ಸಂಪರ್ಕಿಸಿ.

7337722277

ಬೇಕಾಗಿದ್ದಾರೆ

ಬ್ಯುಸಿನೆಸ್ ಡೆವಲಪ್‌ಮೆಂಟ್ ಎಕ್ಸಿಕ್ಯೂಟಿವ್ / ಬ್ಯುಸಿನೆಸ್ ಡೆವಲಪ್‌ಮೆಂಟ್ ಮ್ಯಾನೇಜರ್, ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಮೈಸೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ (ಪಾರ್ಟ್ ಟೈಮ್ ಹಾಗೂ ಫುಲ್ ಟೈಮ್). ದ್ವಿಚಕ್ರ ವಾಹನ ಹಾಗೂ ಮಾರ್ಕೆಟಿಂಗ್ ಅನುಭವ ಇರಬೇಕು.ವಯಸ್ಸು: 40ರ ಒಳಗೆ.
ಆಸಕ್ತಿ ಇದ್ದವರು ಸಂಪರ್ಕಿಸಿ:

8310098788 6361439167

Competitive Exam Coaching

Indira Academy Offers Coaching for: MBA entrance, Bank Exam, GRE, UPSC, Railway & PSI other competitive exams.
Interested please contact:

9600377104

ಮೈಸೂರು ಮ್ಯಾರೇಜ್ ಬ್ಯೂರೋ

ಎಲ್ಲಾ ಜಾತಿಯ ವಧುವರರು–ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ: ಮದುವೆ ವಿಳಂಬವಾದಲ್ಲಿ ಪರಿಹಾರ

ಡಾ|| ಗುರೂಜಿ

9448229184 | 7899625268

ಬೇಕಾಗಿದ್ದಾರೆ

ಜಿಆರ್‌ಎಸ್ ಹತ್ತಿರ ಇರುವ ಭಾರತ್ ಪೆಟ್ರೋಲಿಯಂ ಪೆಟ್ರೋಲ್ ಪಂಪಿನಲ್ಲ ಕೆಲಸ ಮಾಡಲು 20 ರಿಂದ 40ರ ವಯೋಮಿತಿ ಒಳಗೆ ಇರುವ ಹೆಂಗಸರು ಹಾಗೂ ಗಂಡಸರು ಬೇಕಾಗಿದ್ದಾರೆ. ಇರುವ ಹುದ್ದೆಗಳು ಅಕೌಂಟೆಂಟ್, ಕ್ಯಾಶಿಯರ್ ಮತ್ತು ಹೆಲ್ಪರ್ ಉತ್ತಮ ಸಂಬಳ ಹಾಗೂ ಊಟದ ವ್ಯವಸ್ಥೆ ಇರುತ್ತದೆ ಸಂಪರ್ಕಿಸಿ.

7259858585

WANTED

Cashier & Biller (Ladies Only) For Reputed Military Hotel, Mysuru. Call:

6363210535

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್

27/7:–ಪಂಡರಾಪುರ, ಶನಿಶಿಂಗನಾಪುರ, ಔರಂಗಾಬಾದ್, ಎಲ್ಲೋರಾ, ಘೃಷ್ಣೇಶ್ವರ, ಶಿರಡಿ, ನಾಸಿಕ್, ತ್ರಯಂಬಕೇಶ್ವರ, ಭೀಮಾಶಂಕರ್, ತುಳಜಾ ಭವಾನಿ, ಸೊಲ್ಲಾಪುರ.
18/7:–ಪುರಿ ಜಗನ್ನಾಥ್, ಕೋನಾರ್ಕ್, ಚಂದ್ರಭಾಗ ಬೀಚ್.
10/8:–ನೇಪಾಳ ಮುಕ್ತಿನಾಥ, ಪಶುಪತಿನಾಥ .
20/7:–ಕಾಶಿ, ಗಯಾ, ಬುದ್ಧಗಯಾ, ಅಯೋಧ್ಯೆ.

9591017782 9964527782

ಸೈಟು ಮಾರಾಟಕ್ಕಿದೆ

ಮುಡಾ ಅನುಮೋದಿತ
30x40 - W/F, 40x60 - W/F, 30x60 - Corner, 58x60- Corner, ಯುನಿವರ್ಸಿಟಿ ಲೇಔಟ್ ಎದುರು, ರಿಂಗ್ ರೋಡ್ ಹತ್ತಿರ , 30x40 ವರಕೂಡು ಹತ್ತಿರ, ಸಂಪರ್ಕಿಸಿ

9900372792

ಬೇಕಾಗಿದ್ದಾರೆ

ಸೆಕ್ಯೂರಿಟಿ ಗಾರ್ಡುಗಳು: ಸ್ಥಳ – 1. ಕೊಳ್ಳೇಗಾಲ 2. ಗುಂಡ್ಲುಪೇಟೆ 3.ಕಡಕೋಳ 4.ಆಲನಹಳ್ಳಿ
ಮಹಿಳಾ ಸೆಕ್ಯೂರಿಟಿ: ಸ್ಥಳ – ಸಿಟಿ ಸುತ್ತಮುತ್ತಾ
ಸಮಯ: ಬೆಳಗ್ಗೆ 11 ರಿಂದ ರಾತ್ರಿ 9ರವರೆಗೆ
ಸಂಪರ್ಕಿಸಿ

9686422400 9686566261

ರೂಂ ಬಾಯ್ ಬೇಕಾಗಿದ್ದಾರೆ

ಶ್ರೀ ಗಣೇಶ್ ಪ್ರಸಾದ್ ಲಾಡ್ಜ್, ರಾಜ್‌ಕಮಲ್ ಥಿಯೇಟರ್ ಎದುರು, ಶಿವರಾಂಪೇಟೆ , ಮೈಸೂರು

9986756866

ಬೇಕಾಗಿದ್ದಾರೆ

ಹೊಟೇಲ್ ಒಂದಕ್ಕೆ ಹೌಸ್ ಕೀಪಿಂಗ್ ಸಿಬ್ಬಂದಿ ಮತ್ತು ಸೂಪರ್‌ವೈಸರ್ ಬೇಕಾಗಿದ್ದಾರೆ. ಸಂಪರ್ಕಿಸಿ:

9880962410

WANTED

Immediate joiner
Admin : 3 Nos.
Female Telecaller: 20 Nos.
PG Facilities available.
Contact: **Meghana, HR**

Mob: 7829803426

ಕೆಲಸಕ್ಕೆ ಬೇಕಾಗಿದ್ದಾರೆ

ಸೆಕ್ಯೂರಿಟಿ ಗಾರ್ಡ್ (ಪುರುಷರು): ವಸತಿ ಮತ್ತು ಊಟದ ವ್ಯವಸ್ಥೆ ಇರುತ್ತದೆ. ಲಕ್ಷ್ಮೀಪುರ, ಪಾಲಳ್ಳಿ, ಚಾಮುಂಡಿಪುರಂ, ಜೆಎಸ್‌ಎಸ್ ಊಟಿ ರೋಡ್ ಹತ್ತಿರ.
ಆಸಕ್ತಿ ಇದ್ದವರು ಸಂಪರ್ಕಿಸಿ:

8310098788 6361439167

ತಕ್ಷಣ ಬೇಕಾಗಿದ್ದಾರೆ

ಹೆಬ್ಬಾಳು ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ತಕ್ಷಣ ಬೇಕಾಗಿದ್ದಾರೆ. ವಿದ್ಯಾರ್ಹತೆ ಎಸ್‌ಎಸ್‌ಎಲ್‌ಸಿ ಮತ್ತು ಮೇಲ್ಪಟ್ಟು, ಸಂಬಳ: 13500+ (8hrs) ಮತ್ತು 16500. ಸಂಪರ್ಕಿಸಿ:

9620667819 9880727819

ತಕ್ಷಣ ಬೇಕಾಗಿದ್ದಾರೆ

ಕಡಕೋಳ ಮತ್ತು ಅಡಕನಹಳ್ಳಿಹುಂಡಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ ಎಸ್‌ಎಸ್‌ಎಲ್‌ಸಿ ಮತ್ತು ಮೇಲ್ಪಟ್ಟು, ಸಂಬಳ: 17000+W/o (8hrs) ಮತ್ತು 25485+W/o (12hrs) ಸಂಪರ್ಕಿಸಿ

9538567819 9620777819

Govt Job ಇರುವ ಶ್ರೀಮಂತ ವಿಧುರನಿಗೆ ವಧು ಬೇಕಾಗಿದ್ದಾರೆ

ಒಕ್ಕಲಿಗ ವಯಸ್ಸು 50 /5.5/MA.,M.Ed., Govt Job, Salary: 86000. ಅಡಿಕೆ/ ತೆಂಗು ತೋಟ ಹೊಂದಿರುವ Well Settled Independent ಇರುವಂತಹ ವಿಧುರನಿಗೆ ಯಾವುದೇ ಜಾತಿಯ ಅಭ್ಯಂತರವಿಲ್ಲದೆ 2ನೇ ಸಂಬಂಧಕ್ಕೆ ವಿಧವೆ/ ವಿಚ್ಛೇದಿತೆ /ನೌಕರಸ್ಥೆ / ಬಡವೆ/ ವಧು ಬೇಕಾಗಿದ್ದಾರೆ, ಮಕ್ಕಳಿದ್ದರೂ ಪರವಾಗಿಲ್ಲ (ಸರಳ ವಿವಾಹಕ್ಕೆ ಆದ್ಯತೆ) ಬೆಂಗಳೂರು

9480385742

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಮೈಷುಗರ್‌ನಲ್ಲಿ ಜುಲೈ 6ರಿಂದ ಕಬ್ಬು ಅರೆಯುವಿಕೆ ಪ್ರಾರಂಭಕ್ಕೆ ಸಕಲ ಸಿದ್ಧತೆ

ಜಿಲ್ಲಾಧಿಕಾರಿ ಡಾ. ಕುಮಾರ್



ಮಂಡ್ಯ,ಜೂ.28– ಮೈಷುಗರ್ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯುವಿಕೆಗೆ ಸಕಲ ಸಿದ್ಧತೆ ಮಾಡಿಕೊಂಡಿದ್ದು, ಜುಲೈ 6ರಿಂದ ಕಬ್ಬು ಅರೆಯುವಿಕೆ ಪ್ರಾರಂಭಿಸಲಾಗುವುದು. ಮೈಷುಗರ್ ಸಕ್ಕರೆ ಕಾರ್ಖಾನೆ ವ್ಯಾಪ್ತಿಗೆ ಬರುವ ಹಳ್ಳಿಗಳಲ್ಲಿ ಕಬ್ಬು ಕಟಾವನ್ನು, ಜುಲೈ 4ರಿಂದ ಪ್ರಾರಂಭಿಸಲಾಗಿದ್ದು, ಮೈಷುಗರ್ ವ್ಯಾಪ್ತಿಗೆ ಬರುವ ಹಳ್ಳಿಗಳ ಕಬ್ಬು ಬೆಳೆಗಾರರು ಕಬ್ಬನ್ನು ಬೇರೆ ಸಕ್ಕರೆ ಕಾರ್ಖಾನೆಗೆ ಮಾರಾಟ ಮಾಡಬೇಡಿ ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ಮನವಿ ಮಾಡಿದರು.


ಬುಧವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಕಬ್ಬು ಅರೆಯುವಿಕೆ ಕುರಿತಂತೆ ಸಕ್ಕರೆ ಕಾರ್ಖಾನೆಗಳ ಮುಖ್ಯಸ್ಥರೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಮೈಷುಗರ್ ಸಕ್ಕರೆ ಕಾರ್ಖಾನೆಯ ಸಿಬ್ಬಂದಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಹಳ್ಳಿಯ ರೈತರಿಗೆ ಜುಲೈ 4ರಿಂದ ಕಬ್ಬು ಕಟಾವು ಮಾಡುವ ಬಗ್ಗೆ ಮನವರಿಕೆ ಮಾಡಿ ನೋಂದಣಿ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕು ಎಂದು ಸೂಚಿಸಿದರು.

ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಕ್ಕರೆ ಕಾರ್ಖಾನೆಗಳು ತಮ್ಮ ವ್ಯಾಪ್ತಿಗೆ ಬರುವ ಹಳ್ಳಿಗಳಲ್ಲಿ ಮಾತ್ರ ಕಬ್ಬು ಖರೀದಿಸಲು ಕ್ರಮ ವಹಿಸಬೇಕು. ಅದನ್ನು ಹೊರತು ಪಡಿಸಿ ಬೇರೆ ಸಕ್ಕರೆ ಕಾರ್ಖಾನೆ ವ್ಯಾಪ್ತಿಗೆ ಬರುವ ಹಳ್ಳಿಗಳಲ್ಲಿ ಕಬ್ಬು ಖರೀದಿಸಿ ತೊಂದರೆ ಉಂಟು ಮಾಡಿದರೆ ನಿಯಮಾನುಸಾರ ಕ್ರಮ ವಹಿಸಲಾಗುವುದು ಎಂದು ಖಾಸಗಿ ಕಾರ್ಖಾನೆ ಮಾಲೀಕರಿಗೆ ಎಚ್ಚರಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ಕೃಷ್ಣಕುಮಾರ್, ತಹಶೀಲ್ದಾರ್‌ಗಳಾದ ನಿಸರ್ಗ ಪ್ರಿಯಾ, ನರಸಿಂಹ ಮೂರ್ತಿ, ಮೈಶುಗರ್ ಸಕ್ಕರೆ ಕಾರ್ಖಾನೆಯ ಕಬ್ಬು ಅಭಿವೃದ್ಧಿ ಅಧಿಕಾರಿ ಚಂದ್ರಶೇಖರ್, ಕೊರಮಂಡಲ ಸಕ್ಕರೆ ಕಾರ್ಖಾನೆಯ ಬಾಬುರಾಜ್, ರವಿರೆಡ್ಡಿ, ಕೊಪ್ಪದ ಎನ್.ಎಸ್.ಸಿ.ಎಲ್‌ನ ಸೀನಿಯರ್ ಮ್ಯಾನೇಜರ್ ಸೋಮಶೇಖರ್, ಭಾರತಿನಗರದ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯ ಅಸಿಸೆಂಟ್ ಜನರಲ್ ಮ್ಯಾನೇಜರ್ ಮಹದೇವಪ್ರಭು ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಷುಗರ್‌ಗೆ ವಿದ್ಯುತ್ ಪೂರೈಸಲು ಇಂಧನ ಸಚಿವರಿಗೆ ಶಾಸಕ ದಿನೇಶ್ ಗೂಳಿಗೌಡ ಮನವಿ

ಬಾಕಿ ಇರುವ 40.86 ಕೋಟಿ ರೂಪಾಯಿಗಳ ವಿದ್ಯುತ್ ಬಾಕಿ ಮೊತ್ತವನ್ನು ಹಂತ ಹಂತವಾಗಿ ಕಟ್ಟಿಸಿಕೊಳ್ಳಲು ಮನವಿ





ದಿನೇಶ್ ಗೂಳಿಗೌಡ



ಕೆ.ಜೆ. ಜಾರ್ಜ್

ಮಂಡ್ಯ, ಜೂ.28– ಮೈಷುಗರ್ ಸಕ್ಕರೆ ಕಾರ್ಖಾನೆಯು ಈ ಬಾರಿ ಸುಮಾರು 5 ಲಕ್ಷ ಟನ್ ಕಬ್ಬನ್ನು ನುರಿಸುವ ಗುರಿಯನ್ನು ಹಾಕಿಕೊಂಡಿದೆ. ಆದರೆ, ಈ ಹಿಂದಿನಿಂದಲೂ ನಷ್ಟದಲ್ಲಿದ್ದ ಕಂಪನಿಗೆ ವಿದ್ಯುತ್ ಬಿಲ್ ಅನ್ನು ಕಟ್ಟಲು ಸಾಧ್ಯವಾಗಿಲ್ಲ. 40.86 ಕೋಟಿ ರೂ. ವಿದ್ಯುತ್ ಬಾಕಿ ಇದ್ದು, ಇದನ್ನು ಹಂತ ಹಂತವಾಗಿ ಪಾವತಿ ಮಾಡಲು ಹಾಗೂ ಪ್ರಸಕ್ತ ಸಾಲಿನಲ್ಲಿ ಕಬ್ಬು ನುರಿಸಲು ಅಗತ್ಯ ವಿದ್ಯುತ್ ಸರಬರಾಜು ಮಾಡಲು ಚೆಸ್ಕಾಂನವರಿಗೆ ಆದೇಶಿಸಬೇಕು ಎಂದು ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ವಿಧಾನಸೌಧದಲ್ಲಿ ಇಂಧನ ಸಚಿವ ಕೆ.ಜೆ. ಜಾರ್ಜ್ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿದರು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಸಚಿವರು, ಅಧಿಕಾರಿಗಳ ಜತೆ ಚರ್ಚೆ ನಡೆಸುವುದಾಗಿ ತಿಳಿಸಿದರು.

ಪತ್ರದಲ್ಲೇನಿದೆ?: ಮೈಸೂರು ಸಕ್ಕರೆ ಕಂಪೆನಿ ನಿಯಮಿತ, ಮಂಡ್ಯ ಕಂಪೆನಿಯು ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದ್ದು, ಜಿಲ್ಲೆಯ ರೈತರ ಜೀವನಾಡಿಯಾಗಿದೆ. ಪ್ರಸಕ್ತ ಸಾಲಿನಲ್ಲಿ ಸುಮಾರು 5 ಲಕ್ಷ ಟನ್ ಕಬ್ಬನ್ನು ಈ ಕಾರ್ಖಾನೆಗೆ ಸರಬರಾಜು ಮಾಡಲು ರೈತರು ಒಪ್ಪಂದ ಮಾಡಿಕೊಂಡಿರುತ್ತಾರೆ. ಪ್ರಸ್ತುತ ಸದರಿ ಕಂಪೆನಿಯವರು ಚೆಸ್ಕಾಂಗೆ ಸುಮಾರು ರೂ.40.86 ಕೋಟಿಗಳ ವಿದ್ಯುತ್ ಬಾಕಿ ಮೊತ್ತವನ್ನು ಪಾವತಿಸಬೇಕಾಗಿರುತ್ತದೆ. ಆದರೆ, ಕಂಪೆನಿಯ ಆರ್ಥಿಕ ಪರಿಸ್ಥಿತಿಯು ಇನ್ನು ಸುಧಾರಿಸದಿರುವುದರಿಂದ ವಿದ್ಯುತ್ ಬಾಕಿ ಮೊತ್ತವನ್ನು ಪಾವತಿಸಲು ಸಾಧ್ಯವಾಗಿರುವುದಿಲ್ಲ. ಆದುದರಿಂದ, ಪ್ರಸಕ್ತ ಹಂಗಾಮಿನಲ್ಲಿ ಕಬ್ಬನ್ನು ನುರಿಯಲು ವಿದ್ಯುತ್ ಅವಶ್ಯಕತೆಯಿರುವುದರಿಂದ ವಿದ್ಯುತ್ ಸರಬರಾಜಿನಲ್ಲಿ ಯಾವುದೇ ತೊಂದರೆಯಾಗದಂತೆ ವಿದ್ಯುತ್ ಸರಬರಾಜು ಮಾಡಲು ಹಾಗೂ ಬಾಕಿ ಮೊತ್ತವನ್ನು ಹಂತ–ಹಂತವಾಗಿ ಪಾವತಿಸಲು ಸಕ್ಕರೆ ಕಾರ್ಖಾನೆಗೆ ಅನುಮತಿ ನೀಡಲು ವ್ಯವಸ್ಥಾಪಕ ನಿರ್ದೇಶಕರು, ಚೆಸ್ಕಾಂ ಇವರಿಗೆ ಆದೇಶಿಸಬೇಕೆಂದು ಕೋರಿದ್ದಾರೆ.

ಅವ್ಯವಸ್ಥೆಯ ಬಗ್ಗೆ ನಿರಂತರ ದೂರು ಬರುತ್ತಿರುವ ಹಿನ್ನಲೆ

ಮಿಮ್ಸ್ ಆಸ್ಪತ್ರೆಗೆ ಡಿಸಿ ಕುಮಾರ್ ದಿಢೀರ್ ಭೇಟಿ, ಪರಿಶೀಲನೆ



ಮಂಡ್ಯ,ಜೂ.28– ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ (ಮಿಮ್ಸ್) ಉಂಟಾಗಿರುವ ತೊಂದರೆಗಳ ಬಗ್ಗೆ ಸಾರ್ವಜನಿಕರಿಂದ ನಿರಂತರವಾಗಿ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ನಿನ್ನೆ ನಡೆದ ಕೆಡಿಪಿ ಸಭೆಯಲ್ಲಿ ಸಚಿವರು ಹಾಗೂ ಶಾಸಕರು ಮಿಮ್ಸ್‌ಗೆ ಭೇಟಿ ನೀಡಿ ಪರಿಶೀಲಿಸುವಂತೆ ಸೂಚನೆ ಕೊಟ್ಟ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್ ಬುಧವಾರ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಆಸ್ಪತ್ರೆಯ ವಿವಿಧ ವಾರ್ಡ್‌ಗಳಿಗೆ ತೆರಳಿ ಗರ್ಭಿಣಿಯರು ಹಾಗೂ ರೋಗಿಗಳ ಆರೋಗ್ಯ ವಿಚಾರಿಸಿದರು. ಮೂಲಭೂತ ಸಮಸ್ಯೆ ಬಗ್ಗೆ ಮಾಹಿತಿ ಕಲೆಹಾಕಿ ವೈದ್ಯಕೀಯ ಸೇವೆಯ ಗುಣಮಟ್ಟದ ಬಗ್ಗೆ ಖುದ್ದು ಪರಿಶೀಲನೆ ಮಾಡಿದರು. ಸ್ಥಳವಕಾಶದ ಕೊರತೆಯಿಂದ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಬಂದಂತಹ ರೋಗಿಗಳು ಹಾಗೂ ರೋಗಿಯನ್ನು ಆರೈಕೆ ಮಾಡಲು ಬರುವವರು ಕೂರಲು ಕುರ್ಚಿಗಳಿಲ್ಲದೆ ನೆಲದಲ್ಲಿ ಕುಳಿತುಕೊಳ್ಳುತ್ತಿದ್ದಾರೆ. ಇದನ್ನು ಪರಿಶೀಲಿಸಿದ ಡಿಸಿ, ತಕ್ಷಣವೇ ಖುರ್ಚಿ ಹಾಕಿಸಿ ಜನರ ಸಮಸ್ಯೆಗಳನ್ನು ಬಗೆಹರಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು. ಎಲ್ಲಿ ಸ್ಥಳಾವಕಾಶವಿದೆಯೋ ಅಲ್ಲಿ ಕುರ್ಚಿಗಳನ್ನು ಹಾಕಲು ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳಿ. ಇನ್ನು ಮುಂದೆ ಚಿಕಿತ್ಸೆ ಪಡೆಯಲು ಬರುವ ರೋಗಿಗಳು ನೆಲದಲ್ಲಿ ಕೂರದೇ ಕುರ್ಚಿಯಲ್ಲಿ ಕೂರಲು ವ್ಯವಸ್ಥೆ ಮಾಡಿ. ಜೊತೆಗೆ ಶೌಚಾಲಯಗಳನ್ನು ಶುದ್ಧತೆಯಿಂದ ಇಡಬೇಕು. ಆಸ್ಪತ್ರೆಯಲ್ಲಿ ಸಮರ್ಪಕ ಮೂಲಸೌಕರ್ಯವನ್ನು ಒದಗಿಸಬೇಕೆಂದು ತಾಕೀತು ಮಾಡಿದರು.

ಕ್ಯಾನ್ಸರ್ ಕೇರ್ ಸೆಂಟರ್‌ಗೆ ಸಂಬಂಧಪಟ್ಟಂತೆ ಕಾಮಗಾರಿಗಳಿಗೆ 5 ಕೋಟಿ ಅನುದಾನ ಬಿಡುಗಡೆಯಾಗಬೇಕಿದ್ದು, ಸರ್ಕಾರಕ್ಕೆ ಪತ್ರ ಬರೆಯಲಾಗುವುದು. ಆಸ್ಪತ್ರೆಗೆ ಉಪಕರಣ, ಸಲಕರಣೆಗಳಿಗೆ ಸಂಬಂಧಪಟ್ಟಂತೆ 10 ಕೋಟಿ ಅನುದಾನಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು. ಡಿಸಿ ಭೇಟಿ ವೇಳೆ ಮಿಮ್ಸ್ ನಿರ್ದೇಶಕ ಡಾ.ಬಿ.ಜೆ.ಮಹೇಂದ್ರ, ಅಧೀಕ್ಷಕ ಡಾ.ಶ್ರೀಧರ್ ಸೇರಿದಂತೆ ಇನ್ನಿತರರು ಅಧಿಕಾರಿಗಳು ಇದ್ದರು.

ಸಾರ್ವಜನಿಕ ದೂರುಗಳೇನು: ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ಸಾರ್ವಜನಿಕರು, ರೋಗಿಗಳು ಹಾಗೂ ಸಂಘಟನೆಗಳಿಂದ ಆಗಾಗ ದೂರುಗಳು ಕೇಳಿ ಬರುತ್ತಲೇ ಇರುತ್ತದೆ. ಪ್ರಮುಖವಾಗಿ ಮಿಮ್ಸ್ ಆವರಣದಲ್ಲಿ ಕ್ಯಾನ್ಸರ್ ಆಸ್ಪತ್ರೆಗೆ ಜಾಗ ಹಾಗೂ ಹಣ ಮಂಜೂರಾಗಿ ಹಲವು ವರ್ಷ ಕಳೆದರೂ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣವಾಗಿಲ್ಲ. ಈ ಬಗ್ಗೆ ಅನೇಕ ಬಾರಿ ಒತ್ತಾಯ ಹಾಗೂ ಪ್ರತಿಭಟನೆ ನಡೆದರೂ ಮಂಡ್ಯ ವೈದ್ಯಕೀಯ ಆಡಳಿತ ಸರ್ಕಾರದ ಮೇಲೆ ಒತ್ತಡ ತಂದು ನಿಂತಿರುವ ಕಾಮಗಾರಿಯನ್ನು ಪೂರ್ಣಗೊಳಿಸಲು ವಿಫಲವಾಗಿದೆ.

ಹೆರಿಗೆ ವಾರ್ಡ್ ದಶಕಗಳಿಂದ ಶೋಚನೀಯ ಸ್ಥಿತಿಯಲ್ಲಿದ್ದು, ಎರಡು ಬೆಡ್‌ನಲ್ಲಿ ಮೂರು ರೋಗಿಗಳನ್ನು ಮಲಗಿಸುವ ವ್ಯವಸ್ಥೆ ಈಗಲೂ ಇದೆ. ಆಸ್ಪತ್ರೆ ಸಿಬ್ಬಂದಿ ಮಾತ್ರ ಹೆಚ್ಚಿನ ವಾರ್ಡ್ ಮತ್ತು ಹಾಸಿಗೆ ವ್ಯವಸ್ಥೆ ಬೇಕೆಂದು ಹೇಳಿ ಜಾರಿಕೊಳ್ಳುತ್ತಾರೆಯೇ ಹೊರತು ಈ ಬಗ್ಗೆ ಯಾವುದೇ ಉನ್ನತ ಮಟ್ಟದ ಅಧಿಕಾರಿಗಳ ಸಭೆಯಲ್ಲಾಗಲಿ, ಜನಪ್ರತಿನಿಧಿಗಳ ಮುಂದೆಯಾಗಲಿ ಹೇಳುವುದಿಲ್ಲ. ಬೆಡ್ ಅವ್ಯವಸ್ಥೆ ಬಗ್ಗೆ ಬಾಣಂತಿಯರು ಹಾಗೂ ಅವರ ಪೋಷಕರು ಪ್ರಶ್ನಿಸಿದರೆ ಅವರ ಮೇಲೆ ಸಿಬ್ಬಂದಿ ವರ್ಗ ಜಗಳಕ್ಕೆ ಮುಂದಾಗುತ್ತದೆ ಎಂಬ ಆರೋಪ ಆಗಾಗ ಕೇಳಿ ಬರುತ್ತಿದೆ.

ಇದೆಲ್ಲದರ ಜೊತೆಗೆ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ಹೆಚ್ಚಿದ್ದು, ವಿವಿಧ ವಾರ್ಡ್ ಹಾಗೂ ವಿವಿಧ ರೀತಿಯ ಚಿಕಿತ್ಸೆಗೆ ನೇಮಕಗೊಂಡಿರುವ ಕೆಲ ವೈದ್ಯರು ಕೆಲಗಂಟೆಗಳಷ್ಟೇ ಮಿಮ್ಸ್‌ನಲ್ಲಿ ಕಾರ್ಯ ನಿರ್ವಹಿಸಿ, ಬಳಿಕ ತಮ್ಮ ಖಾಸಗಿ ಕ್ಲಿನಿಕ್‌ಗೆ ತೆರಳುತ್ತಾರೆ. ಇದರಿಂದ ರೋಗಿಗಳು ಪಾಡು ಪಡುವಂತಾಗಿದ್ದು, ಅವರಿಗೆ ವೈದ್ಯಕೀಯ ವಿದ್ಯಾರ್ಥಿಗಳೇ ಚಿಕಿತ್ಸೆ ನೀಡಬೇಕಾದ ಪರಿಸ್ಥಿತಿ ಇದೆ. ಇದೆಲ್ಲವುದರ ಬಗ್ಗೆ ಡಿಸಿ ಕುಮಾರ್ ಇಂದು ಆಸ್ಪತ್ರೆಗೆ ಭೇಟಿ ನೀಡಿ, ಸಮಗ್ರ ಪರಿಶೀಲನೆ ನಡೆಸಿದ್ದು, ಆಸ್ಪತ್ರೆಯ ಪ್ರಮುಖ ಈ ಮೂರು ಸಮಸ್ಯೆಗಳನ್ನು ಈಡೇರಿಸಬೇಕಿದೆ.

ಮಂಡ್ಯ ನಗರದ ವಿವಿಧ ಸ್ಲಂಗಳಿಗೆ ಶಾಸಕ ರವಿಕುಮಾರ್ ಭೇಟಿ, ಅಹವಾಲು ಸ್ವೀಕಾರ

ಮಂಡ್ಯ,ಜೂ.28– ನಗರ ವ್ಯಾಪ್ತಿಯ ಸುಮಾರು ಏಳು ಕೊಳಗೇರಿ ಪ್ರದೇಶಗಳಿಗೆ ಶಾಸಕ ಗಣಿಗ ಪಿ.ರವಿಕುಮಾರ್ ಬುಧವಾರ ಭೇಟಿ ನೀಡಿ, ಅಲ್ಲಿನ ಜನರ ಸಮಸ್ಯೆಗಳನ್ನು ಆಲಿಸಿದರು.



ಮೂಲಸೌಕರ್ಯ, ಹಕ್ಕುಪತ್ರ ವಿತರಣೆ ಬಗ್ಗೆ ಅಲ್ಲಿನ ಜನರಿಗೆ ಭರವಸೆ ನೀಡಿದರು. ಇಂದು ನಗರದ ಕುರುಬರ ಹಾಸ್ಟೆಲ್ ಹಿಂಭಾಗದ ಕೊಳಗೇರಿ(ಸ್ಲಂ)ಗೆ ಭೇಟಿ ನೀಡಿದ ಶಾಸಕರು, ಸ್ಲಂ ನ ಪ್ರತಿ ಬೀದಿಯಲ್ಲಿ ಸುತ್ತಾಡಿ, ಪ್ರತಿ ಮನೆಗಳ ಸಮಸ್ಯೆಗಳು, ನೀರು ನಿಲ್ಲುವ ಜಾಗಗಳು, ಹಾಗೂ ನಿವಾಸಿಗಳ ಅನಿಸಿಕೆಗಳನ್ನು ಆಲಿಸಿದರು.

ಕುರುಬರ ಹಾಸ್ಟೆಲ್ ಹಿಂಭಾಗದ ಸ್ಲಂ ಸೇರಿದಂತೆ ಮಂಡ್ಯ ನಗರದ 7 ಸ್ಲಂಗಳಿಗೆ ಭೇಟಿ ನೀಡಿದ ಶಾಸಕರು, ಮೂಲಭೂತ ಸೌಕರ್ಯಗಳ ಕುಂದು ಕೊರತೆಯನ್ನು ಅಧಿಕಾರಿಗಳ ಸಮ್ಮುಖದಲ್ಲಿ ಆಲಿಸಿದರು. ಅನಾರೋಗ್ಯದಿಂದಿದ್ದ ಕೆಲವರಿಗೆ ವೈಯಕ್ತಿಕ ಹಣ ನೀಡಿದ್ದಲ್ಲದೆ, ಚಿಕಿತ್ಸೆಗೆ ವೈದ್ಯಾಧಿಕಾರಿಗೆ ಶಿಫಾರಸು ಮಾಡಿದ ರವಿಕುಮಾರ್, ಹಕ್ಕು ಪತ್ರ ವಂಚಿತ ನಿವಾಸಿಗಳಿಗೆ ಹಕ್ಕು ಪತ್ರ ವಿತರಣೆ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ನಗರಸಭೆ ಆಯುಕ್ತ ಮಂಜುನಾಥ್, ವಿವಿಧ ವಾರ್ಡ್‌ನ ನಗರಸಭಾ ಸದಸ್ಯರು, ಸ್ಥಳೀಯ ನಿವಾಸಿಗಳು ಹಾಗೂ ಮುಖಂಡರುಗಳು ಭಾಗವಹಿಸಿದ್ದರು.

ಬಸ್ ಪಾಸ್‌ಗೆ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ


ಮಂಡ್ಯ, ಜೂ.28– ಪ್ರಸಕ್ತ 2023–24ನೇ ಸಾಲಿನ ವಿದ್ಯಾರ್ಥಿಗಳು ವಿದ್ಯಾರ್ಥಿ ಬಸ್ ಪಾಸ್‌ಗೆ ಆನ್‌ಲೈನ್ ಮೂಲಕ ಜೂನ್ 30ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿಯನ್ನು ಸೇವಾಸಿಂಧು ಪೋರ್ಟಲ್ ಆದ https://sevasindhuservices.karnataka.gov.in . ನಲ್ಲಿ ಸಲ್ಲಿಸಬೇಕು. ವಿದ್ಯಾರ್ಥಿಗಳಿಗೆ ಜೂನ್ 30 ರವರೆಗೆ ಉಚಿತವಾಗಿ (ಹಳೆಯ ಪಾಸ್ ಅಥವಾ ರಶೀತಿ ತೋರಿಸಿ) ಪ್ರಯಾಣಿಸಲು ಅವಕಾಶವಿರುತ್ತದೆ. ಜೂನ್ 12 ರಿಂದ ಸೇವಾಸಿಂಧು ಪೋರ್ಟಲ್‌ನಲ್ಲಿ ಬಸ್‌ಪಾಸ್‌ಗಾಗಿ ಆನ್‌ಲೈನ್ ಪೋರ್ಟಲ್‌ನಲ್ಲಿ ಅರ್ಜಿಗಳನ್ನು ಯಾವುದೇ ಶುಲ್ಕ ಇಲ್ಲದೇ ಸಲ್ಲಿಸಿ ವಿದ್ಯಾರ್ಥಿಗಳು ತಾವೇ ಆಯ್ಕೆ ಮಾಡಿಕೊಳ್ಳಲು ಸೂಚಿಸಿರುವ ನಿಗದಿತ ಕೌಂಟರ್‌ಗಳಾದ ಆಯಾ ತಾಲೂಕು /ಕರ್ನಾಟಕ ಒನ್/ ಗ್ರಾಮ ಒನ್ ಸೆಂಟರ್‌ಗಳಲ್ಲಿ ನಗದು/ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್, ಯುಪಿಐ ಮುಖೇನ ಹಣ ಪಾವತಿಸಿ ಬಸ್ ಪಾಸ್ ಸ್ಮಾರ್ಟ್ ಕಾರ್ಡ್ ಅನ್ನು ಪಡೆಯಬಹುದಾಗಿರುತ್ತದೆ. ಜೂನ್ 30ರ ನಂತರ ಯಾವುದೇ ಉಚಿತ ಪ್ರಯಾಣ ಇಲ್ಲದೇ ಇರುವುದರಿಂದ ಜೂನ್ 30ರೊಳಗೆ ಎಲ್ಲಾ ವಿದ್ಯಾರ್ಥಿಗಳು ಪಾಸ್‌ಗಾಗಿ ಅರ್ಜಿ ಸಲ್ಲಿಸಿ ಪಾಸ್ ಪಡೆಯಬಹುದಾಗಿರುತ್ತದೆ.

ಸರ್ಕಾರದ ನೂತನ ಯೋಜನೆಯಾದ ಶಕ್ತಿ ಯೋಜನೆಯಡಿ ರಾಜ್ಯದ ಎಲ್ಲಾ ಮಹಿಳೆಯರು (ವಿದ್ಯಾರ್ಥಿನಿಯರು ಹಾಗೂ ಲಿಂಗತ್ವ ಅಲ್ಪಸಂಖ್ಯಾತರು ಸೇರಿದಂತೆ) ರಾಜ್ಯದೊಳಗೆ ನಗರ ಸಾಮಾನ್ಯ ಹಾಗೂ ವೇಗದೂತ ಸಾರಿಗೆಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಜೂನ್ 11 ರಿಂದ ಅವಕಾಶ ಕಲ್ಪಿಸಲಾಗಿರುತ್ತದೆ. ಈ ಯೋಜನೆಯಡಿ ರಾಜ್ಯದೊಳಗೆ ಪ್ರಯಾಣಿಸುವ ವಿದ್ಯಾರ್ಥಿನಿಯರು ವಿದ್ಯಾರ್ಥಿ ಬಸ್ ಪಾಸ್ ಪಡೆಯುವ ಅಗತ್ಯವಿರುವುದಿಲ್ಲ. ವಿದ್ಯಾರ್ಥಿಗಳು ಒಂದು ವೇಳೆ ಪಾಸ್ ಪಡೆದಿದ್ದಲ್ಲಿ ಕಾಲೇಜಿನಿಂದ ವಾಸಸ್ಥಳಕ್ಕೆ ಮತ್ತು ವಾಸಸ್ಥಳದಿಂದ ಕಾಲೇಜು ಸ್ಥಳಕ್ಕೆ ಮಾತ್ರ ಪಾಸಿನಲ್ಲಿ ಪ್ರಯಾಣಿಸಿ ಬೇರೆ ಸ್ಥಳ ಉಚಿತ ಚೀಟಿ ಪಡೆದು ಪ್ರಯಾಣಿಸಬೇಕು ಎಂದು ಮಂಡ್ಯ ವಿಭಾಗದ ಕ.ರಾ.ರ.ಸಾ.ನಿ ನಿಯಂತ್ರಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಶಾಲನಗರದಲ್ಲಿ ಪ್ರಥಮ ದರ್ಜೆ ಸಹಾಯಕನ ನಿವಾಸದ ಮೇಲೆ ಲೋಕಾಯುಕ್ತ ದಾಳಿ

ನಗದು, ಚಿನ್ನ ವಶ, ಮನೆ, ವಾಹನಗಳು, ಬ್ಯಾಂಕ್ ಠೇವಣಿ ಪತ್ತೆ





ಮಡಿಕೇರಿ, ಜೂ.28– ಕುಶಾಲನಗರದ ನಿವಾಸಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಲೆಕ್ಕ ವಿಭಾಗದ ಪ್ರಥಮ ದರ್ಜೆ ಸಹಾಯಕ ಅಬ್ದುಲ್ ಬಷೀರ್ ನಿವಾಸದ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಆದಾಯ ಮೀರಿದ ಆಸ್ತಿ ಸಂಗ್ರಹ ಆರೋಪ ಹಿನ್ನೆಲೆಯಲ್ಲಿ ಮಡಿಕೇರಿ ಲೋಕಾಯುಕ್ತ ಡಿವೈಎಸ್‌ಪಿ ಪವನ್ ಕುಮಾರ್ ನೇತೃತ್ವದ ಅಧಿಕಾರಿಗಳ ತಂಡ ಕುಶಾಲನಗರದ ಗೊಂದಿಬಸವನಹಳ್ಳಿಯಲ್ಲಿರುವ ಅಬ್ದುಲ್ ಬಷೀರ್ ನಿವಾಸದ ಮೇಲೆ ಬುಧವಾರ ನಸುಕಿನ ವೇಳೆ ದಾಳಿ ನಡೆಸಿ, ಪರಿಶೀಲನೆ ಕಾರ್ಯ ನಡೆಸಿತು.

ಈ ಸಂದರ್ಭ ಮನೆಯಲ್ಲಿ 14 ಲಕ್ಷ ರೂ.ನಗದು, 250 ಗ್ರಾಂ ಚಿನ್ನ ಪತ್ತೆಯಾಗಿದೆ. ಹಣ ಮತ್ತು ಚಿನ್ನವನ್ನು ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಇದಲ್ಲದೇ, 2 ಮನೆ, 3 ವಾಹನಗಳು, ಬ್ಯಾಂಕ್‌ನಲ್ಲಿ 23 ಲಕ್ಷ ರೂ. ಠೇವಣಿ ಹೊಂದಿರುವ ಬಗ್ಗೆ ಲೋಕಾಯುಕ್ತ ಅಧಿಕಾರಿಗಳಿಗೆ ಮಾಹಿತಿ ಲಭಿಸಿದೆ. ಮೈಸೂರು ವಿಭಾಗದ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಸುರೇಶ್ ಬಾಬು ಮಾರ್ಗದರ್ಶನದಲ್ಲಿ ತಂಡ ಪರಿಶೀಲನೆ ನಡೆಸಿ ತನಿಖೆ ಮುಂದುವರೆಸಿದೆ. ನಾಪೋಕ್ಲು ಬಳಿಯ ಕುಂಜಿಲ ಗ್ರಾಮದಲ್ಲಿರುವ ಅಬ್ದುಲ್ ಬಷೀರ್ ಅವರ ಸಹೋದರನ ಮನೆ ಮೇಲೂ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ, ದಾಖಲೆಗಳನ್ನು ಪರಿಶೀಲನೆ ನಡೆಸಿದ್ದಾರೆ.

> ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಲೆಕ್ಕ ವಿಭಾಗದ ಪ್ರಥಮ ದರ್ಜೆ ಸಹಾಯಕ ಅಬ್ದುಲ್ ಬಷೀರ್ ಎಂಬವರ ಮನೆ ಮೇಲೆ ದಾಳಿ ನಡೆಸಿ ಹಣ ಮತ್ತು ಇತರ ಸ್ವತ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ಸರಕಾರಿ ನೌಕರ ಅಬ್ದುಲ್ ಬಷೀರ್ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಬ್ಯಾಂಕ್ ಖಾತೆಯನ್ನು ಸದ್ಯಕ್ಕೆ 'ಸೀಝ್' ಮಾಡಿದ್ದೇವೆ. ಈ ಕುರಿತು ತನಿಖೆ ಮುಂದುವರೆದಿದೆ.
>
> – ಸುರೇಶ್ ಬಾಬು, ಲೋಕಾಯುಕ್ತ ಎಸ್.ಪಿ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಮಣಿಪುರ ಕ್ರೈಸ್ತರ ಮೇಲಿನ ದೌರ್ಜನ್ಯ ಖಂಡಿಸಿ

ಮಡಿಕೇರಿಯಲ್ಲಿ ಕ್ರೈಸ್ತ ಸಮುದಾಯ ಪ್ರತಿಭಟನೆ



ಮಡಿಕೇರಿ, ಜೂ.28– ಮಣಿಪುರದಲ್ಲಿ ಕ್ರೈಸ್ತರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಖಂಡಿಸಿ ಕೊಡಗು ಜಿಲ್ಲಾ ಕ್ರೈಸ್ತ ಸಮುದಾಯದ ವತಿಯಿಂದ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಸಂತ ಮೈಕಲರ ಚರ್ಚ್‌ನಲ್ಲಿ ಜಮಾಯಿಸಿದ ಕ್ರೈಸ್ತ ಬಾಂಧವರು, ಹಿಂಸಾಚಾರ ಕೊನೆಯಾಗಲು ಕೈಗೆ ಕಪ್ಪು ಪಟ್ಟಿ ಧರಿಸಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಬಳಿಕ ಇಂದಿರಾಗಾಂಧಿ ವೃತ್ತದ ಮೂಲಕ ಜಿಲ್ಲಾಧಿಕಾರಿ ಕಚೇರಿವರೆಗೆ ನಗರದಲ್ಲಿ ಪ್ರತಿಭಟನಾ ಮೆರವಣಿಗೆ ಸಾಗಿದರು. ಮೆರವಣಿಗೆ ಉದ್ದಕ್ಕೂ ಮಣಿಪುರ ಸರ್ಕಾರದ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಾಕಾರರು, ಅಲ್ಲಿನ ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ರಾಜೀನಾಮೆ ನೀಡುವಂತೆ ಆಗ್ರಹಿಸಿದರು.

ಕೇಂದ್ರ ಸರ್ಕಾರ ಮಧ್ಯೆ ಪ್ರವೇಶಿಸಿ ಹಿಂಸಾಚಾರ ಅಂತ್ಯಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಮೆರವಣಿಗೆಯಲ್ಲಿ ಶವಪೆಟ್ಟಿಗೆಯನ್ನು ಹೊತ್ತೊಯ್ಯುವ ಮೂಲಕ ದೌರ್ಜನ್ಯವನ್ನು ಖಂಡಿಸಲಾಯಿತು.

ಈ ಸಂದರ್ಭ ಮಾತನಾಡಿದ ಕ್ರೈಸ್ತ ಮುಖಂಡ ಸುನಿಲ್ ಪತ್ರಾವೊ, ಮಣಿಪುರದಲ್ಲಿ ನಿರಂತರವಾಗಿ ಕ್ರೈಸ್ತರು, ಅವರ ಪ್ರಾರ್ಥನಾ ಮಂದಿರ, ಆಸ್ತಿಪಾಸ್ತಿಗಳ ಮೇಲೆ ದೌರ್ಜನ್ಯಗಳು ನಡೆಯುತ್ತಿದೆ. ಅಲ್ಲಿನ ಚುನಾಯಿತ ಸರ್ಕಾರ ರಾಜ್ಯಧರ್ಮ ಪಾಲಿಸಲು ನಿಷ್ಕ್ರಿಯವಾಗಿದ್ದು, ಇಬ್ಭಾಗ ನೀತಿ ಅನುಸರಿಸಲಾಗುತ್ತಿದೆ ಎಂದು ಆರೋಪಿಸಿದರು. ಮಾನವ ಹಕ್ಕುಗಳ ಆಯೋಗ ಮಧ್ಯೆ ಪ್ರವೇಶಿಸಿ ಕ್ರೈಸ್ತರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಕೊನೆಗಾಣಿಸಬೇಕೆಂದು ಆಗ್ರಹಿಸಿದರು.

ವಿರಾಜಪೇಟೆ ಧರ್ಮ ಕೇಂದ್ರದ ಗುರುಗಳಾದ ಫಾ.ಡಾ. ದಯಾನಂದ ಪ್ರಭು ಮಾತನಾಡಿ, ಒಂದು ಕಾಲದಲ್ಲಿ ಅಲ್ಲಿನ ಎಲ್ಲಾ ಜನಾಂಗಗಳು ಪ್ರೀತಿ ವಿಶ್ವಾಸದಿಂದ ಬಾಳುತ್ತಿದ್ದರು. ಆದರೆ, ಡಬಲ್ ಎಂಜಿನ್ ಸರ್ಕಾರ ಅಲ್ಲಿನ ಜನತೆಗೆ ಒಳ್ಳೆಯದರ ಬದಲು ಕೆಟ್ಟದನ್ನೇ ಮಾಡುತ್ತಿದೆ. ಅಭಿವೃದ್ಧಿ, ಶಾಂತಿ ಸಮಾಧಾನಕ್ಕೆ ಒತ್ತು ಕೊಡಬೇಕಾದ ಸರ್ಕಾರ, ಅಲ್ಪಸಂಖ್ಯಾತ ಕ್ರೈಸ್ತರ ಮೇಲೆ ದೌರ್ಜನ್ಯ ಮಾಡುತ್ತಿದೆ. ಈಗಾಗಲೇ 130ಕ್ಕಿಂತ ಅಧಿಕ ಮಂದಿ ಕ್ರೈಸ್ತರು ಪ್ರಾಣ ಕಳೆದುಕೊಂಡಿದ್ದಾರೆ. 250 ಚರ್ಚ್‌ಗಳನ್ನು ಕೆಡವಿ ಹಾಕಲಾಗಿದೆ. ಮನೆ ಕಟ್ಟಡಗಳಿಗೆ ನಿರಂತರವಾಗಿ ಬೆಂಕಿ ಹಚ್ಚುವ ಕೆಲಸ ನಡೆಯುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಣಿಪುರದಲ್ಲಿ ಶಾಂತಿ ಮರುಸ್ಥಾಪನೆ ಆಗಬೇಕು. ಎಲ್ಲಾ ಜನಾಂಗದವರ ನಡುವೆ ಮೊದಲಿದ್ದ ಶಾಂತಿ ಸಮಾಧಾನ ಮತ್ತೆ ಮೂಡಬೇಕು. ಪ್ರಧಾನಮಂತ್ರಿ, ಕೇಂದ್ರ ಗೃಹ ಮಂತ್ರಿಗಳು ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರ ನಿಲ್ಲಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ಕೆಡವಿ ಹಾಕಿರುವ ಚರ್ಚ್‌ಗಳನ್ನು ಮರು ನಿರ್ಮಿಸಬೇಕು ಎಂದು ಒತ್ತಾಯಿಸಿದರು.

ಮಡಿಕೇರಿ ಸಂತ ಮೈಕಲರ ಚರ್ಚ್‌ನ ಧರ್ಮ ಗುರು ಫಾ. ಜಾರ್ಜ್ ದೀಪಕ್ ಮಾತನಾಡಿ, ಭಾರತ ವೈವಿಧ್ಯತೆಯಲ್ಲಿ ಏಕತೆ ಇರುವ ದೇಶವಾಗಿದ್ದು, ಇದುವೇ ನಮ್ಮ ಸಂವಿಧಾನದ ಸೌಂದರ್ಯವಾಗಿದೆ. ದೇಶದ ಪ್ರಗತಿಗೆ ಎಲ್ಲರ ತ್ಯಾಗ, ಶ್ರಮ, ಸಹಕಾರ ಅತ್ಯಗತ್ಯ. ಒಬ್ಬರು ಮತ್ತೊಬ್ಬರನ್ನು ಪ್ರೀತಿಸಬೇಕು, ಗೌರವದಿಂದ ಕಾಣಬೇಕು. ನೊಂದವರಿಗೆ ಸಹಾಯ ಮಾಡಬೇಕು. ಆದರೆ, ಅಲ್ಪಸಂಖ್ಯಾತರ ಮೇಲೆ ಹೆಚ್ಚಿನ ದೌರ್ಜನ್ಯಗಳು ನಮ್ಮ ದೇಶದಲ್ಲೇ ನಡೆಯುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಮಣಿಪುರದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವಂತೆ ರಾಷ್ಟ್ರಪತಿಗಳು, ಕೇಂದ್ರ ಮಾನವ ಹಕ್ಕು ಆಯೋಗಕ್ಕೆ ಇದೇ ಸಂದರ್ಭ ಜಿಲ್ಲಾಡಳಿತದ ಮೂಲಕ ಮನವಿ ಪತ್ರ ಸಲ್ಲಿಸಲಾಯಿತು. ವಿವಿಧ ಧರ್ಮಕೇಂದ್ರದ ಧರ್ಮಗುರುಗಳಾದ ಫಾ. ನವೀನ್ ಕುಮಾರ್, ಫಾ.ಐಸಾಕ್ ರತ್ನಾಕರ್, ರೋಮನ್ ಕ್ಯಾಥೋಲಿಕ್ ಅಸೋಸಿಯೇಷನ್ ಅಧ್ಯಕ್ಷ ಎಸ್.ಎಂ. ಡಿಸಿಲ್ವಾ, ಸ್ಥಾಪಕಾಧ್ಯಕ್ಷ ಲಾರೆನ್ಸ್, ಉಪಾಧ್ಯಕ್ಷ ಜಾನ್ಸನ್ ಪಿಂಟೋ, ಕ್ರೈಸ್ತ ಮುಖಂಡರಾದ ಬೇಬಿ ಮ್ಯಾಥ್ಯೂ, ಜೋಕಿಂ ರಾಡ್ರಿಗಸ್, ತೆರೆಸಾ ವಿಕ್ಟರ್ ಸೇರಿದಂತೆ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಆತಂಕ ಸೃಷ್ಟಿಸಿದ ಕಾಡಾನೆಗಳ ಹಿಂಡು

ಚೆಂಬ್ಯಂಡಾಣೆ–ಕಕ್ಕಬ್ಬೆ ವ್ಯಾಪ್ತಿಯಲ್ಲಿ ಕಾಡಾನೆಗಳ ಹಾವಳಿ

ಮಡಿಕೇರಿ, ಜೂ.28– ಚೆಯ್ಯಂಡಾಣೆ ಹಾಗೂ ಕಕ್ಕಬ್ಬೆ ವ್ಯಾಪ್ತಿಯಲ್ಲಿ ಕಾಡಾನೆಗಳ ಹಾವಳಿ ಮಿತಿ ಮೀರಿದ್ದು, ಕೃಷಿ ಫಸಲು ಕಾಡಾನೆ ಪಾಲಾಗುತ್ತಿದೆ. ಈ ನಡುವೆ ಚೆಯ್ಯಂಡಾಣೆ–ಕಕ್ಕಬ್ಬೆ ಮುಖ್ಯ ರಸ್ತೆಯ ಮೂಲಕ ರಾತ್ರಿ ವಾಹನದಲ್ಲಿ ತೆರಳುತ್ತಿದ್ದವರಿಗೆ ಒಂಬತ್ತು ಕಾಡಾನೆಗಳ ಹಿಂಡು ಕಾಣಿಸಿಕೊಂಡು ಆತಂಕ ಸೃಷ್ಟಿಸಿದೆ.



ರಸ್ತೆಯಲ್ಲಿ ಕಾಡಾನೆಗಳ ಹಿಂಡು ಸಂಚರಿಸುತ್ತಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ ಚೆಯ್ಯಂಡಾಣೆ ಬಳಿಯ ನರಿಯಂದಡ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾಡಾನೆಗಳ ಹಿಂಡು ನಿರಂತರ ದಾಳಿ ನಡೆಸುತ್ತಿದ್ದು, ಕಾಡಾನೆಗಳ ದಾಂಗುಡಿಗೆ ಅಪಾರ ಪ್ರಮಾಣದ ಕೃಷಿ ಫಸಲು ಧ್ವಂಸಗೊಂಡಿವೆ. ಬಾಳೆ, ಅಡಿಕೆ, ಕಾಫಿ, ತೆಂಗು, ಕರಿಮೆಣಸು ಗಿಡಗಳಿಗೆ ಕಾಡಾನೆಗಳು ಹಾನಿಪಡಿಸಿವೆ. ಕಳೆದ ವಾರ ಚೇಲಾವರದಲ್ಲಿ ಮಹಿಳೆಯೋರ್ವರ ಮೇಲೆ ಕಾಡಾನೆಯೊಂದು ದಾಳಿ ನಡೆಸಿದ್ದು, ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದರು. ಕಾರ್ಮಿಕರು, ಶಾಲಾ ವಿದ್ಯಾರ್ಥಿಗಳು, ಗ್ರಾಮಸ್ಥರು ಜೀವ ಕೈಯಲ್ಲಿ ಹಿಡಿದು ಸಂಚರಿಸುವಂತಹ ಸ್ಥಿತಿ ನಿರ್ಮಾಣವಾಗಿದೆ. ಕಾಡಾನೆಗಳನ್ನು ಕೂಡಲೇ ಕಾಡಿಗಟ್ಟುವಂತೆ ಗ್ರಾಮಸ್ಥರು ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ.

ಅಂತರ ಜಿಲ್ಲಾ ದ್ವಿಚಕ್ರ ವಾಹನಗಳ ಕಳ್ಳನ ಬಂಧನ



ಮಡಿಕೇರಿ, ಜೂ.28– ಕೊಡಗು, ಹಾಸನ ಮತ್ತು ಮಂಡ್ಯ ಜಿಲ್ಲೆಯ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡಿ ನಾಪತ್ತೆಯಾಗಿದ್ದ ಆರೋಪಿಯನ್ನು ಪತ್ತೆ ಹಚ್ಚುವಲ್ಲಿ ಕೊಡಗು ಜಿಲ್ಲಾ ಪೊಲೀಸರು ಯಶಸ್ವಿಯಾಗಿದ್ದಾರೆ.

ಅರಕಲಗೋಡು ತಾಲೂಕು ದಡ್ಡದಳ್ಳಿ ಗ್ರಾಮದ ನಿವಾಸಿ ಮಂಜು ಅಲಿಯಾಸ್ ಮಂಜುನಾಥ್(25) ಬಂಧಿತ ಆರೋಪಿಯಾಗಿದ್ದು, ಈತನ ಬಳಿಯಿಂದ 7 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ. ಜಿಲ್ಲೆಯ ಶನಿವಾರಸಂತೆ ಹಾಗೂ ಸೋಮವಾರಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನಗಳು ಕಳ್ಳತನವಾಗಿರುವ ಬಗ್ಗೆ ದೂರು ಬಂದಿದ್ದ ಹಿನ್ನೆಲೆ ಪೊಲೀಸರು ಆರೋಪಿಯ ಪತ್ತೆಗಾಗಿ ತನಿಖೆ ಕೈಗೊಂಡಿದ್ದರು.

ಸೋಮವಾರಪೇಟೆ ಉಪ ವಿಭಾಗದ ಡಿವೈಎಸ್‌ಪಿ ಆರ್.ಪಿ.ಗಂಗಾಧರಪ್ಪ ಹಾಗೂ ಶನಿವಾರಸಂತೆ ಪೊಲೀಸ್ ಠಾಣೆಯ ಠಾಣಾಧಿಕಾರಿ ಪರಶಿವಮೂರ್ತಿ.ಎಸ್ ಅವರುಗಳು ಸಿಬ್ಬಂದಿಗಳ ವಿಶೇಷ ತಂಡವನ್ನು ರಚಿಸಿ ಕಾರ್ಯಾಚರಣೆ ನಡೆಸಿದರು. ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಕಾರ್ಯದಕ್ಷತೆಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಶ್ಲಾಘಿಸಿದ್ದಾರೆ.

ಮಾಹಿತಿ ನೀಡಿ: ಯಾವುದೇ ಅನುಮಾನಾಸ್ಪದ ವ್ಯಕ್ತಿಗಳು ಕಂಡು ಬಂದಲ್ಲಿ ಜಿಲ್ಲಾ ಪೊಲೀಸ್ ಅಥವಾ ಸಮೀಪದ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಮತ್ತು ಅಕ್ರಮ ಚಟುವಟಿಕೆಗಳ ಕುರಿತು ಸ್ಥಳೀಯ ಪೊಲೀಸ್ ಠಾಣೆ ಹಾಗೂ ಕೆಎಸ್‌ಪಿ ತಂತ್ರಾಂಶದ ಮೂಲಕ ಮಾಹಿತಿ ನೀಡಿ ಸಹಕರಿಸುವಂತೆ ಪೊಲೀಸ್ ಅಧಿಕಾರಿಗಳು ಮನವಿ ಮಾಡಿದ್ದಾರೆ.

ಕಾಳಜಿ, ಪ್ರೀತಿ ಹೆಚ್ಚಾಗಲು ಕಾಡಿನ ಬಗ್ಗೆ ಅರಿವು ಅಗತ್ಯ

ವನ ಮಹೋತ್ಸವ ಕಾರ್ಯಕ್ರಮದಲ್ಲಿ ಸಂಕೇತ್‌ಪೂವಯ್ಯ ಅಭಿಪ್ರಾಯ



ವಿರಾಜಪೇಟೆ, ಜೂ.28– ಪ್ರಕೃತಿ ಒಂದು ಅದ್ಭುತವಾದ ಶಕ್ತಿ. ಇಂದಿನ ಯುವ ಜನತೆ ಪ್ರಕೃತಿಯ ಮಹತ್ವವನ್ನು ಅರಿಯಬೇಕು. ಶಿಕ್ಷಣ ಸಂಸ್ಥೆಗಳಿಂದ ಹಾಗೂ ಅರಣ್ಯ ಇಲಾಖೆ ವತಿಯಿಂದ ಶಾಲಾ ಮಕ್ಕಳಿಗೆ ಕಾಡು ಪರಿಚಯಿಸುವ ಕೆಲಸವಾಗಬೇಕು ಎಂದು ಸಮಾಜ ಸೇವಕ ಮೇರಿಯಂಡ ಸಂಕೇತ್ ಪೂವಯ್ಯ ತಿಳಿಸಿದರು.

ವಿರಾಜಪೇಟೆ ತಾಲೂಕು ಪತ್ರಕರ್ತರ ಸಂಘದ ವತಿಯಿಂದ ನಗರದ ಕಾವೇರಿ ಕಾಲೇಜಿನಲ್ಲಿ ಏರ್ಪಡಿಸಲಾಗಿದ್ದ ವನ ಮಹೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಮಕ್ಕಳಿಗೆ ಕಾಳಜಿ ಮತ್ತು ಪ್ರೀತಿ ಹೆಚ್ಚಾಗಬೇಕಾದರೆ ಕಾಡಿನ ಮಹತ್ವವನ್ನು ಪರಿಚಯಿಸಬೇಕು ಎಂದರು.

1950 ರ ಸುಮಾರಿಗೆ ವನಮಹೋತ್ಸವ ಕಾರ್ಯಕ್ರಮ ಆರಂಭವಾಯಿತು. ಮಳೆಗಾಲದ ಆರಂಭದಲ್ಲಿ ಗಿಡಗಳನ್ನು ನೆಡುವುದರಿಂದ ಚೆನ್ನಾಗಿ ಬೆಳೆದು ಪ್ರಕೃತಿಯ ಸೌಂದರ್ಯ ಹೆಚ್ಚಿಸುತ್ತದೆ. ಇಂದಿನ ದಿನದಲ್ಲಿ ಕಾಡು ಅಲ್ಪಪ್ರಮಾಣದಲ್ಲಿ ನಮ್ಮ ನಡುವೆ ಉಳಿದುಕೊಂಡಿದೆ. ಎಂದ ಸಂಕೇತ್ ಪೂವಯ್ಯ ಅವರು ಮಕ್ಕಳಿಗೆ ಕಾಡಿನ ಬಗ್ಗೆ ಆಸಕ್ತಿ ಮೂಡಿಸುವುದರಿಂದ ಭವಿಷ್ಯದಲ್ಲಿ ನಾವು ಪ್ರಕೃತಿಯ ರಕ್ಷಣೆ ಮಾಡಬಹುದಾಗಿದೆ ಎಂದರು.

ಅತಿಥಿಯಾಗಿ ಭಾಗವಹಿಸಿದ್ದ ಸಾಮಾಜಿಕ ಅರಣ್ಯ ಇಲಾಖೆಯ ಉಪವಲಯ ಅರಣ್ಯಾಧಿಕಾರಿ ಮಧು ಕುಮಾರ್ ಮಾತನಾಡಿ, ವನಮಹೋತ್ಸವವನ್ನು ಹಮ್ಮಿಕೊಳ್ಳುವುದರ ಹಿಂದೆ ಪ್ರಕೃತಿಗೆ ವರದಾನವಾಗಬಲ್ಲ ಸಾಕಷ್ಟು ವಿಚಾರಗಳಿವೆ. ವೈವಿಧ್ಯತೆಯಿಂದ ಕೂಡಿದ ಮರಗಿಡಗಳು ಆಹಾರ ಸರಪಳಿಯ ಪ್ರತಿಯೊಂದು ಜೀವಿಗೂ ಒಂದಲ್ಲ ಒಂದು ಬಗೆಯಲ್ಲಿ ಸಹಾಯ ಮಾಡುತ್ತವೆ. ನಾವುಗಳು ಮನೆಯ ಪಕ್ಕ ಗಿಡ ನೆಟ್ಟು ಪೋಷಣೆ ಮಾಡುವ ಗಿಡ ಪ್ರಕೃತಿಗೆ ಅನೇಕ ರೀತಿಯಲ್ಲಿ ಸಹಾಯಕ್ಕೆ ಬರುತ್ತದೆ ಎಂದರು.

ಕೊಡಗು ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಉಜ್ವಲ್ ರಂಜಿತ್ ಮಾತನಾಡಿ, ಪ್ರಕೃತಿ ಸಂರಕ್ಷಣೆಯಲ್ಲಿ ಎಲ್ಲರೂ ಕೈಜೋಡಿಸಬೇಕು. ಪ್ರಕೃತಿಯನ್ನು ಬಳಸಿಕೊಳ್ಳುವಿಕೆಯಲ್ಲಿ ಮತ್ತು ಉಳಿಸುವಿಕೆಯಲ್ಲಿ ನಮ್ಮ ಜವಾಬ್ದಾರಿತನದ ಪ್ರದರ್ಶನವಾಗಬೇಕು ಎಂದು ಅಭಿಪ್ರಾಯಪಟ್ಟರು. ವಿರಾಜಪೇಟೆ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಮಧೋಶ್ ಪೂವಯ್ಯ ಮಾತನಾಡುತ್ತಾ, ಪರಿಸರ ಉತ್ತಮವಾಗಿರ ಬೇಕಾದರೆ ನಾವೂ ಇರುವ ಭೂಮಿಯ ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಳ್ಳಬೇಕು. ಅದಕ್ಕಾಗಿ ನಾವೂ ಗಿಡ–ಮರ ಬೆಳೆಸುವ ಮೂಲಕ ಭೂಮಿಯನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕೆಂದು ಸಲಹೆ ನೀಡಿದರು.

ಸಭಾ ಕಾರ್ಯಕ್ರಮದ ಬಳಿಕ ಅತಿಥಿ ಗಣ್ಯರು ಕಾಲೇಜು ಆವರಣದಲ್ಲಿ ಹಣ್ಣಿನ ಗಿಡಗಳನ್ನು ವಿದ್ಯಾರ್ಥಿಗಳೊಂದಿಗೆ ಸೇರಿ ನೆಟ್ಟರು. ವೇದಿಕೆಯಲ್ಲಿ ವಿರಾಜಪೇಟೆ ಕಾವೇರಿ ಕಾಲೇಜಿನ ಉಪ ಪ್ರಾಂಶುಪಾಲ ಆನಂದ್ ಕಾರ್ಲ ಉಪಸ್ಥಿತರಿದ್ದರು. ಉಪನ್ಯಾಸಕಿ ವೀಣಾ ರವೀಂದ್ರ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದಲ್ಲಿ ವಿರಾಜಪೇಟೆ ತಾಲೂಕು ಪತ್ರಕರ್ತರ ಸಂಘದ ಗೌರವ ಅಧ್ಯಕ್ಷ ರಾಜೇಶ್ ಪದ್ಮನಾಭ, ಪ್ರಧಾನ ಕಾರ್ಯದರ್ಶಿ ಉಷಾ ಪ್ರೀತಮ್, ನಿರ್ದೇಶಕರುಗಳಾದ ಯುವರಾಜ್ ಕೃಷ್ಣ, ಹೇಮಂತ್ ತೊರೇರ ಹಾಗೂ ಕಾಲೇಜಿನ ಉಪನ್ಯಾಸಕ ವೃಂದ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

ಟೆಂಪೋ ಟ್ರಾವೆಲರ್–ಜೀಪ್ ನಡುವೆ ಡಿಕ್ಕಿ; ಹಲವರಿಗೆ ಗಾಯ

ಮಡಿಕೇರಿ, ಜೂ.28– ಪ್ರವಾಸಿಗರ ಟೆಂಪೋ ಟ್ರಾವಲರ್ ಹಾಗೂ ಕೂಲಿ ಕಾರ್ಮಿಕರನ್ನು ಕರೆತರುತ್ತಿದ್ದ ಜೀಪ್ ನಡುವೆ ಡಿಕ್ಕಿ ಸಂಭವಿಸಿ ಹಲವರು ಗಾಯಗೊಂಡಿರುವ ಘಟನೆ ಸುಂಟಿಕೊಪ್ಪ ಸಮೀಪ ಗದ್ದೆಹಳ್ಳ ತಿರುವಿನಲ್ಲಿ ನಡೆದಿದೆ.

ಮಡಿಕೇರಿಯ ಅಬ್ಬಿಪಾಲ್ಸ್ ಸಮೀಪದ ತೋಟದಿಂದ ಕಾರ್ಮಿಕರನ್ನು ಸುಂಟಿಕೊಪ್ಪದ ಕಡೆಗೆ ಕರೆದುಕೊಂಡು ಬರುತ್ತಿದ್ದ ಜೀಪ್ ಹಾಗೂ ಮೈಸೂರಿನಿಂದ ತಲಕಾವೇರಿಗೆ ಆಗಮಿಸುತ್ತಿದ್ದ ಪ್ರವಾಸಿಗರಿದ್ದ ಟೆಂಪೋ ಟ್ರಾವಲರ್ ನಡುವೆ ಡಿಕ್ಕಿ ಸಂಭವಿಸಿತು.

ಘಟನೆಯಲ್ಲಿ ಜೀಪ್‌ನಲ್ಲಿದ್ದ ಸುಂಟಿಕೊಪ್ಪದ ಕಾರ್ಮಿಕರಾದ ಮಂಜುನಾಥ, ರಾಮ, ಜೀಪ್ ಚಾಲಕ ಎನ್.ಮಂಜೇಶ, ಅಸ್ಸಾಂ ಮೂಲದ ಕಾರ್ಮಿಕರಾದ ನಿಸಾಬುಲ್, ಅಬುಸಮ, ಇಜಾರಿ, ಅಕ್ಲೀಮ್, ಅನಾರ್ ಹುಸೈನ್ ಹಾಗೂ ನೂರ್ ಜಾನ್ ಅವರುಗಳು ತೀವ್ರವಾಗಿ ಗಾಯಗೊಂಡಿದ್ದಾರೆ.

ಗಾಯಾಳುಗಳಿಗೆ ಸುಂಟಿಕೊಪ್ಪ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿಯ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಟೆಂಪೋ ಟ್ರಾವಲರ್ ವಾಹನದಲ್ಲಿದ್ದ ಪ್ರವಾಸಿಗರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಅಪಾಯದಿಂದ ಪಾರಾಗಿದ್ದಾರೆ. ಸುಂಟಿಕೊಪ್ಪ ಎಎಸ್‌ಐ ಶ್ರೀನಿವಾಸ್ ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ



ಮಡಿಕೇರಿ, ಜೂ.28– ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ಇತ್ತೀಚೆಗೆ ಅಧಿಕಾರ ವಹಿಸಿಕೊಂಡಿದ್ದಾರೆ. ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಗಮನಕ್ಕೆ ತರುವಂತಹ ಪತ್ರಗಳು, ಅರೆ ಸರ್ಕಾರಿ ಪತ್ರಗಳು, ಇನ್ನಿತರ ಯಾವುದೇ ಮುಖ್ಯವಾದ ಪತ್ರಗಳನ್ನು ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ, ಕೆಎಸ್‌ಆರ್‌ಟಿಸಿ ಬಸ್ ಡಿಪೋ ಹತ್ತಿರ, ಮಡಿಕೇರಿ ಈ ವಿಳಾಸಕ್ಕೆ ಕಳುಹಿಸಬಹುದಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ವೆಂಕಟ್ ರಾಜಾ ತಿಳಿಸಿದ್ದಾರೆ.

ಜಂಟಿ ಖಾತೆ ಮಾಡಿಕೊಡಲು 20 ಸಾವಿರ ಲಂಚ

ನಗರಸಭೆ ಕಂದಾಯ ನಿರೀಕ್ಷಕ ಲೋಕಾಯುಕ್ತ ಬಲೆಗೆ



ಚಾಮರಾಜನಗರ, ಜೂ.28– ಎರಡು ನಿವೇಶನಗಳ ಜಂಟಿ ಖಾತೆ ಮಾಡಿಸಿಕೊಡಲು 20 ಸಾವಿರ ರೂ. ಲಂಚ ಸ್ವೀಕರಿಸುತ್ತಿದ್ದ ಇಲ್ಲಿನ ನಗರಸಭೆಯ ಪ್ರಥಮ ದರ್ಜೆ ಕಂದಾಯ ನಿರೀಕ್ಷಕ ನಾರಾಯಣ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ನಗರದ ಭ್ರಮರಾಂಬ ಬಡಾವಣೆಯ ನಿವಾಸಿ ಮಾದೇಗೌಡ ಅವರು ನಿವೇಶನಗಳ ಜಂಟಿ ಖಾತೆ ಮಾಡಿಸಲು ನಗರಸಭೆಗೆ ಅರ್ಜಿ ಹಾಕಿದ್ದರು. ಜಂಟಿ ಖಾತೆ ಮಾಡಿಕೊಡಲು ಪ್ರಥಮದರ್ಜೆ ಕಂದಾಯ ನಿರೀಕ್ಷಕ ನಾರಾಯಣ ಅವರು 20 ಸಾವಿರ ರೂ ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ಈ ಸಂಬಂಧ ಮಾದೇಗೌಡ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ನಾರಾಯಣ ಅವರು 18ನೇ ವಾರ್ಡ್‌ನಲ್ಲಿರುವ ತಮ್ಮ ಮನೆಯಲ್ಲಿ ಲಂಚದ ಹಣ ಪಡೆಯುತ್ತಿದ್ದಾಗ, ಲೋಕಾಯುಕ್ತ ಪೊಲೀಸರ ಕೈಗೆ ಸಿಕ್ಕಿ ಬಿದ್ದಿದ್ದಾರೆ. ನಂತರ ಅಧಿಕಾರಿಗಳು ಅವರನ್ನು ನಗರಸಭೆ ಕಚೇರಿಗೆ ಕರೆದುಕೊಂಡು ಬಂದು ವಿಚಾರಣೆ ನಡೆಸಿದರು. 'ನಾರಾಯಣ ಅವರನ್ನು ಬಂಧಿಸಿ 20 ಸಾವಿರ ರೂ. ನಗದು ವಶಕ್ಕೆ ಪಡೆಯಲಾಗಿದ್ದು, ತನಿಖೆ ಮುಂದುವರಿದಿದೆ' ಎಂದು ಲೋಕಾಯುಕ್ತ ಪೊಲೀಸರು ಮಾಹಿತಿ ನೀಡಿದ್ದಾರೆ.

ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ: ಕಾಮುಕನಿಗೆ 3 ವರ್ಷ ಜೈಲು




ಚಾಮರಾಜನಗರ, ಜೂ.28– ಅಪ್ರಾಪ್ತ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಅಪರಾಧಿಗೆ 3 ವರ್ಷ ಜೈಲು ಶಿಕ್ಷೆ ಬಾಲಕಿಗೆ ಕಾನೂನು ಸೇವಾ ಪ್ರಾಧಿಕಾರದಿಂದ 2ಲಕ್ಷ ರೂಪಾಯಿ ಪರಿಹಾರ ನೀಡುವಂತೆ ನಗರದ ಮಕ್ಕಳ ಸ್ನೇಹಿ ಹಾಗೂ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಆದೇಶ ನೀಡಿದೆ. ಜಿಲ್ಲೆಯ ಕೊಳ್ಳೇಗಾಲ ಪಟ್ಟಣದ ಶಿವಕುಮಾರ (37) ಶಿಕ್ಷೆಗೆ ಗುರಿಯಾದ ಅಪರಾಧಿ. 2021ರ ಜನವರಿ 1 ರಂದು 13 ವರ್ಷದ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ, ಪೋಷಕರಿಗೆ ಕೊಲೆ ಬೆದರಿಕೆ ಹಾಕಿದ್ದು ವಿಚಾರಣೆಯಲ್ಲಿ ದೃಢಪಟ್ಟ ಹಿನ್ನೆಲೆಯಲ್ಲಿ ನ್ಯಾಯಾಧೀಶರಾದ ಎ.ಸಿ. ನಿಶಾರಾಣಿ ಬುಧವಾರ ಶಿಕ್ಷೆ ಪ್ರಕಟಿಸಿದರು. ಪಿಎಸ್‌ಐ ಮಾದೇಗೌಡ ಮತ್ತು ತಾಜುದ್ದೀನ್ ಪ್ರಕರಣದ ದಾಖಲಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಾಸಿಕ್ಯೂಷನ್ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಕೆ. ಯೋಗೇಶ್ ವಾದ ಮಂಡಿಸಿದ್ದರು.

20 ದಿನವಾದರೂ ಅಧಿಕಾರಿಗಳ ಸಭೆ ನಡೆಸದ ಉಸ್ತುವಾರಿ ಸಚಿವರು

ಟೀಕೆಗೆ ಗುರಿಯಾದ ಸಚಿವ ವೆಂಕಟೇಶ್, ಸಾರ್ವಜನಿಕರಲ್ಲಿ ಅಸಮಾಧಾನ

● ಸಿದ್ದಲಿಂಗಸ್ವಾಮಿ



ಚಾಮರಾಜನಗರ ಜೂ.28– ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ಕೆ. ವೆಂಕಟೇಶ್ ಅವರನ್ನು ನೇಮಕ ಮಾಡಿ ಇಪ್ಪತ್ತು ದಿನ ಕಳೆದರೂ ಸಹ ಜಿಲ್ಲೆಯ ಅಭಿವೃದ್ಧಿಗಾಗಿ ಅವರು ಅಧಿಕಾರಿಗಳ ಸಭೆ ನಡೆಸದೇ ಇರುವುದು ಟೀಕೆಗೆ ಗುರಿಯಾಗಿದೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜೂನ್ 9ರಂದು ಎಲ್ಲಾ ಜಿಲ್ಲೆಗಳಿಗೆ ಉಸ್ತುವಾರಿ ಸಚಿವರನ್ನು ನೇಮಿಸಿ ಆದೇಶ ಹೊರಡಿಸಿತ್ತು. ಅದರಂತೆ ಚಾಮರಾಜನಗರ ಜಿಲ್ಲೆಗೆ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ಶಾಸಕ ಕೆ. ವೆಂಕಟೇಶ್ ಅವರನ್ನು ಉಸ್ತುವಾರಿಯನ್ನಾಗಿ ನೇಮಕಗೊಳಿಸಲಾಯಿತು.

ಈ ನೇಮಕಗೊಂಡ ನಂತರ ಕೆ. ವೆಂಕಟೇಶ್ ಅವರು ಚಾಮರಾಜನಗರಕ್ಕೆ ಮೂರು ಬಾರಿ ಭೇಟಿ ನೀಡಿದ್ದಾರೆ. ಇದುವರೆವಿಗೂ ಅಧಿಕಾರಿಗಳ ಸಭೆ ನಡೆಸಿ ಜಿಲ್ಲೆಯ ಅಭಿವೃದ್ಧಿ ಬಗ್ಗೆ ಗಮನ ಹರಿಸದೇ ಇರುವುದು ಜಿಲ್ಲೆಯ ನಾಗರಿಕರಲ್ಲಿ ಅಸಮಾಧಾನ ಮೂಡಿಸಿದೆ.

ರಾಜ್ಯದಲ್ಲಿ ಜೂನ್ 11ರಿಂದ ಜಾರಿಗೊಂಡ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ 'ಶಕ್ತಿ ಯೋಜನೆ'ಗೆ ಚಾಮರಾಜನಗರದಲ್ಲೂ ಅದೇ ದಿನ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರು ಚಾಲನೆ ನೀಡಿದ್ದರು. ಅವರು ಜಿಲ್ಲೆಯ ಉಸ್ತುವಾರಿಯಾಗಿ ನೇಮಕಗೊಂಡ ನಂತರ ಅಂದು ಅವರ ಮೊದಲ ಭೇಟಿಯಾಗಿತ್ತು. ನಂತರ ಜೂನ್ 13ರಂದು ಚಾಮರಾಜನಗರದಲ್ಲಿ ನಡೆದ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರ ಕೃತಜ್ಞತಾ ಸಮಾರಂಭದಲ್ಲಿ ಭಾಗವಹಿಸಿದ್ದರು. ನಂತರ ಜೂನ್ 20ರಂದು ರಾಜ್ಯಾದ್ಯಂತ ಕಾಂಗ್ರೆಸ್ ಕರೆ ನೀಡಿದ್ದ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆಯಲ್ಲಿ ಸಚಿವರು ಪಾಲ್ಗೊಂಡಿದ್ದರು.

ಜಿಲ್ಲಾ ಉಸ್ತುವಾರಿ ಸಚಿವರಾಗಿ ನೇಮಕಗೊಂಡ ನಂತರ ಕೆ. ವೆಂಕಟೇಶ್ ಅವರು ಈ ಇಪ್ಪತ್ತು ದಿನದ ಅವಧಿಯಲ್ಲಿ ಚಾಮರಾಜನಗರಕ್ಕೆ ಮೂರು ಬಾರಿ ಭೇಟಿ ನೀಡಿದ್ದಾರೆ. ಆದರೆ, ಜಿಲ್ಲೆಯ ಇತರ ನಾಲ್ಕು ತಾಲೂಕು ಕೇಂದ್ರಗಳಾದ ಗುಂಡ್ಲುಪೇಟೆ, ಕೊಳ್ಳೇಗಾಲ, ಹನೂರು ಹಾಗೂ ಯಳಂದೂರು ತಾಲೂಕುಗಳಿಗೆ ಒಮ್ಮೆಯೂ ಭೇಟಿ ನೀಡಿಲ್ಲ.

ಮೈಸೂರು ಭಾಗದ ಜಿಲ್ಲೆಗಳಿಗೆ ಉಸ್ತುವಾರಿ ಸಚಿವರು ನೇಮಕಗೊಂಡ ನಂತರ ಆಯಾಯ ಜಿಲ್ಲೆಗಳ ಉಸ್ತುವಾರಿ ಸಚಿವರು ಅಧಿಕಾರಿಗಳ ಸಭೆ ಅಥವಾ ಪ್ರಗತಿ ಪರಿಶೀಲನಾ ಸಭೆ ನಡೆಸಿದ್ದಾರೆ. ಈ ಮೂಲಕ ಆಡಳಿತ ಯಂತ್ರವನ್ನು ಚುರುಕುಗೊಳಿಸಿದ್ದಾರೆ. ಆದರೆ, ಜಿಲ್ಲೆಯ ಉಸ್ತುವಾರಿ ಸಚಿವರು ಇದುವರೆವಿಗೂ ಅಧಿಕಾರಿಗಳ ಸಭೆ ನಡೆಸಿ ಜಿಲ್ಲೆಯ ಅಭಿವೃದ್ಧಿಗೆ ಆಗುತ್ತಿರುವ ಕೆಲಸಗಳ ಬಗ್ಗೆಯಾಗಲಿ ಅಥವಾ ಆಗಬೇಕಾಗಿರುವ ಕೆಲಸಗಳ ಬಗ್ಗೆಯಾಗಲಿ ಅಧಿಕಾರಿಗಳಿಂದ ಹಾಗೂ ಆಯಾಯ ಕ್ಷೇತ್ರಗಳ ಶಾಸಕರಿಂದ ಮಾಹಿತಿ ಪಡೆದಿಲ್ಲ. ಇದು ಜಿಲ್ಲೆಯ ಅಭಿವೃದ್ಧಿಗೆ ಹಿನ್ನಡೆ ಉಂಟಾಗಿದೆ ಎಂಬ ಮಾತುಗಳು ಕೇಳಿ ಬರುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವರು ಈ ಕೂಡಲೇ ಅಧಿಕಾರಿಗಳ ಸಭೆ ನಡೆಸಲಿ ಈ ಮೂಲಕ ಆಡಳಿತ ಯಂತ್ರವನ್ನು ಚುರುಕುಗೊಳಿಸಬೇಕು. ಜಿಲ್ಲೆಯ ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ಜಾರಿಗೊಳಿಸುವತ್ತ ಗಮನ ಹರಿಸಲಿ ಎಂಬುದು ಜಿಲ್ಲೆಯ ನಾಗರಿಕರ ಒತ್ತಾಯವಾಗಿದೆ.

> ಚಾಮರಾಜನಗರಕ್ಕೆ ಜುಲೈ 1ರಂದು ಭೇಟಿ ನೀಡಿ ಅಧಿಕಾರಿಗಳ ಸಭೆ ನಡೆಸಲು ತೀರ್ಮಾನಿಸಿದ್ದೇನೆ. ಈ ಸಭೆಯಲ್ಲಿ ಕುಡಿಯುವ ನೀರು, ಮಳೆ ಬಗ್ಗೆ ಮಾಹಿತಿ ಹಾಗೂ ಬೆಳೆಗಳ ಬಗ್ಗೆ ಮಾತ್ರ ಮಾಹಿತಿ ಪಡೆಯಲಿದ್ದೇನೆ. ವಿಧಾನಸಭಾ ಅಧಿವೇಶನ ಮುಗಿದ ಬಳಿಕ ಪೂರ್ಣ ಪ್ರಮಾಣದಲ್ಲಿ ಅಧಿಕಾರಿಗಳ ಸಭೆ ನಡೆಸುತ್ತೇನೆ.
> **–ಕೆ. ವೆಂಕಟೇಶ್, ಜಿಲ್ಲಾ ಉಸ್ತುವಾರಿ ಸಚಿವರು, ಚಾಮರಾಜನಗರ.**

ಚಾಮರಾಜನಗರ ಡಿಸಿ–ಎಡಿಸಿ ವರ್ಗಾವಣೆ



ಡಿ.ಎಸ್. ರಮೇಶ್



ಕಾತ್ಯಾಯಿನಿದೇವಿ

ಚಾಮರಾಜನಗರ, ಜೂ.28– ಚಾಮರಾಜನಗರ ಜಿಲ್ಲಾಧಿಕಾರಿ ಹಾಗೂ ಹೆಚ್ಚುವರಿ ಜಿಲ್ಲಾಧಿಕಾರಿಯನ್ನು ವರ್ಗಾವಣೆಗೊಳಿಸಿ ಸರ್ಕಾರ ಆದೇಶ ಹೊರಡಿಸಿದೆ.

ಚಾಮರಾಜನಗರ ಜಿಲ್ಲಾಧಿಕಾರಿಯಾಗಿದ್ದ ಡಿ.ಎಸ್. ರಮೇಶ್ ಅವರನ್ನು ತೋಟಗಾರಿಕೆ ಇಲಾಖೆ ನಿರ್ದೇಶಕರನ್ನಾಗಿ ನೇಮಕ ಮಾಡಿದ್ದು, ಚಾಮರಾಜನಗರ ಡಿಸಿಯಾಗಿ ಇನ್ನೂ ಯಾರನ್ನೂ ಸರ್ಕಾರ ನೇಮಕ ಮಾಡಿಲ್ಲ.

ಚಾಮರಾಜನಗರ ಹೆಚ್ಚುವರಿ ಜಿಲ್ಲಾಧಿಕಾರಿ ಹಾಗೂ ಮಲೆ ಮಹದೇಶ್ವರ ಬೆಟ್ಟ ಪ್ರಾಧಿಕಾರದ ಕಾರ್ಯದರ್ಶಿಯಾಗಿದ್ದ ಕಾತ್ಯಾಯಿನಿದೇವಿ ಅವರನ್ನು ಸ್ಥಳ ತೋರಿಸದೇ ವರ್ಗಾವಣೆ ಮಾಡಲಾಗಿದ್ದು ಇವರ ಜಾಗಕ್ಕೆ ಕೊಳ್ಳೇಗಾಲ ಎಸಿಯಾಗಿ ಬಡ್ತಿ ಹೊಂದಿದ್ದ ಗೀತಾ ಹುಡೇದಾ ಅವರನ್ನು ನೇಮಕ ಮಾಡಲಾಗಿದೆ. ಚಾಮರಾಜನಗರ ಎಡಿಸಿ, ಪ್ರಾಧಿಕಾರದ ಕಾರ್ಯದರ್ಶಿಯಾಗಿ ಗೀತಾ ಹುಡೇದಾ ಅಧಿಕಾರ ಸ್ವೀಕರಿಸಿದ್ದಾರೆ.

ಬಂಡೀಪುರದಲ್ಲಿ ಆನೆ ಮರಿ ಸಾವು



ಗುಂಡ್ಲುಪೇಟೆ,ಜೂ.28(ಎಂಟಿವೈ)– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕುಂದುಕೆರೆ ವಲಯದ ಕಡಬೂರು ಗಸ್ತಿನ ಕೋಟೆಗೆರೆ ಕೆರೆ ಹಳ್ಳದಲ್ಲಿ 3–4 ವರ್ಷದ ಹೆಣ್ಣಾನೆ ಮರಿಯೊಂದು ಮೃತಪಟ್ಟಿದ್ದು, ಯಾವುದೋ ಪ್ರಾಣಿ ದಾಳಿಯಿಂದ ಆನೆಮರಿ ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ.

ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಈ ಆನೆ ಮರಿ ಮೃತಪಟ್ಟಿದ್ದು, ಗಸ್ತು ತಿರುಗುತ್ತಿದ್ದ ಸಿಬ್ಬಂದಿಗೆ ಕೊಳೆತ ಸ್ಥಿತಿಯಲ್ಲಿ ಕಳೇಬರ ಪತ್ತೆಯಾಗಿದೆ. ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ಅರಣ್ಯ ಪ್ರದೇಶದಲ್ಲೇ ಮರಣೋತ್ತರ ಪರೀಕ್ಷೆ ನಡೆಸಿ, ವನ್ಯಜೀವಿಗಳ ಸೇವನೆಗಾಗಿ ಹಾಗೇ ಬಿಡಲಾಗಿದೆ.

ಸ್ಥಳಕ್ಕೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್, ಗುಂಡ್ಲುಪೇಟೆ ಉಪ ವಿಭಾಗದ ಎಸಿಎಫ್ ಜಿ.ರವೀಂದ್ರ, ಕುಂದುಕೆರೆ ವಲಯದ ಆರ್‌ಎಫ್‌ಓ ಡಿ. ಶ್ರೀನಿವಾಸ್, ಇಲಾಖಾ ಪಶು ವೈದ್ಯ ಡಾ.ಮಿರ್ಜಾ ವಾಸಿಂ ಹಾಗೂ ಇನ್ನಿತರರು ಪರಿಶೀಲನೆ ನಡೆಸಿದರು.

ಕೆಂಪೇಗೌಡರು ದೂರದೃಷ್ಟಿ ಇಟ್ಟುಕೊಂಡು ಬೆಂಗಳೂರು ನಿರ್ಮಾಣ ಮಾಡಿದರು : ಶಾಸಕ ಕೃಷ್ಣಮೂರ್ತಿ



ಯಳಂದೂರು, ಜೂ.28– ಪಟ್ಟಣದ ತಾಲೂಕು ಕಚೇರಿ ಸಭಾಭವನದಲ್ಲಿ ತಾಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ನಾಡಪ್ರಭು ಕೆಂಪೇಗೌಡ ಜಯಂತಿಯನ್ನು ಆಚರಿಸಲಾಯಿತು.

ಕಾರ್ಯಕ್ರಮವನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಅವರು ಉದ್ಘಾಟಿಸಿ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದರು.

ನಂತರ ಕಾರ್ಯಕ್ರಮ ಕುರಿತು ಮಾತನಾಡಿದ ಅವರು, ಕೆಂಪೇಗೌಡರು ಎಲ್ಲಾ ಸಮುದಾಯವನ್ನು ಸಮಾನ ಭಾವನೆಯಿಂದ ಗೌರವಿಸಿದವರು, ಬೆಂಗಳೂರಿನಲ್ಲಿ ತಮ್ಮ ಜೀವನ ನಡೆಸಲೆಂದು ಆಯಾ ಸಮುದಾಯದ ವೃತ್ತಿಗನುಗುಣವಾಗಿ ಮಾರುಕಟ್ಟೆ ಸೃಷ್ಟಿಸಿದವರು, ಇಂದಿನ ಕಸುಬಿಗೆ ತಕ್ಕಂತೆ ಪೇಟೆ, ಪಂಥಗಳಿಗೆ ತಕ್ಕಂತೆ, ಗುಡಿಗೋಪುರ, ವಸತಿಗೆ ತಕ್ಕಂತೆ ಕೆರೆ–ಕುಂಟೆಗಳನ್ನು ನಿರ್ಮಿಸಿ ಮಾದರಿ ನಗರ ನಿರ್ಮಾಣಕ್ಕೆ ಕಾರಣರಾದ ನಾಡಪ್ರಭು ಕೆಂಪೇಗೌಡರ ಜಾತ್ಯತೀತ ಮನೋಭಾವವನ್ನು ಎಲ್ಲರೂ ಸ್ಮರಣೆಮಾಡಿಕೊಳ್ಳಬೇಕು, ಕೆಂಪೇಗೌಡರು ದೂರದೃಷ್ಟಿಯಿಂದ ಬೆಂಗಳೂರನ್ನು ಕಟ್ಟಿದರು. ಎಲ್ಲಾ ಸಮುದಾಯದವರು ಸಹಬಾಳ್ವೆಯಿಂದ ಜೀವನ ನಡೆಸುವಂತೆ ಮಾಡಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ನಂಜುಂಡಸ್ವಾಮಿ, ಮುಖ್ಯ ಭಾಷಣಕಾರರಾದ ದೊಡ್ಡಿಂದುವಾಡಿ ಶಿವಣ್ಣ, ಒಕ್ಕಲಿಗರ ಸಂಘದ ಅಧ್ಯಕ್ಷ ರಾಜುಗೌಡ, ಪಪಂ ಮಾಜಿ ಅಧ್ಯಕ್ಷೆ ಪ್ರಭಾವತಿ ಹಾಗೂ ಸದಸ್ಯರು, ಜೆ.ಯೋಗೇಶ್, ಬಿ.ಓ.ಕಾಂತರಾಜು, ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ ವೈ.ಎಂ. ಮಂಜುನಾಥ್, ತಹಸೀಲ್ದಾರ್ ಶಿವರಾಜ್, ಇ.ಓ.ಉಮೇಶ್, ಪಪಂ ಮುಖ್ಯಾಧಿಕಾರಿ ರವಿ ಕೀರ್ತಿ, ಮುಖಂಡರಾದ ಆನಂದ್ ಕುಮಾರ್, ರೇವಣ್ಣ, ಆ.ಅ. ಬಾಬು, ರಘು, ಯೋಗೇಂದ್ರ, ಸಿದ್ದಲಿಂಗ ಗೌಡ, ಪ್ರಕಾಶ್, ಮಾದೇಗೌಡ, ಶ್ರೀನಿವಾಸ್, ಶಂಕರ್, ಬಸವರಾಜ್, ಸಮುದಾಯದ ಮುಖಂಡರು ಹಾಗೂ ಸಾರ್ವಜನಿಕರು ಹಾಜರಿದ್ದರು.

ಜು.3ರಂದು ಚಾಮರಾಜೇಶ್ವರಸ್ವಾಮಿ ರಥೋತ್ಸವ

ಪೂರ್ವಭಾವಿ ಸಭೆಯಲ್ಲಿ ಸಿದ್ಧತೆ ಕುರಿತು ಚರ್ಚೆ



ಚಾಮರಾಜನಗರ, ಜೂ.28– ಚಾಮರಾಜನಗರದಲ್ಲಿ ಜು.3ರಂದು ನಡೆಯುವ ಶ್ರೀ ಚಾಮರಾಜೇಶ್ವರಸ್ವಾಮಿ ಮಹಾರಥೋತ್ಸವವನ್ನು ಅದ್ಧೂರಿಯಾಗಿ ನಡೆಸುವ ಸಂಬಂಧ ಅಧಿಕಾರಿಗಳು ಹಾಗೂ ವಿವಿಧ ಮುಖಂಡರ ಸಮ್ಮುಖದಲ್ಲಿ ಪೂರ್ವಭಾವಿ ಸಭೆ ನಡೆಯಿತು.

ನಗರದ ಚಾಮರಾಜೇಶ್ವರ ದೇವಸ್ಥಾನದಲ್ಲಿಂದು ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಹಾಗೂ ತಹಶೀಲ್ದಾರ್ ಐ.ಇ. ಬಸವರಾಜು ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಶ್ರೀ ಚಾಮರಾಜೇಶ್ವರಸ್ವಾಮಿ ಮಹಾರಥೋತ್ಸವ ಸಂಬಂಧ ವಿವರವಾಗಿ ಚರ್ಚಿಸಲಾಯಿತು.

ದೇವಸ್ಥಾನ ಹಾಗೂ ರಥ ಸಾಗುವ ಕಡೆಗಳಲ್ಲಿ ವಿದ್ಯುತ್ ದೀಪಾಲಂಕಾರ ಮಾಡಬೇಕು. ರಥೋತ್ಸವದಂದು ತೇರು ಸಾಗುವ ಮಾರ್ಗಗಳಲ್ಲಿ ಮರಳು ಹಾಕಬೇಕು. ರಥೋತ್ಸವ ಮುಗಿದ ಕೂಡಲೇ ಮರಳನ್ನು ತೆರವುಗೊಳಿಸಿ ವಾಹನ ಸವಾರರು, ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಭಕ್ತಾದಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಸಮರ್ಪಕವಾಗಿ ಮಾಡಬೇಕು. ಕರ್ಕಶ ಶಬ್ದದ ಪೀಪಿಗಳಿಂದ ಉಂಟಾಗುವ ಹಾಗೂ ಬಣ್ಣ ಹಚ್ಚಿ ಸಾರ್ವಜನಿಕರಿಗೆ ಕಿರಿಕಿರಿ ಮಾಡುವುದನ್ನ ತಪ್ಪಿಸಬೇಕು. ತೇರು ರಕ್ಷಣೆಗೆ ಮೇಲ್ಛಾವಣಿ ನಿರ್ಮಾಣ ಮಾಡಬೇಕು ಎಂಬುದೂ ಸೇರಿದಂತೆ ಇತರೆ ಸಲಹೆಗಳನ್ನು ಮುಖಂಡರು ಸಭೆಯಲ್ಲಿ ನೀಡಿದರು. ತಹಶೀಲ್ದಾರ್ ಬಸವರಾಜು ಅವರು ಮಾತನಾಡಿ ಕಳೆದ ಬಾರಿ ಅಚ್ಚುಕಟ್ಟಾಗಿ ರಥೋತ್ಸವ ನೆರವೇರಿದೆ. ಈ ವರ್ಷವೂ ಸಹ ಸುಸೂತ್ರವಾಗಿ ನಡೆಯಲು ಈ ಹಿಂದಿನಂತೆ ಎಲ್ಲರೂ ಸಹಕಾರ ನೀಡಬೇಕು. ಪ್ರತಿ ಗ್ರಾಮದ ಗ್ರಾಮಸ್ಥರು, ಯಜಮಾನರು, ಮುಖಂಡರು ರಥೋತ್ಸವಕ್ಕೆ ಅಗತ್ಯವಿರುವ ಎಲ್ಲಾ ಸಹಕಾರ ಮುಂದುವರೆಸಬೇಕು ಎಂದು ಮನವಿ ಮಾಡಿದರು.

ಈ ವರ್ಷವು ಸಾಕಷ್ಟು ಭಕ್ತಾದಿಗಳು ಬರುವ ನಿರೀಕ್ಷೆಯಿದೆ. ಭಕ್ತಾದಿಗಳಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಹಲವಾರು ಕ್ರಮಗಳನ್ನು ಜಾರಿಗೊಳಿಸಲಾಗುವುದು. ದೇವಸ್ಥಾನದ ಸುತ್ತಲೂ ಶುಚಿತ್ವ ಕಾಪಾಡಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗುವುದು. ರಥೋತ್ಸವಕ್ಕೂ ಮೊದಲು ಹಾಗೂ ರಥೋತ್ಸವದ ನಂತರ ಎಲ್ಲಾ ಅವಶ್ಯವಿರುವ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ ಎಂದು ತಹಶೀಲ್ದಾರ್ ಬಸವರಾಜು ತಿಳಿಸಿದರು.

ನಗರಸಭೆಯ ಸದಸ್ಯರಾದ ಚಿನ್ನಮ್ಮ, ನೀಲಮ್ಮ, ಭಾಗ್ಯಮ್ಮ, ಸುದರ್ಶನ್ ಗೌಡ, ದೇವಸ್ಥಾನದ ಆಗಮಿಕರಾದ ದರ್ಶನ್, ಅರ್ಚಕರಾದ ಅನಿಲ್, ಮುಖಂಡರಾದ ಗಣೇಶ್ ದೀಕ್ಷಿತ್, ಚಾ.ರಂ. ಶ್ರೀನಿವಾಸಗೌಡ, ಸುರೇಶ್ ನಾಯಕ, ರಾಮಸಮುದ್ರ ನಾಗರಾಜು, ಜಿ. ಬಂಗಾರು, ಸುರೇಶ್ ವಾಜಪೇಯಿ, ಸಿ.ಎನ್. ಮಹೇಶ್ ಕುದರ್, ಬಂಗಾರ ಸ್ವಾಮಿ, ಜಿ.ಎಂ. ಹೆಗ್ಗಡೆ, ಜಯಕುಮಾರ್, ಗು.ಪುರುಷೋತ್ತಮ್, ವೈ.ವಿ. ಲೋಕನಾಥ್, ಶ್ರೀನಿವಾಸಶೆಟ್ಟಿ, ಆರ್.ಮಂಜೇಶ, ಆರ್.ವಿ. ಮಹದೇವಸ್ವಾಮಿ, ರಾಜುನಾಯಕ, ಮಹದೇವ, ಸಿ.ಎನ್. ನಂಜದೇವರು, ಮಹದೇವನಾಯಕ, ರವಿಚಂದ್ರ ಪ್ರಸಾದ್ ಕಹಳೆ, ಶ್ರೀನಿವಾಸ್ ಚೆಟ್ಟಪ್ಪ, ಸಿ.ವಿ. ಗೋವಿಂದರಾಜು, ಎಂ. ಶ್ರೀನಿವಾಸ್, ನಂಜಶೆಟ್ಟಿ, ಸಿ.ಎಸ್. ಶಿವಣ್ಣ, ಚಿದಂಬರ, ನಗರಸಭೆಯ ಪೌರಾಯುಕ್ತರಾದ ಎಸ್.ವಿ. ರಾಮದಾಸ್, ಪಟ್ಟಣ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಸುನೀಲ್, ಸೆಸ್ಕ್ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ರಾಜು, ಅಗ್ನಿಶಾಮಕಾಧಿಕಾರಿ ಶಿವಾಜಿರಾವ್ ಪವರ್, ದೇವಸ್ಥಾನದ ಕಾರ್ಯನಿರ್ವಾಹಕಾಧಿಕಾರಿ ರಾಜಶೇಖರ್‌ಮೂರ್ತಿ, ಬಂಡಿಗಾರ್ ದಪೇದಾರ್ ಹಾಗೂ ವಿವಿಧ ಕೋಮಿನ ಮುಖಂಡರು, ಯಜಮಾನರು ಸಭೆಯಲ್ಲಿ ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಮತ್ತೈದು ಕೆಜಿಗೆ ದುಡ್ಡು

ಹರಿಹಾಯ್ದರು. ಅವರು ಎಷ್ಟೇ ರಾಜಕೀಯ ಮಾಡಿದರೂ, ನಾವು ನಮ್ಮ ನಿಲುವಿನಿಂದ ಹಿಂದೆ ಸರಿಯುವುದಿಲ್ಲ. ಅಕ್ಕಿ ಖರೀದಿಗೆ ಒಂದಷ್ಟು ಸಮಯ ಹಿಡಿಯುತ್ತದೆ. ನಮಗೆ ಅಗತ್ಯವಾಗಿರುವ ಅಕ್ಕಿ ಶೇಖರಣೆಯಾಗುವವರೆಗೂ ಫಲಾನುಭವಿಗಳ ಖಾತೆಗೆ ಹಣ ವರ್ಗಾವಣೆ ಮಾಡುತ್ತೇವೆ. ನಾನು ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಭೇಟಿ ಮಾಡಿ, ಬಡವರ ಯೋಜನೆಗೆ ಅಕ್ಕಿ ನೀಡುವಂತೆ ಮನವಿ ಮಾಡಿದೆ. ಅವರು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಸಮಾಲೋಚಿಸಿ, ತಮಗೆ ಮಾಹಿತಿ ನೀಡುತ್ತೇವೆ ಎಂದರು. ನಂತರ ನಮ್ಮ ಆಹಾರ ಸಚಿವರು ಕೇಂದ್ರದ ಸಂಬಂಧಪಟ್ಟ ಸಚಿವರನ್ನು ಭೇಟಿ ಮಾಡಿದ ಸಂದರ್ಭದಲ್ಲೂ ಅಕ್ಕಿ ನೀಡಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಈಗ ಪ್ರತಿ ಯುನಿಟ್‌ಗೆ ಐದು ಕೆಜಿ ಆಹಾರ ಧಾನ್ಯಗಳನ್ನು ವಿತರಿಸಲಾಗುವುದು. ಇದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಿ ಸ್ವಾಮ್ಯದ ವಿವಿಧ ಸಂಸ್ಥೆಗಳಲ್ಲಿ ಟೆಂಡರ್ ಮೂಲಕವೇ ಆಹಾರ ಧಾನ್ಯ ಪಡೆದು, ವಿತರಿಸುತ್ತೇವೆ ಎಂದರು.

ಬಿಪಿಎಲ್ ಪಡಿತರ ಚೀಟಿ ಹೊಂದಿರುವವರು ಆಧಾರ್ ಕಾರ್ಡ್ ಲಿಂಕ್ ಸಂದರ್ಭದಲ್ಲೇ ತಮ್ಮ ಬ್ಯಾಂಕ್ ಖಾತೆ ವಿವರಗಳನ್ನು ನೀಡಿದ್ದಾರೆ. ಇದು ಶೇ. 95 ರಷ್ಟು ಪೂರ್ಣಗೊಂಡಿದೆ. ಹಾಗಾಗಿ ಜುಲೈ 1 ರಿಂದಲೇ ಫಲಾನುಭವಿಗಳ ಖಾತೆಗೆ ಹಣ ವರ್ಗಾವಣೆಯಾಗಲಿದೆ. ಇದರಲ್ಲಿ ಅನುಮಾನ ಬೇಡ ಎಂದರು.

ಗೃಹಲಕ್ಷ್ಮಿಗೆ ಜು.14ರಿಂದ ಅರ್ಜಿ ಸಲ್ಲಿಕೆಗೆ ಅವಕಾಶ

ಯಜಮಾನಿಗೆ ಮಾಸಿಕ ಎರಡು ಸಾವಿರ ರೂ.ಗಳನ್ನು ಪಾವತಿಸುವ ತೀರ್ಮಾನ ಈಗಾಗಲೇ ಕೈಗೊಳ್ಳಲಾಗಿದೆ. ಅರ್ಹರು ದಾಖಲೆ ಸಮೇತ ಅರ್ಜಿಯನ್ನು ಜುಲೈ 14 ರಿಂದ ಸಲ್ಲಿಸಬಹುದಾಗಿದೆ. ಇದಕ್ಕೆ ಸಂಬಂಧಪಟ್ಟ ಸಚಿವರು ಪೂರ್ಣ ಮಾಹಿತಿಯನ್ನು ನಾಳೆ ನೀಡಲಿದ್ದಾರೆ ಎಂದರು. ಕಾವೇರಿ ಕಣಿವೆ ಸೇರಿದಂತೆ ರಾಜ್ಯದ ನೀರಾವರಿ ಯೋಜನೆಗಳ ಅನುಷ್ಠಾನ ಹಾಗೂ ನ್ಯಾಯಾಧಿಕರಣದ ತೀರ್ಪುಗಳನ್ನು ಪಾಲಿಸಲು ಸಂಪುಟದ ಉಪ ಸಮಿತಿ ರಚನೆಗೆ ತೀರ್ಮಾನಿಸಲಾಗಿದೆ. ಸಮಿತಿಯಲ್ಲಿ ಯಾರಿರಬೇಕು ಎಂಬುದರ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತೀರ್ಮಾನ ಕೈಗೊಳ್ಳುತ್ತಾರೆ.

ಜನಪರ ಹೋರಾಟ ನಡೆಸಿದವರ ವಿರುದ್ಧ ಸುಳ್ಳು ಮೊಕದ್ದಮೆಗಳನ್ನು ಹೂಡಲಾಗಿದ್ದು, ಅವುಗಳನ್ನು ಹಿಂಪಡೆಯುವಂತೆ ಸರ್ಕಾರದ ಮೇಲೆ ಒತ್ತಡ ಬಂದಿದೆ.

ರೈತರು, ಕನ್ನಡ ಪರ ಸಂಘಟನೆಗಳು ಮತ್ತು ವಿವಿಧ ಮುಖಂಡರುಗಳು ಇಂತಹ ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ಸುಳ್ಳು ಪ್ರಕರಣಗಳನ್ನು ಹಿಂತೆಗೆದುಕೊಳ್ಳಲು ಸಂಪುಟ ತಾತ್ವಿಕವಾಗಿ ಒಪ್ಪಿದೆ. ಆದರೆ ಯಾವ ಪ್ರಕರಣಗಳನ್ನು ಹಿಂತೆಗೆದುಕೊಳ್ಳಬೇಕು ಎಂಬ ತೀರ್ಮಾನ ಕೈಗೊಳ್ಳಲು ಸಂಪುಟದ ಉಪ ಸಮಿತಿ ರಚಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು. ಪರಿಶಿಷ್ಟ ಜಾತಿ, ಪಂಗಡಗಳ ಗುತ್ತಿಗೆದಾರರಿಗೆ ಗುತ್ತಿಗೆ ನೀಡುವ ಗರಿಷ್ಠ ಮೊತ್ತವನ್ನು 50 ಲಕ್ಷದಿಂದ ಒಂದು ಕೋಟಿ ರೂ.ಗೆ ಹೆಚ್ಚಿಸಲು ಸಂಪುಟ ಸಮ್ಮತಿಸಿದೆ ಎಂದರು. ಕರ್ನಾಟಕ ಸರಕು ಮತ್ತು ಸೇವೆಗಳ ತಿದ್ದುಪಡಿ ಕಾಯ್ದೆಗೆ ಸಭೆ ಒಪ್ಪಿಗೆ ನೀಡಿದೆ. ಕೇಂದ್ರ ಸರ್ಕಾರ ಶಿಫಾರಸ್ಸು ಮಾಡಿರುವಂತೆ ಆರೋಪಗಳು ಕೇಳಿ ಬಂದಾಗ ಅದಕ್ಕೆ ಪುರಾವೆಗಳನ್ನು ಒದಗಿಸಬೇಕು ಎಂಬ ಬದಲಾಗಿ, ಸರ್ಕಾರವೇ ಸಾಬೀತುಪಡಿಸುವುದು ಎಂಬ ತಿದ್ದುಪಡಿ ತಿರಸ್ಕರಿಸಿ, ಉಳಿದಂತೆ ಕಾಯ್ದೆಗಳನ್ನು ಯಥಾವತ್ತಾಗಿ ಜಾರಿ ಮಾಡಲು ಬರುವ ವಿಧಾನಮಂಡಲದಲ್ಲಿ ಕಾಯ್ದೆ ಮಂಡಿಸಲಾಗುವುದು ಎಂದರು.

ಹಾಡಹಗಲೇ ವರ್ತಕನ ಅಪಹರಣ

ಜೂನ್ 26ರಂದು ಬೆಳಗ್ಗೆ 10 ಗಂಟೆ ವೇಳೆಗೆ ಆತನ ಅಂಗಡಿಯಿಂದ ಹುಂಡೈ ವರ್ಣ ಕಾರಿನಲ್ಲಿ ಅಪಹರಿಸಿಕೊಂಡು ಹೋಗಿದ್ದರು. ಈತನ ಪಕ್ಕದ ಅಂಗಡಿ ಮಾಲೀಕ ನೀಡಿದ ದೂರಿನನ್ವಯ ಕಾರ್ಯಾಚರಣೆ ನಡೆಸಿದ ಪೊಲೀಸರು, ಆನೇಕಲ್ ತಾಲೂಕು, ಜಿಗಣಿ ಗ್ರಾಮದ ಕಟ್ಟಡವೊಂದರಲ್ಲಿ ಐವರು ಅಪಹರಣಕಾರರನ್ನು ಬಂಧಿಸಿ, ಒತ್ತೆಯಾಳಾಗಿದ್ದ ಪ್ರಕಾಶ್‌ಕುಮಾರ್‌ನನ್ನು ರಕ್ಷಿಸಿದ್ದಾರೆ.

ವಿವರ: ರಾಜಾಸ್ತಾನದ ಶಿವಾನ ಗ್ರಾಮದ ಪ್ರಕಾಶ್‌ಕುಮಾರ್ ಮೈಸೂರಿನ ಹಳ್ಳದಕೇರಿ 1ನೇ ಕ್ರಾಸ್‌ನಲ್ಲಿ ಬಾಡಿಗೆಗೆ ಅಂಗಡಿ ಪಡೆದು ಶಿವಶಕ್ತಿ ಮಾರ್ಕೆಟಿಂಗ್ ಹೆಸರಿನಲ್ಲಿ ಕಿಚನ್‌ವೇರ್ ಐಟಂಗಳ ಮಾರಾಟ ಮಾಡಿಕೊಂಡಿದ್ದರು. ಜೂನ್ 26ರಂದು ಬೆಳಗ್ಗೆ 9.50ರ ಸುಮಾರಿನಲ್ಲಿ ಕಾರಿನಲ್ಲಿ ಬಂದ ಐವರು, ಇವರನ್ನು ಅಪಹರಿಸಿಕೊಂಡು ಹೋಗಿದ್ದಾರೆ. ಈ ಅಂಗಡಿಯ ಪಕ್ಕದ ಅಂಗಡಿ ನಂದಿ ಸ್ಟೀಲ್ ಹೌಸ್ ಪಾತ್ರೆ ಅಂಗಡಿಯ ಕೆಲಸಗಾರ ಪ್ರವೀಣ್ ಎಂಬಾತ ತನ್ನ ಮಾಲೀಕ ಪೋಲಾರಾಂ(42) ಎಂಬುವರಿಗೆ ವಿಷಯ ತಿಳಿಸಿದ್ದಾನೆ. ಆದರೆ, ಪ್ರಕಾಶ್‌ಕುಮಾರ್ ಅವರನ್ನು ಅಪಹರಿಸಿದ್ದ ಕಾರಿನ ಸಂಖ್ಯೆಯನ್ನು ಪ್ರವೀಣ್ ಗಮನಿಸಿರಲಿಲ್ಲ. ಆದರೆ, ಅದು ಬಿಳಿ ಕಾರು ಎಂದು ಮಾತ್ರ ಹೇಳಿದ್ದ.

ಈ ಹಿನ್ನೆಲೆಯಲ್ಲಿ ಪೋಲಾರಾಂ ಅವರು ಪ್ರಕಾಶ್‌ಕುಮಾರ್ ಅಪಹರಣದ ಬಗ್ಗೆ ಲಷ್ಕರ್ ಠಾಣೆಗೆ ದೂರು ಸಲ್ಲಿಸಿದ್ದರು. ತಕ್ಷಣವೇ ಕಾರ್ಯಪ್ರವೃತ್ತರಾದ ಪೊಲೀಸರು, ಪ್ರಕಾಶ್‌ಕುಮಾರ್ ಅಪಹರಣವಾದ ವೇಳೆ ಹಳ್ಳದಕೇರಿ 1ನೇ ಕ್ರಾಸ್‌ನಲ್ಲಿ ಸಂಚರಿಸಿರುವ ಬಿಳಿ ಕಾರುಗಳ ಚಲನವಲನದ ಬಗ್ಗೆ ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿರುವ ಸಿಸಿ ಕ್ಯಾಮರಾ ನಿಗಾ ಘಟಕದ ಸಹಕಾರದಿಂದ ಪರಿಶೀಲನೆ ನಡೆಸಿದ್ದಾರೆ. ಆ ವೇಳೆ ಹಳ್ಳದಕೇರಿ 1ನೇ ಕ್ರಾಸ್‌ನಲ್ಲಿ ಕೇವಲ ಒಂದೇ ಒಂದು ಬಿಳಿ ಕಾರು ಸಂಚರಿಸಿದ್ದು, ಅದರ ಸಂಖ್ಯೆಯೂ ಕೂಡ ಪತ್ತೆಯಾಗಿದೆ. ಇದರ ಜಾಡನ್ನು ಹಿಡಿದು. ಸದರಿ ಕಾರು ಸಂಚರಿಸಿದ ಮಾರ್ಗದ ಸಿಸಿ ಕ್ಯಾಮರಾ ಫುಟೇಜ್‌ಗಳ ಸಹಕಾರದೊಂದಿಗೆ ಪೊಲೀಸರು ಕಾರ್ಯಾಚರಣೆಗಿಳಿದಿದ್ದಾರೆ. ಸದರಿ ಕಾರು ಆನೇಕಲ್ ತಾಲೂಕು ಜಿಗಣಿಗೆ ತೆರಳಿರುವುದು ಗೊತ್ತಾಗಿದೆ. ಜಿಗಣಿಯಲ್ಲಿ ಹುಡುಕಾಟ ನಡೆಸಿದಾಗ ಅದೇ ದಿನ ಸಂಜೆ ಕಟ್ಟಡವೊಂದರ ಮುಂದೆ ಕಾರು ನಿಂತಿರುವುದು ಪತ್ತೆಯಾಗಿದೆ. ಕಟ್ಟಡದಲ್ಲಿ ಒತ್ತೆಯಾಳುವಿನೊಂದಿಗಿದ್ದ ಅಪಹರಣಕಾರರನ್ನು ಬಂಧಿಸಿದ ಪೊಲೀಸರು, ಪ್ರಕಾಶ್‌ಕುಮಾರ್ ಅವರನ್ನು ರಕ್ಷಿಸಿ ಕರೆತಂದಿದ್ದಾರೆ.

ಅಪಹರಣ ಏಕೆ?: ಬೆಂಗಳೂರಿನಲ್ಲಿ ಗುಟ್ಕಾ ಸಗಟು ವ್ಯಾಪಾರ ಮಾಡುತ್ತಿದ್ದ ದುಂಗರ್ ಸಿಂಗ್‌ನಿಂದ ಪ್ರಕಾಶ್‌ಕುಮಾರ್ ತಮಿಳುನಾಡಿನ ಸೇತು ಎಂಬಾತನಿಗೆ 5.6 ಲಕ್ಷ ರೂ. ಮೌಲ್ಯದ ಗುಟ್ಕಾವನ್ನು ಸಾಲ ಕೊಡಿಸಿದ್ದಾರೆ. ಆದರೆ ಸಾಲ ಪಡೆದ ಸೇತು ಹಣ ಹಿಂತಿರುಗಿಸಲು ದುಂಗರ್‌ಸಿಂಗ್‌ಗೆ ಸತಾಯಿಸಿದ್ದರಿಂದ ಈ ಹಣ ಕೊಡಬೇಕೆಂದು ಪ್ರಕಾಶ್‌ಕುಮಾರ್‌ನನ್ನು ದುಂಗರ್ ಸಿಂಗ್ ಕೇಳಿದ್ದಾನೆ. ಆದರೆ, ನಾನು ನಿನಗೆ ಗ್ರಾಹಕನನ್ನು ತೋರಿಸಿಕೊಟ್ಟಿದ್ದೆ. ಹಣ ಪಡೆದು ಗುಟ್ಕಾ ಕೊಡಬೇಕಿತ್ತು. ತಪ್ಪು ಮಾಡಿರುವುದು ನೀನು. ಅವನಿಂದ ಹಣ ವಸೂಲಿ ಮಾಡಬೇಕಿರುವುದು ನೀನೇ ಹೊರತು ನಾನಲ್ಲ. ನಿನ್ನಿಂದ ನಾನು ಮಾಲು ಪಡೆದಿಲ್ಲ. ಹೀಗಾಗಿ ಹಣ ಕೊಡಲು ಸಾಧ್ಯವಿಲ್ಲ ಎಂದು ಪ್ರಕಾಶ್‌ಕುಮಾರ್ ಹೇಳಿದ್ದಾರೆ. ಇದರಿಂದಾಗಿ ಸಿಟ್ಟಿಗೆದ್ದ ದುಂಗರ್‌ಸಿಂಗ್ ಹಣ ವಸೂಲಿಗಾಗಿ ಪ್ರಕಾಶ್‌ಕುಮಾರ್‌ನನ್ನು ಅಪರಹಿಸಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಸೋಮವಾರದಂದು ರಾತ್ರಿ ವೇಳೆಗೆ ಅಪಹರಣಕಾರರು ಹಾಗೂ ಒತ್ತೆಯಾಳುವಿನೊಂದಿಗೆ ಮೈಸೂರಿಗೆ ಹಿಂತಿರುಗಿದ ಪೊಲೀಸರು, ಮಂಗಳವಾರ ಆರೋಪಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿ ಎಲ್ಲರನ್ನೂ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಮುತ್ತುರಾಜ್, ಜಾಹ್ನವಿ, ದೇವರಾಜ ಉಪ ವಿಭಾಗದ ಎಸಿಪಿ ಶಾಂತಮಲ್ಲಪ್ಪ ಮಾರ್ಗದರ್ಶನದಲ್ಲಿ ಲಷ್ಕರ್ ಠಾಣೆ ಇನ್ಸ್‌ಪೆಕ್ಟರ್ ಪಿ.ಪಿ. ಸಂತೊಷ್, ಸಬ್‌ಇನ್ಸ್‌ಪೆಕ್ಟರ್ ಅನಿಲ್, ಸಿಬ್ಬಂದಿಗಳಾದ ಚೇತನ್, ಚಿನ್ನಪ್ಪ, ಮಂಜು, ಕಿರಣ್, ಮಹದೇವಸ್ವಾಮಿ, ಪ್ರದೀಪ್, ರಾಥೋಡ್, ಬಾಬು ಪ್ರಕಾಶ್, ಕಾವ್ಯಶ್ರೀ ಅವರನ್ನೊಳಗೊಂಡ ತಂಡ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿತ್ತು.

ಎಕ್ಸ್‌ಪ್ರೆಸ್ ವೇ 2ನೇ ಟೋಲ್ ಆರಂಭ

ಗಣಂಗೂರು ಟೋಲ್ ಪ್ಲಾಜಾದಲ್ಲಿ ವಾಹನ ಸವಾರರು ಟೋಲ್ ಹಣ ನೀಡಬೇಕಿದೆ. ಜನರು ಇಷ್ಟು ದಿನ ಯಾವುದಾದರೂ ಒಂದು ಟೋಲ್‌ನಲ್ಲಿ ಹಣ ಕಟ್ಟಿದರೆ ಆಯಿತು ಎಂದುಕೊಂಡಿದ್ದರು. ಆದರೆ ಹೆದ್ದಾರಿ ಪ್ರಾಧಿಕಾರ ಎರಡು ಟೋಲ್‌ಗಳಿಗೂ ಪ್ರತ್ಯೇಕ ಟೋಲ್ ದರವನ್ನು ನಿಗದಿ ಮಾಡಿದೆ. ಉದಾಹಾರಣೆಗೆ ಮೈಸೂರಿನಿಂದ ಬೆಂಗಳೂರಿಗೆ ಕಾರಿನಲ್ಲಿ ಪ್ರಯಾಣ ಮಾಡುವವರು ಮೊದಲಿಗೆ ಗಣಂಗೂರು ಟೋಲ್‌ನಲ್ಲಿ 155 ರೂ. ಕಟ್ಟಬೇಕು. ಇದಾದ ಬಳಿಕ ಕಣಮಿಣಕಿ ಟೋಲ್‌ನಲ್ಲಿ 165 ರೂ. ಅನ್ನು ಪಾವತಿ ಮಾಡಬೇಕಾಗಿದೆ. ಏಕಮುಖ ಸಂಚಾರಕ್ಕೆ 320 ರೂ. ಟೋಲ್ ದರ ಇರುತ್ತದೆ. ಒಂದು ವೇಳೆ ಫಾಸ್ಟ್ ಟ್ಯಾಗ್ ಇಲ್ಲವೆಂದರೆ ಈ ಹಣ ದುಪ್ಪಟ್ಟು ಆಗಲಿದೆ. ಮಂಡ್ಯದಿಂದ ಬೆಂಗಳೂರಿಗೆ ಕಾರಿನಲ್ಲಿ ಹೋಗುವವರಿಗೆ ಏಕಮುಖ ಸಂಚಾರಕ್ಕೆ 165 ರೂ. ವೆಚ್ಚ ತಗುಲಲಿದ್ದು, ಮಂಡ್ಯದಿಂದ ಮೈಸೂರಿಗೆ ಹೋದರೆ 155 ರೂ. ಟೋಲ್ ಹಣ ಕಟ್ಟಬೇಕಾಗುತ್ತದೆ.

ಎಕ್ಸ್‌ಪ್ರೆಸ್ ವೇಯಲ್ಲಿ ಭಾರೀ ಲೋಪವಾಗಿದೆ

ನನಗೂ ಅನುಭವ ಇಲ್ಲದ ಕಾರಣ ಈ ಲೋಪ ಗೊತ್ತಾಗಲಿಲ್ಲ ಎಂದು ಸ್ಪಷ್ಟಪಡಿಸಿದರು. ನಿಮಗೇನೋ ಅನುಭವ ಇಲ್ಲ ಸರಿ, ಆದರೆ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ತಜ್ಞ ಅಧಿಕಾರಿಗಳಿಗೆ ಅನುಭವ ಇರಲಿಲ್ಲವೆ ಎಂಬ ಪ್ರಶ್ನೆಗೆ ಪ್ರತಾಪ್ ಸಿಂಹ ಸ್ಪಷ್ಟ ಉತ್ತರ ನೀಡಲಿಲ್ಲ. ಎಕ್ಸ್‌ಪ್ರೆಸ್ ವೇನಲ್ಲಿ ಸಾಕಷ್ಟು ಲೋಪವಿರುವುದು ನಿಜ. ಆದರೆ ಎಕ್ಸ್‌ಪ್ರೆಸ್ ಹೈವೆ ಯೋಜನೆ ಅವೈಜ್ಞಾನಿಕವಾಗಿಲ್ಲ ಎಂದು ಮತ್ತೆ ಸಮರ್ಥಿಸಿಕೊಂಡರು.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆನಲ್ಲಿ ಪೆಟ್ರೋಲ್ ಬಂಕ್, ವಿಶ್ರಾಂತಿ ಕೊಠಡಿ ಸೇರಿದಂತೆ ಹಲವು ಸೌಲಭ್ಯ ಕಲ್ಪಿಸಲು 480 ಕೋಟಿ ರೂಪಾಯಿ ಯೋಜನೆ ರೂಪಿಸಲಾಗಿದೆ. ಮೈಸೂರಿನ ಮಣಿಪಾಲ್ ಆಸ್ಪತ್ರೆ ಜಂಕ್ಷನ್ ಬಳಿ ಫ್ಲೈ ಓವರ್, ಅಂಡರ್ ಪಾಸ್ ಸೇರಿದಂತೆ ಹಲವು ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು. ಇದಕ್ಕಾಗಿ ಭೂ ಸ್ವಾಧೀನ ಪ್ರಕ್ರಿಯೆ ಆರಂಭಿಸಲಾಗಿದೆ. ಈ ಯೋಜನೆ ಪಕ್ಕಾ ಆಗಲು ಕನಿಷ್ಠ ಇನ್ನೂ ಹತ್ತು ತಿಂಗಳ ಅವಶ್ಯಕತೆ ಇದೆ ಎಂದು ಪ್ರತಾಪ್ ಸಿಂಹ ಹೇಳಿದರು.

ಕಾಸಿಗಾಗಿ ಪೋಸ್ಟಿಂಗ್ ದಂಧೆ

ಎಂದು ಹ್ಯಾಷ್ ಟ್ಯಾಗ್ ಮಾಡಿದ್ದಾರೆ.ಸ್ವತಃ ಮುಖ್ಯಮಂತ್ರಿ ಕಚೇರಿಯಲ್ಲೇ ವರ್ಗಾವರ್ಗಿ ದಂಧೆಗೆ ಹುಂಡಿ ಇದೆ ಎನ್ನುವುದು ಇಲ್ಲಿ ದಾಖಲೆ ಸಮೇತ ಬಟಾಬಯಲಾಗಿದೆ. ಒಂದೇ ಹುದ್ದೆಗೆ ಸ್ವತಃ ಮುಖ್ಯಮಂತ್ರಿ ಅವರೇ ನಾಲ್ವರಿಗೆ ಶಿಫಾರಸು ಪತ್ರ ಕೊಟ್ಟಿದ್ದಾರೆ. ಸಿಎಂ ಕಚೇರಿಯಲ್ಲಿ ಏನೇನು ನಡೆಯುತ್ತಿದೆ CMO ಅಂದರೆ CM of Karnatakaವೋ ಅಥವಾ Corruption of Karnatakaವೋ ಎಂದು ಮಾಜಿ ಮುಖ್ಯಮಂತ್ರಿ ಅವರು ಪ್ರಶ್ನೆ ಮಾಡಿದ್ದಾರೆ.

62 ಕಡೆ ಲೋಕಾಯುಕ್ತ ದಾಳಿ; ಕೋಟ್ಯಾಂತರ ನಗದು, ಚಿನ್ನಾಭರಣ, ಅಕ್ರಮ ಆಸ್ತಿ ಪತ್ತೆ

ಬೆಂಗಳೂರು, ಜೂ.28– ಕರ್ನಾಟಕ ರಾಜ್ಯದಾದ್ಯಂತ ಲೋಕಾಯುಕ್ತ ಅಧಿಕಾರಿಗಳು ಬುಧವಾರ ಭರ್ಜರಿ ಬೇಟೆಯಾಡಿದ್ದು, ಭ್ರಷ್ಟ ಕುಳಗಳನ್ನು ಬಯಲಿಗೆಳೆದು ಅವರ ಬಳಿ ಇದ್ದ ಅಪಾರ ಸಂಪತ್ತನ್ನು ಪತ್ತೆ ಮಾಡಿದ್ದಾರೆ. ಕಂತೆ ಕಂತೆ ನೋಟು, ಕೆ.ಜಿಗಟ್ಟಲೇ ಬೆಳ್ಳಿ ಬಂಗಾರ, ಐಷಾರಾಮಿ ಕಾರು, ವಿದೇಶಿ ಸ್ವಾಚು, ಆಸ್ತಿ ದಾಖಲೆಗಳ ಪತ್ರಗಳನ್ನು ವಶಪಡಿಸಿಕೊಂಡಿದ್ದಾರೆ. 15 ಮಂದಿ ಲೋಕಾಯುಕ್ತ ಅಧಿಕಾರಿಗಳ ತಂಡ ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ 62ಕ್ಕೂ ಹೆಚ್ಚು ಕಡೆ ಬೃಹತ್ ಬೇಟೆಯನ್ನಾಡಿದೆ. ಬೆಂಗಳೂರಿನ 10 ಕಡೆ ದಾಳಿ ನಡೆಸಲಾಗಿದೆ. ಬೆಂಗಳೂರಿನ ಕೆ.ಆರ್.ಪುರಂ ತಹಶೀಲ್ದಾರ್ ಆಗಿರುವ ಅಜಿತ್ ರೈ ಮನೆ, ಕಚೇರಿ ಸೇರಿ 11 ಕಡೆ ಲೋಕಾಯುಕ್ತ ದಾಳಿ ನಡೆಸಿದ್ದು, ಮನೆಯಲ್ಲಿ 40 ಲಕ್ಷ ನಗದು ಸೇರಿ 1 ಕೋಟಿ 90 ಲಕ್ಷ ಮೌಲ್ಯದ ವಸ್ತುಗಳು, 100 ಎಕರೆಗೂ ಹೆಚ್ಚು ಬೇನಾಮಿ ಆಸ್ತಿ ದಾಖಲೆ ಪತ್ರಗಳು ಪತ್ತೆ ಆಗಿವೆ. ಜತೆಗೆ 4 ಫಾರ್ಚೂನರ್, 4 ಥಾರ್, 1 ಲ್ಯಾಂಡ್ ಕ್ರೂಸರ್ ಪತ್ತೆ ಆಗಿದೆ. **ಜಂಟಿ ನಿರ್ದೇಶಕಿ ಮನೆಯಲ್ಲಿ ಅಕ್ರಮ ಹಣದ 'ಕೃಷಿ':** ಬಾಗಲಕೋಟೆಯಲ್ಲೂ ಲೋಕಾಯುಕ್ತ ಅಧಿಕಾರಿಗಳ ಬೇಟೆ ಜೋರಾಗಿತ್ತು. ಕೃಷಿ ಇಲಾಖೆ ಜಂಟಿ ನಿರ್ದೇಶಕಿ ಚೇತನಾ ಪಾಟೀಲ್ ಮನೆ ಮೇಲೆ ಲೋಕಾ ದಾಳಿ ಮಾಡಿದ್ದು, 32 ಲಕ್ಷ ನಗದು, ಚಿನ್ನಾಭರಣ,



31 ವ್ಯಾನಿಟಿ ಬ್ಯಾಗ್, ಬೆಳ್ಳಿ ಫ್ರೇಮ್ ಇರುವ ಫೋಟೋ, 10ಕ್ಕೂ ಹೆಚ್ಚು ಲಗೇಜ್ ಬ್ಯಾಗ್, ಚಿನ್ನದ ಬಳೆ, ಸರ, ಎರಡು ಆಮೆಗಳು ಪತ್ತೆ ಆಗಿವೆ. ಇಷ್ಟೇ ಅಲ್ಲ ಬೀಳಗಿ ಸಹಾಯಕ ಕೃಷಿ ನಿರ್ದೇಶಕ ಕೃಷ್ಣಾ ಶಿರೂರುಗೆ ಸೇರಿದ 4 ಕಡೆ ದಾಳಿ ಮಾಡಲಾಗಿದ್ದು, 71.88 ಲಕ್ಷ ರೂ. ಮೌಲ್ಯದ ಅಕ್ರಮ ಆಸ್ತಿ ಪತ್ತೆ ಆಗಿದೆ ಎಂದು ಲೋಕಾಯುಕ್ತ ಅಧಿಕಾರಿಗಳು ತಿಳಿಸಿದ್ದಾರೆ. ಚಿಕ್ಕಮಗಳೂರಿನಲ್ಲಿ ಒಟ್ಟು 4 ಕಡೆ ಲೋಕಾಯುಕ್ತ ದಾಳಿ ನಡೆದಿದೆ. ಜಿಲ್ಲಾ ನಿರ್ಮಿತಿ ಕೇಂದ್ರಗಳ ಯೋಜನಾ ವ್ಯವಸ್ಥಾಪಕ ಗಂಗಾಧರ್ ಮನೆ, ಹೋಟೆಲ್, ಪೆಟ್ರೋಲ್ ಬಂಕ್ ಮೇಲೆ ದಾಳಿ ಮಾಡಲಾಗಿದೆ. ಈ ವೇಳೆ ಕೋಟ್ಯಂತರ ಮೌಲ್ಯದ 16 ನಿವೇಶನಗಳು, ಎರಡು ಮನೆಗಳು ದಾಖಲೆ ಪತ್ರ, 1 ರೆಸಾರ್ಟ್, ಚಿನ್ನ ಬೆಳ್ಳಿ ಸಿಕ್ಕಿದೆ. ಒಟ್ಟು 3.76 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆ ಆಗಿದೆ. ತುಮಕೂರಿನಲ್ಲಿ ಕೃಷಿ ಇಲಾಖೆ ಜಂಟಿ ಆಯುಕ್ತ ರವಿ ಎಂಬುವವರ ಮನೆ ಮೇಲೆ ದಾಳಿ ಮಾಡಲಾಗಿದೆ. ರವಿ ಅವರ ತುಮಕೂರು ಹಾಗೂ ರಾಮನಗರದ ಮನೆ ಮೇಲೆ ದಾಳಿ ಮಾಡಿದ್ದು, 4.27 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆ ಆಗಿದೆ. ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ಕುಡಿ ಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಫ್‌ಡಿಎ ಆಗಿರುವ ಅಬ್ದುಲ್ ಬಶೀರ್ ಬಳಿ 14 ಲಕ್ಷ ನಗದು ಸೇರಿ 1.14 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆಯಾಗಿದೆ. 3 ಸ್ಥಳಗಳಲ್ಲಿ ದಾಳಿ ಮಾಡಿದ್ದ ಲೋಕಾಯುಕ್ತ ಅಧಿಕಾರಿಗಳು ಪರಿಶೀಲನೆ ನಡೆಸಿದ್ದರು. ಹೆಸ್ಕಾಂ ಕಾರ್ಯನಿರ್ವಾಹಕ ಇಂಜಿನಿಯರ್ ಶೇಖರ್ ಬಹುರೂಪಿ ಬಳಿ 3 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆಯಾಗಿದೆ. ವಿಜಯನಗರ ಜಿಲ್ಲೆ ಹರಪನಹಳ್ಳಿಯಲ್ಲಿ ಕಾರ್ಯನಿರ್ವಹಿಸ್ತಿರುವ ಶೇಖರ್ ಹನುಮಂತ್ ಬಹುರೂಪಿಗೆ ಸೇರಿದ 4 ಕಡೆ ಲೋಕಾಯುಕ್ತ ದಾಳಿ ನಡೆದಿದೆ. ಕೋಲಾರ, ವಿಜಯಪುರ, ಕಲಬುರಗಿ, ಮಂಗಳೂರು, ಯಾದಗಿರಿ ಸೇರಿದ ಹಲವು ಕಡೆ ಲೋಕಾಯುಕ್ತ ಅಧಿಕಾರಿಗಳು ಮಿಂಚಿನ ಕಾರ್ಯಾಚರಣೆ ಮಾಡಿ, ಅಕ್ರಮ ಆಸ್ತಿ ಗಳಿಸಿದ್ದವರಿಗೆ ಆಘಾತ ನೀಡಿದ್ದಾರೆ.

ಜಿಲ್ಲಾ, ತಾಲೂಕು ಪಂಚಾಯತ್‌ಗಳ ಮರುವಿಂಗಡಣೆ ಪ್ರಕ್ರಿಯೆ

ಸರ್ಕಾರಕ್ಕೆ 10 ವಾರಗಳ ಗಡುವು: ಹೈಕೋರ್ಟ್

ಬೆಂಗಳೂರು,ಜೂ.28–ಜಿಲ್ಲಾ ಪಂಚಾಯತಿ ಮತ್ತು ತಾಲೂಕು ಪಂಚಾಯತಿಗಳಿಗೆ ಮರುವಿಂಗಡನೆ ಮತ್ತು ಮೀಸಲಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ರಾಜ್ಯ ಸರ್ಕಾರಕ್ಕೆ ಕರ್ನಾಟಕ ಹೈಕೋರ್ಟ್ 10 ವಾರಗಳ ಕಾಲಾವಕಾಶ ನೀಡಿದೆ.



ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ ವರಾಳೆ ನೇತೃತ್ವದ ವಿಭಾಗೀಯ ಪೀಠದ ಮುಂದೆ ಬಾಕಿ ಉಳಿದಿರುವ ಅರ್ಜಿಯನ್ನು ಅಡ್ವೋಕೇಟ್ ಜನರಲ್ ಇಂದು ಪ್ರಸ್ತಾಪಿಸಿದರು. ಮರುವಿಂಗಡನೆ ಮತ್ತು ಮೀಸಲಾತಿ ಪಟ್ಟಿಗಳನ್ನು ಮರುಪರಿಶೀಲಿಸಲು ಮತ್ತು ಅಧಿಸೂಚನೆಗಳನ್ನು ಹೊರಡಿಸಲು ಇಂದಿನಿಂದ 10 ವಾರಗಳ ಕಾಲಾವಕಾಶವನ್ನು ಕೋರಿದರು. 10 ವಾರಗಳಲ್ಲಿ ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್‌ಗಳ ಮರುವಿಂಗಡನೆ ಮತ್ತು ಮೀಸಲಾತಿಯ ಅಗತ್ಯ ಅಧಿಸೂಚನೆಗಳನ್ನು ಒದಗಿಸುವಂತೆ ಮತ್ತು ಅನುಸರಣೆ ವರದಿಯನ್ನು ಸಲ್ಲಿಸುವಂತೆ ರಾಜ್ಯಕ್ಕೆ ನಿರ್ದೇಶನ ನೀಡಿದ್ದು, ನಂತರ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿದೆ.

ಇನ್ನು, ಅರ್ಜಿಯ ವಿಚಾರಣೆಯನ್ನು 11 ವಾರಗಳ ನಂತರ ಪಟ್ಟಿ ಮಾಡುವಂತೆ ಸೂಚಿಸಲಾಗಿದೆ. 2021ರ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಕರ್ನಾಟಕದಲ್ಲಿ ಜಿಲ್ಲಾ ಮತ್ತು ತಾಲೂಕು ಪಂಚಾಯ್ತಿ ಚುನಾವಣೆಗೆ SEC ತಯಾರಿ ನಡೆಸಿತ್ತು.

ಈ ಮಧ್ಯೆ ಎಸ್‌ಇಸಿ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸುವ ಮೊದಲು, ರಾಜ್ಯವನ್ನು ಆಳುತ್ತಿದ್ದ ಬಿಜೆಪಿ ಸರ್ಕಾರವು ಕರ್ನಾಟಕ ಪಂಚಾಯತ್ ರಾಜ್ ಮತ್ತು ಗ್ರಾಮ ಸ್ವರಾಜ್ ಕಾಯ್ದೆಗೆ ತಿದ್ದುಪಡಿ ಮಾಡಿತು. ಕ್ಷೇತ್ರಗಳನ್ನು ಮರುವಿಂಗಡನೆ ಮತ್ತು ಮೀಸಲಾತಿ ಪಟ್ಟಿಯನ್ನು ಸಿದ್ಧಪಡಿಸುವ ಆಯೋಗದ ಅಧಿಕಾರವನ್ನು ಹಿಂತೆಗೆದುಕೊಂಡಿತು. ಪ್ರಕ್ರಿಯೆ ನಡೆಸಲು ರಾಜ್ಯವು ಹೊಸ ಸಮಿತಿಯನ್ನು ರಚಿಸಿದೆ.

ಕರ್ತವ್ಯ ಲೋಪ: ಐವರು ವೈದ್ಯಾಧಿಕಾರಿಗಳು ಸೇರಿ 12 ಮಂದಿ ಅಧಿಕಾರಿಗಳ ವಿರುದ್ಧ ಸುಮೋಟೋ ಪ್ರಕರಣ

ಉಪ ಲೋಕಯುಕ್ತ ಫಣೀಂದ್ರ ಕ್ರಮ



ಮೈಸೂರು,ಜೂ.28(ಎಂಕೆ)– ಕರ್ತವ್ಯ ಲೋಪವೆಸಗಿದ ಐವರು ವೈದ್ಯಾಧಿಕಾರಿಗಳು ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಬಾಲಮಂದಿರದ 7 ಮಂದಿ ಅಧಿಕಾರಿಗಳ ವಿರುದ್ಧ ಉಪಲೋಕಾಯುಕ್ತರಾದ ಫಣೀಂದ್ರ ಸುಮೋಟೋ ಪ್ರಕರಣ ದಾಖಲಿಸಿದ್ದಾರೆ.

ಜೂ.17ರಿಂದ 19ರವರೆಗೆ ಮೈಸೂರಿಗೆ ಭೇಟಿ ನೀಡಿದ್ದ ಉಪಲೋಕಾಯುಕ್ತರು, ಕೆಆರ್.ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ ಹಾಗೂ ಹೆಣ್ಣು ಮಕ್ಕಳ ಬಾಲಮಂದಿರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಕೆ.ಆರ್ ಹಾಗೂ ಚೆಲುವಾಂಬ ಆಸ್ಪತ್ರೆ ಆವರಣದಲ್ಲಿ ಅಶುಚಿತ್ವ, ಆಸ್ಪತ್ರೆ ಆವರಣದಲ್ಲಿ ಖಾಸಗಿ ವಾಹನಗಳ ಪಾರ್ಕಿಂಗ್, ಚಿಕಿತ್ಸೆಯಲ್ಲಿ ಲೋಪ, ರೋಗಿಗಳಿಂದ ಹಣ ವಸೂಲಿ ಸೇರಿದಂತೆ ಇನ್ನಿತರೆ ಕರ್ತವ್ಯ ಲೋಪ ಹಿನ್ನೆಲೆ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪ್ರಸಾದ್, ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ನಂಜುಂಡಸ್ವಾಮಿ, ಪ್ರಾದೇಶಿಕ ವೈದ್ಯಾಧಿಕಾರಿ ಡಾ.ರಾಜೇಶ್‌ಕುಮಾರ್, ಚೆಲುವಾಂಬ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ರಾಜೇಂದ್ರ ಕುಮಾರ್ ಹಾಗೂ ಪ್ರಾದೇಶಿಕ ವೈದ್ಯಾಧಿಕಾರಿ ಡಾ.ಶಿವರಾಮಕೃಷ್ಣ ಅವರ ವಿರುದ್ಧ ಸುಮೋಟೋ ಪ್ರಕರಣ ದಾಖಲಿಸಲಾಗಿದೆ. ಹಾಗೆಯೇ ಹೆಣ್ಣು ಮಕ್ಕಳ ಬಾಲಮಂದಿರಕ್ಕೆ ಜೂ.18ರಂದು ಭೇಟಿ ಪರಿಶೀಲನೆ ನಡೆಸಿದ ಅವರು, ಗುಣಮಟ್ಟದ ಆಹಾರ ಪೂರೈಕೆ ಇಲ್ಲದಿರು ವುದು, ಕಳ್ಳತನ, ಮಕ್ಕಳಿಗೆ ಶಿಕ್ಷಣ ಕೊಡಿ ಸುವಲ್ಲಿ ವಿಫಲ ಸೇರಿದಂತೆ ಹಲವು ಲೋಪ ದೋಷಗಳನ್ನು ಪರಿಗಣಿಸಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಬಸವರಾಜ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಯೋಗೇಶ್, ಹೆಣ್ಣು ಮಕ್ಕಳ ಬಾಲಮಂದಿರದ ಸೂಪರಿಟೆಂಡೆಂಟ್ ಶಾರದಾದೇವಿ, ರಕ್ಷಣಾ ಅಧಿಕಾರಿಗಳಾದ ಲತಾ, ಜಯಂತಿ, ಗಂಡು ಮಕ್ಕಳ ಬಾಲ ಮಂದಿರದ ಸೂಪರಿಟೆಂಡೆಂಟ್‌ಗಳಾದ ಗುರುಮೂರ್ತಿ, ಮೋಹನ್ ವಿರುದ್ಧ ಸುಮೋಟೊ ಪ್ರಕರಣ ದಾಖಲಿಸಿದ್ದಾರೆ.

ಸಿಎಂ ಸಿದ್ದರಾಮಯ್ಯಗೆ ಮೂರು ಸಂಪುಟ ಉಪ ಸಮಿತಿಗಳಿಗೆ ಸದಸ್ಯರ ನೇಮಕ ಅಧಿಕಾರ

ಬೆಂಗಳೂರು,ಜೂ.28–ನೀರಾವರಿ ಯೋಜನೆಗಳು, ಕ್ರಿಮಿನಲ್ ಪ್ರಕರಣಗಳ ಹಿಂಪಡೆಯುವಿಕೆ ಮತ್ತು ರಾಜ್ಯದಲ್ಲಿ ಹೂಡಿಕೆಗೆ ಒತ್ತು ನೀಡುವ ಮೂರು ಕ್ಷೇತ್ರಗಳನ್ನು ನಿಭಾಯಿಸಲು ಮೂರು ಸಂಪುಟ ಉಪ ಸಮಿತಿಗಳನ್ನು ರಚಿಸುವ ಮತ್ತು ಅದಕ್ಕೆ ಸದಸ್ಯರನ್ನು ನೇಮಕ ಮಾಡುವ ಅಧಿಕಾರವನ್ನು ಬುಧವಾರ ನಡೆದ ಸಚಿವ ಸಂಪುಟ ಸಭೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವಹಿಸಿದೆ. ಸಚಿವ ಸಂಪುಟ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌ಕೆ ಪಾಟೀಲ್ ಅವರು, ಕೃಷ್ಣಾ ನದಿ, ಕಾವೇರಿ, ಮಹದಾಯಿ ಮತ್ತಿತರ ನದಿಗಳ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಉಪ ಸಮಿತಿಯೊಂದನ್ನು ರಚಿಸಲಾಗಿದೆ ಎಂದರು. ಈ ಉಪ ಸಮಿತಿಯು ನದಿ ಯೋಜನೆಗಳಿಗೆ ಸಂಬಂಧಿಸಿದ ವಿವಿಧ ನ್ಯಾಯಾಲಯ ಮತ್ತು ನ್ಯಾಯಾಧಿಕರಣದ ಆದೇಶಗಳ ಅನುಷ್ಠಾನದ ಬಗ್ಗೆಯೂ ಪರಿಶೀಲಿಸುತ್ತದೆ. ಸಂಪುಟ ಉಪ ಸಮಿತಿಗಳಿಗೆ ಸದಸ್ಯರನ್ನು ನೇಮಕ ಮಾಡುವ ಅಧಿಕಾರವನ್ನು ಮುಖ್ಯಮಂತ್ರಿಗಳಿಗೆ ನೀಡಲಾಗಿದೆ ಎಂದು ತಿಳಿಸಿದರು. ಎಸ್‌ಸಿ/ಎಸ್‌ಟಿ ಗುತ್ತಿಗೆ ದಾರರ ಟೆಂಡರ್ ಮೊತ್ತವನ್ನು 50 ಲಕ್ಷದಿಂದ ಒಂದು ಕೋಟಿಗೆ ಹೆಚ್ಚಿಸಲು ಸಚಿವ ಸಂಪುಟ ಸಭೆ ನಿರ್ಧರಿಸಿದೆ. ಈ ನಿಟ್ಟಿನಲ್ಲಿ ಜುಲೈ 3ರಿಂದ ಆರಂಭವಾಗಲಿರುವ ಮುಂಬರುವ ವಿಧಾನಮಂಡಲ ಅಧಿವೇಶನದಲ್ಲಿ ಸಾರ್ವಜನಿಕ ಖರೀದಿಗೆ ಸಂಬಂಧಿಸಿದ ಕರ್ನಾಟಕ ಪಾರದರ್ಶಕ ಕಾಯಿದೆಗೆ ತಿದ್ದುಪಡಿ ತರಲಾಗುವುದು ಎಂದು ಎಚ್ ಕೆ ಪಾಟೀಲ್ ತಿಳಿಸಿದ್ದಾರೆ.

ಜು.13ಕ್ಕೆ ಚಂದ್ರಯಾನ-3 ಉಡ್ಡಯನ: ಇಸ್ರೋ

ನವದೆಹಲಿ, ಜೂ.28– ಜು.13ರಂದು ಮಧ್ಯಾಹ್ನ 2:30ಕ್ಕೆ ಚಂದ್ರಯಾನ–3 ಉಡಾವಣೆಯಾಗಲಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಸ್ಥೆ (ಇಸ್ರೋ) ಘೋಷಿಸಿದೆ. ಚಂದ್ರನ ಕಕ್ಷೆಗೆ ಕಳಿಸಲಾಗುತ್ತಿರುವ 3ನೇ ನೌಕೆ ಇದಾಗಿದ್ದು, 2019 ರಲ್ಲಿ ಚಂದ್ರಯಾನ–2 ಉಡಾವಣೆಯಾಗಿತ್ತು. ಕಳೆದ ಮಿಷನ್ ನಲ್ಲಿ ವಿಕ್ರಮ್ ಲ್ಯಾಂಡರ್ ಚಂದ್ರನ ಮೇಲ್ಮೈನ್ನು ಸುಗಮವಾಗಿ ಸ್ಪರ್ಶಿಸಲು ಸಾಧ್ಯವಾಗಿರಲಿಲ್ಲ. ಚಂದ್ರಯಾನ–3 ಯಶಸ್ವಿಯಾಗಲಿದೆ ಎಂಬ ವಿಶ್ವಾಸ ಇಸ್ರೋ ಅಧಿಕಾರಿಗಳಿದ್ದು, ಈ ಬಾರಿಯ ಪ್ರಯೋಗದ ಬಗ್ಗೆ ನಿರೀಕ್ಷೆಗಳು ಗರಿಗೆದರಿವೆ.

ಉಡಾವಣೆಯಲ್ಲಿ ಯಾವುದೇ ತೊಂದರೆಯಾಗದಂತೆ ಚಂದ್ರಯಾನ–3 ರ ಹಾರ್ಡ್‌ವೇರ್, ರಚನೆ, ಕಂಪ್ಯೂಟರ್, ಸಾಫ್ಟ್‌ವೇರ್ ಮತ್ತು ಸಂವೇದಕಗಳನ್ನು ಸುಧಾರಿಸಲಾಗಿದೆ. ವಾಹನಕ್ಕೆ ಹೆಚ್ಚಿನ ಇಂಧನವನ್ನು ಸೇರಿಸಲಾಗಿದೆ, ಲ್ಯಾಂಡಿಂಗ್ ಕಾಲುಗಳನ್ನು ಬಲಪಡಿಸಲಾಗಿದೆ ಎಂದು ಏಳು ಹೇಳಿದರು. ಹೆಚ್ಚಿನ ಶಕ್ತಿ ಉತ್ಪಾದನೆಗಾಗಿ ದೊಡ್ಡ ಸೌರ ಫಲಕಗಳನ್ನು ಅಳವಡಿಸಲಾಗಿದೆ. ಮತ್ತೊಂದು ಹೆಚ್ಚುವರಿ ಸಂವೇದಕವನ್ನು ಸಹ ಸೇರಿಸಲಾಗಿದೆ ಎಂದು ಇಸ್ರೋ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಎಲ್ಲಾ ಇಲಾಖೆಗಳು, ನಿಗಮಗಳ ಕಾಮಗಾರಿ ಬಿಲ್ ತಡೆ ವಾಪಸ್

ಬೆಂಗಳೂರು,ಜೂ.28–ಎಲ್ಲಾ ಇಲಾಖೆಗಳು, ನಿಗಮಗಳ ಕಾಮಗಾರಿ ಬಿಲ್ ಬಿಡುಗಡೆ ಮಾಡುವಂತೆ ಸರ್ಕಾರದಿಂದ ಸುತ್ತೋಲೆ ಹೊರಡಿಸಲಾಗಿದೆ. ಆ ಮೂಲಕ ಗುತ್ತಿಗೆದಾರರ ಒತ್ತಡಕ್ಕೆ ರಾಜ್ಯ ಸರ್ಕಾರ ಕೊನೆಗೂ ಮಣಿದಿದೆ. ಎಲ್ಲಾ ಇಲಾಖೆ ಗಳು, ಅಧೀನಕ್ಕೊಳಪಡುವ ಕಾಮಗಾರಿ ಬಿಲ್ ಪಾವತಿ, ನೈಜತೆ, ನಿಯಮಾನುಸಾರ ಇದೆಯಾ ಎಂದು ಖಾತ್ರಿಪಡಿಸಿಕೊಂಡು ಸಂಬಂಧಿಸಿದ ಇಲಾಖಾ ಸಚಿವರ ಅನುಮೋದನೆ ಪಡೆದು ಹಣ ಬಿಡುಗಡೆ ಮಾಡುವಂತೆ ಆರ್ಥಿಕ ಇಲಾಖೆ ಕಾರ್ಯದರ್ಶಿ ಡಾ.ಏಕ್‌ರೂಪ್ ಕೌರ್‌ರಿಂದ ಸುತ್ತೋಲೆ ಹೊರಡಿಸಲಾಗಿದೆ. ಎಲ್ಲಾ ಇಲಾಖೆಗಳು ಹಾಗೂ ಇಲಾಖೆಗಳ ಅಧೀನಕ್ಕೊಳಪಡುವ ನಿಗಮ, ಮಂಡಳಿ, ಪ್ರಾಧಿಕಾರಗಳ ಮುಂದುವರೆದ ಕಾಮಗಾರಿಗಳಿಗೆ ಸಂಬಂಧಿಸಿದಂತ ಬಿಲ್ಲುಗಳ ನೈಜತೆಯನ್ನು ಹಾಗೂ ನಿಯಮಾನುಸಾರವಿರುವುದನ್ನು ಖಾತ್ರಿಪಡಿಸಿಕೊಂಡು ಸಂಬಂಧಪಟ್ಟ ಇಲಾಖಾ ಸಚಿವರ ಅನುಮೋದನೆ ಪಡೆದು ಹಣ ಬಿಡುಗಡೆ ಮಾಡುವುದು. ಎಲ್ಲಾ ಶಾಸನಬದ್ಧ ಪಾವತಿಗಳನ್ನು ಹಾಗೂ ಬಾಹ್ಯ ನೆರವಿನ ಮುಂದುವರೆದ ಯೋಜನಗಳಿಗೆ ಸಂಬಂಧಿಸಿದಂತ ಹಣ ಬಿಡುಗಡೆ ಮಾಡುವುದು. ಮುಂದುವರಿದ ಕಾರ್ಯಕ್ರಮ, ಸರಕು–ಸೇವೆಗಳ ಸಂಗ್ರಹಣೆಗಳ ಸಂಬಂಧ ಹಣ ಬಿಡುಗಡೆ ಮಾಡಬಹುದಾಗಿದೆ.

ಹಾಸ್ಟೆಲ್‌ಗಳಲ್ಲಿ ಗುಣಮಟ್ಟದ ಆಹಾರ, ಶಿಕ್ಷಣ ಕಲ್ಪಿಸುವಂತೆ ಜಿಪಂ ಸಿಇಓ ಸೂಚನೆ



ಮೈಸೂರು, ಜೂ.28(ಎಂಕೆ)– ಹಾಸ್ಟೆಲ್‌ಗಳಲ್ಲಿ ಹಾಗೂ ವಸತಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಮತ್ತು ಆಹಾರ ನೀಡುವಂತೆ ಜಿಪಂ ಸಿಇಓ ಕೆ.ಎಂ.ಗಾಯತ್ರಿ ಸೂಚಿಸಿದರು.

ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಹಾಸ್ಟೆಲ್ ಹಾಗೂ ವಸತಿ ಶಾಲೆಗಳ ನಿಲಯ ಪಾಲಕರ ಸಭೆ ನಡೆಸಿದ ಅವರು, ಹಾಸ್ಟೆಲ್ ಹಾಗೂ ವಸತಿ ಶಾಲೆಗಳಲ್ಲಿ ಕೇವಲ ಊಟ ನೀಡುವುದರ ಕಡೆಗೆ ಮಾತ್ರ ಗಮನ ನೀಡದೆ ಮಕ್ಕಳ ಬೌದ್ಧಿಕ ಮತ್ತು ಸಾಂಸ್ಕೃತಿಕ ಸಾಮರ್ಥ್ಯವನ್ನು ಹೆಚ್ಚು ಮಾಡುವಂತೆ ಹಲವು ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಉತ್ತಮ ಗುಣಮಟ್ಟದ ಶಿಕ್ಷಣ ಮತ್ತು ಆಹಾರ ಒದಗಿಸುವುದರ ಜೊತೆಗೆ ಮಕ್ಕಳನ್ನು ಎಲ್ಲಾ ರೀತಿಯಲ್ಲೂ ಪ್ರೋತ್ಸಾಹಿಸುವಂತೆ ಸಲಹೆ ನೀಡಿದರು.

ಮೆಟ್ರಿಕ್ ನಂತರದ ಕಾಲೇಜು ವಿದ್ಯಾರ್ಥಿ ನಿಲಯಗಳಲ್ಲಿ ಮೊಬೈಲ್ ಬಳಸುವುದನ್ನು ಕಡಿಮೆ ಮಾಡುವ ದೃಷ್ಟಿಯಿಂದ ಮೊಬೈಲ್ ಜಾಮರ್ ಅಳವಡಿಸಿಕೊಳ್ಳುವಂತೆ ಕೇಳಿದ ವಾರ್ಡನ್ ಒಬ್ಬರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಈ ರೀತಿ ಯಾಂತ್ರಿಕವಾಗಿ ಮಕ್ಕಳನ್ನು ಮೊಬೈಲ್‌ನಿಂದ ದೂರ ಇಡುವ ಬದಲು ಪ್ರತಿದಿನ ವಿದ್ಯಾರ್ಥಿಗಳೊಂದಿಗೆ ಪ್ರೀತಿಯಿಂದ ಮಾತನಾಡುತ್ತಾ ವಾರಕ್ಕೊಮ್ಮೆ, 15 ದಿನಗಳಿಗೊಮ್ಮೆ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ಸಭೆ ನಡೆಸಿ ಉಪನ್ಯಾಸ ನೀಡುವ ಮೂಲಕ ಮೊಬೈಲ್ ದುಶ್ಚಟದಿಂದ ದೂರ ಇರುವಂತೆ ಮಾಡಬೇಕು ಎಂದು ಸಲಹೆ ನೀಡಿದರು.

ಮುಂದಿನ ತಿಂಗಳಿನಿಂದ ಜಿಲ್ಲೆಯ ಬಹಳಷ್ಟು ಹಾಸ್ಟೆಲ್‌ಗಳಿಗೆ ಭೇಟಿ ನೀಡುವ ಕಾರ್ಯಕ್ರಮವಿರುವುದರಿಂದ ಈಗಿನಿಂದಲೇ ಎಲ್ಲಾ ವಿದ್ಯಾರ್ಥಿ ನಿಲಯಗಳಲ್ಲಿ ಉತ್ತಮ ಗುಣಮಟ್ಟದ ಮೂಲ ಸೌಕರ್ಯ ಒದಗಿಸುವ ಕಡೆ ಗಮನಹರಿಸಿ ಹೆಚ್ಚುವರಿ ಸೌಲಭ್ಯಕ್ಕಾಗಿ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದರು.

ಜ್ಞಾನ ಕೇಂದ್ರಗಳಾಗಬೇಕು: ಸಭೆಯಲ್ಲಿ ಭಾಗವಹಿಸಿದ್ದ ಸಿಎಫ್‌ಟಿಆರ್‌ಐ ನಿವೃತ್ತ ವಿಜ್ಞಾನಿ ಕೊಳ್ಳೇಗಾಲ ಶರ್ಮಾ ಮಾತನಾಡಿ, ವಿದ್ಯಾರ್ಥಿ ನಿಲಯಗಳು ಕೇವಲ ಊಟ ನೀಡುವ ಕೇಂದ್ರಗಳಾಗದೆ ಬೌದ್ಧಿಕ ಜ್ಞಾನ ಕೇಂದ್ರಗಳಾಗಬೇಕು. ಪ್ರತಿ ವಿದ್ಯಾರ್ಥಿ ನಿಲಯಕ್ಕೂ ಒಂದೊಂದು ವಾರ್ಷಿಕ ಕ್ರಿಯಾ ಯೋಜನೆ ತಯಾರಿಸಿ ಒಂದು ವಾರದೊಳಗೆ ಸಲ್ಲಿಸುವಂತೆ ಸೂಚಿಸಿದರಲ್ಲದೆ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯ ಜೊತೆಗೆ ಅವರ ಪರೀಕ್ಷಾ ಫಲಿತಾಂಶ ಉತ್ತಮ ಪಡಿಸುವ ಕಡೆ ಗಮನಹರಿಸಬೇಕೆಂದು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ, ಜಿಲ್ಲೆಯ ಎಲ್ಲಾ ತಾಲೂಕಿನ ಸಹಾಯಕ ನಿರ್ದೇಶಕರು, ಜಿಲ್ಲಾ ಸಮನ್ವಯ ಅಧಿಕಾರಿ ಹೇಮಕುಮಾರ್ ಮತ್ತಿತರರಿದ್ದರು.

ಬನವಾಸಿ ತೋಟದ ಮಾವಿನ ಹಣ್ಣಿಗೆ ಭಾರೀ ಬೇಡಿಕೆ

ಮೈಸೂರು, ಜೂ.28(ಎಂಕೆ)– ಬನವಾಸಿ ತೋಟದಲ್ಲಿ ಬೆಳೆದಿರುವ ಮಾವಿನ ಹಣ್ಣುಗಳ ಸಂತೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮೈಸೂರು ಕುವೆಂಪುನಗರದಲ್ಲಿರುವ ರಾಘವೇಂದ್ರಸ್ವಾಮಿ ಮಠದ ಹತ್ತಿರ(ದ.ರಾ.ಬೇಂದ್ರೆ ವೃತ್ತ) ಬುಧವಾರ ನಡೆದ ಸಂತೆಯಲ್ಲಿ ರಾಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕಗಳನ್ನು ಬಳಸದೆ ಬೆಳೆದಿರುವ ವಿವಿಧ ಬಗೆಯ ಮಾವಿನ ಹಣ್ಣುಗಳಿಗೆ ಭಾರೀ ಬೇಡಿಕೆ ಇತ್ತು ಹಾಗೆಯೇ ನಿಂಬೆಹಣ್ಣು, ಸ್ಟಾರ್ ಫ್ರೂಟ್ಸ್, ಏಲಕ್ಕಿ ಬಾಳೆಹಣ್ಣು, ಬೂದು ಬಾಳೆ, ಪಲಾವ್ ಎಲೆ ಹಾಗೂ ವಿವಿಧ ತಿಂಡಿ–ತಿನಿಸುಗಳನ್ನು ಮಾರಾಟ ಮಾಡಲಾಯಿತು.



ರೈಲ್ವೆ ಪ್ರಯಾಣ ದರ ಇಳಿಸಲು ಒತ್ತಾಯಿಸಿ ಸಿಪಿಐ ಪ್ರತಿಭಟನೆ

ಮೈಸೂರು,ಜೂ.28(ಪಿಎಂ)–ರೈಲ್ವೆ ಪ್ರಯಾಣ ದರ, ಪ್ಲಾಟ್‌ಫಾರಂ ಟಿಕೆಟ್ ದರ ಹಾಗೂ ವಾಹನ ನಿಲುಗಡೆ ದರ ಇಳಿಸಬೇಕೆಂದು ಒತ್ತಾಯಿಸಿ ಭಾರತ ಕಮ್ಯುನಿಸ್ಟ್ ಪಕ್ಷದ (ಸಿಪಿಐ) ಮೈಸೂರು ಜಿಲ್ಲಾ ಮಂಡಳಿ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.



ಮೈಸೂರು ರೈಲ್ವೆ ನಿಲ್ದಾಣದ ಎದುರಿನ ವೃತ್ತದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ರೈಲ್ವೆ ನಿಲ್ದಾಣದ ಎದುರಿನ ವೃತ್ತದಲ್ಲಿ (ಬಾಬು ಜಗಜೀವನರಾಂ ವೃತ್ತ) ಜಮಾಯಿಸಿದ ಪ್ರತಿಭಟನಾಕಾರರು, ರೈಲ್ವೆ ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಕೇಂದ್ರ ಸರ್ಕಾರ ದೇಶದಾದ್ಯಂತ ರೈಲ್ವೆ ಸಂಚಾರ ರದ್ದುಪಡಿಸಿತ್ತು. ಲಾಕ್‌ಡೌನ್ ತೆರವಾದ ನಂತರ ಹಂತ ಹಂತವಾಗಿ ರೈಲು ಪ್ರಯಾಣವನ್ನು ವಿಶೇಷ ರೈಲುಗಳ ಹೆಸರಿನಲ್ಲಿ ಮರು ಪ್ರಾರಂಭಿಸಿತು. ಈ ವೇಳೆ ನೈರುತ್ಯ ರೈಲ್ವೆ ಮೈಸೂರು ವಿಭಾಗದಿಂದ ಮೈಸೂರು–ಬೆಂಗಳೂರು, ಮೈಸೂರು ಅರಸೀಕೆರೆ ಮತ್ತು ಮೈಸೂರು–ಚಾಮರಾಜನಗರ ನಡುವೆ ಸಂಚರಿಸುವ ಪ್ಯಾಸೆಂಜರ್ ರೈಲುಗಳನ್ನು ವಿಶೇಷ ರೈಲುಗಳೆಂದು ಹೆಸರಿಸಿ, ಇವುಗಳ ಟಿಕೆಟ್ ದರ ಹೆಚ್ಚಿಸಲಾಯಿತು. ಕೋವಿಡ್ ಲಾಕ್‌ಡೌನ್ ಪೂರ್ವದಲ್ಲಿ ಇದ್ದ ಪ್ರಯಾಣ ದರವನ್ನು ಮರು ಜಾರಿ ಮಾಡಬೇಕು ಎಂದು ಒತ್ತಾಯಿಸಿದರು.

ಪ್ಯಾಸೆಂಜರ್ ರೈಲುಗಳಲ್ಲಿ ಪ್ರಯಾಣ ದರ ಹೆಚ್ಚಿಸಿದ ಕಾರಣ ದಿನಗೂಲಿಗಾಗಿ ಹಳ್ಳಿಗಳಿಂದ ಮೈಸೂರು ನಗರಕ್ಕೆ ಬರುವ ಕೂಲಿ ಕಾರ್ಮಿಕರು ತಾವು ಗಳಿಸಿದ ಕೂಲಿಯಲ್ಲಿ ಸಾಕಷ್ಟು ಹಣವನ್ನು ಪ್ರಯಾಣಕ್ಕೆ ವಿನಿಯೋಗಿಸಿ ಸಂಕಷ್ಟು ಎದುರಿಸುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಲ್ಲದೆ, ಮೈಸೂರು–ಬೆಂಗಳೂರು ನಡುವೆ ಸಂಚರಿಸುವ ಮಾಲ್ಗುಡಿ ಎಕ್ಸ್‌ಪ್ರೆಸ್ ರೈಲನ್ನು ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ಎಂದು ಹೆಸರಿಸಿ ಹೆಚ್ಚಿನ ಪ್ರಯಾಣ ದರ ವಿಧಿಸಿ ಹಗಲು ದರೋಡೆ ಮಾಡಲಾಗುತ್ತಿದೆ. ಈ ರೈಲಿನ ದರವನ್ನು 65 ರೂ. ನಿಗದಿ ಮಾಡಬೇಕು. ಜೊತೆಗೆ ಇದರ ಶುಚಿತ್ವಕ್ಕೆ ಒತ್ತು ನೀಡಬೇಕು. ಪ್ರಯಾಣ ದರಕ್ಕಿಂತಲೂ ಪ್ಲಾಟ್‌ಫಾರಂ ಟಿಕೆಟ್ ದರವೇ ದುಬಾರಿಯಾಗಿದ್ದು, ಇದು ನ್ಯಾಯಸಮ್ಮತವಲ್ಲ. ಇದನ್ನು 5 ರೂ.ಗೆ ನಿಗದಿಪಡಿಸಬೇಕು ಎಂದು ಒತ್ತಾಯಿಸಿದರು.

ಮೈಸೂರು ರೈಲು ನಿಲ್ದಾಣದಲ್ಲಿ ವಾಹನ ನಿಲುಗಡೆಗೆ ಅವೈಜ್ಞಾನಿಕ ದರ ನಿಗದಿಪಡಿಸಿ, ಸುಲಿಗೆ ಮಾಡಲಾಗುತ್ತಿದೆ. ದ್ವಿಚಕ್ರ ವಾಹನಕ್ಕೆ 10 ರೂ., ನಾಲ್ಕು ಚಕ್ರದ ವಾಹನಕ್ಕೆ 20 ರೂ. ನಿಗದಿಪಡಿಸಬೇಕು. ಹಿರಿಯ ನಾಗರಿಕರು ಹಾಗೂ ಕಲಾವಿದರಿಗೆ ನೀಡುತ್ತಿದ್ದ ರಿಯಾಯಿತಿಯನ್ನು ಮರು ಜಾರಿಗೊಳಿಸಬೇಕು. ಸಾರ್ವಜನಿಕ ಪಾಸ್ ವಿತರಣೆಯ ಅಂತರದ ಮಿತಿಯನ್ನು 150 ಕಿ.ಮೀ.ನಿಂದ 250 ಕಿ.ಮೀ.ಗೆ ಹೆಚ್ಚಳ ಮಾಡಬೇಕೆಂದು ಆಗ್ರಹಿಸಿದರು. ಪಕ್ಷದ ಹಿರಿಯ ಮುಖಂಡ ಹೆಚ್.ಆರ್.ಶೇಷಾದ್ರಿ, ಜಿಲ್ಲಾ ಕಾರ್ಯದರ್ಶಿ ಹೆಚ್.ಬಿ.ರಾಮಕೃಷ್ಣ, ಸಹಕಾರ್ಯದರ್ಶಿಗಳಾದ ಸೋಮರಾಜೇಅರಸ್, ಕೆ.ಎಸ್.ರೇವಣ್ಣ, ಡಿ.ಜಗನ್ನಾಥ್, ಎಂ.ಶಿವಣ್ಣ, ಎಂ.ಜಿ.ಪ್ರಸಾದ್, ರಾಮು, ಬಸವರಾಜು, ಕೃಷ್ಣ, ಮುರುಗನ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕೇಂದ್ರೀಕೃತ ಸರ್ಕಾರ ತಿರಸ್ಕರಿಸಿ, ದುಡಿಯುವ ಸರ್ಕಾರ ಅಧಿಕಾರಕ್ಕೆ

ಅಭಿನಂದನಾ ಕಾರ್ಯಕ್ರಮದಲ್ಲಿ ಪ್ರಗತಿಪರ ಚಿಂತಕ ಡಾ.ಎಸ್.ತುಕಾರಾಂ ಅಭಿಪ್ರಾಯ

ಹೆಚ್.ಡಿ.ಕೋಟೆ, ಜೂ.28– ಜನರಿಗೋಸ್ಕರ ದುಡಿಯುವಂತಹ ಸರ್ಕಾರವನ್ನು ಅಧಿಕಾರಕ್ಕೆ ತರುವ ಮೂಲಕ ಮತದಾರರು ಕೇಂದ್ರೀಕೃತ ಸರ್ಕಾರ‌ವನ್ನು ತಿರಸ್ಕರಿಸಿದ್ದಾರೆ ಎಂದು ಪ್ರಗತಿಪರ ಚಿಂತಕ ಡಾ.ಎಸ್.ತುಕಾರಾಂ ಅಭೀಪ್ರಾಯ ಪಟ್ಟಿದ್ದಾರೆ.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಬುಧವಾರ ದಸಂಸ ಐಕ್ಯ ಹೋರಾಟ ಸಮಿತಿ ವತಿಯಿಂದ ಸಂವಿಧಾನದ ಮತ್ತು ಪ್ರಜಾಪ್ರಭುತ್ವ ಮರುಸ್ಥಾಪನೆಗಾಗಿ ಶ್ರಮಿಸಿದ ದಸಂಸ ಕಾರ್ಯಕರ್ತರಿಗೆ, ಎರಡನೇ ಬಾರಿಗೆ ಶಾಸಕರಾಗಿ ಆಯ್ಕೆಯಾದ ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಹಾಗೂ ಎಸ್ಎಸ್ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ತಳ ಸಮುದಾಯದ ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿದ್ದ ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಪಡೆದ ಶೋಷಿತ ಸಮುದಾಯದ 42 ವಿದ್ಯಾರ್ಥಿಗಳಿಗೆ ಆರ್ಥಿಕ ಪ್ರೋತ್ಸಾಹಧನ ನೀಡಿ ಅಭಿನಂದಿಸಲಾಯಿತು. ಶಾಸಕ ಅನಿಲ್ ಚಿಕ್ಕಮಾದು, ಡಾ.ಎಸ್.ತುಕಾರಾಂ, ಬೆಟ್ಟಯ್ಯ ಕೋಟೆ, ನಿಂಗರಾಜು, ರಾಜಣ್ಣ, ದೊಡ್ಡಸಿದ್ದು ಇದ್ದರು.

ಆಡಳಿತಕ್ಕೆ ಬಂದ ಸರ್ಕಾರವು ಶೋಷಿತರ, ಮಹಿಳೆಯರ, ಆದಿವಾಸಿಗಳ ಹಾಗೂ ವಿದ್ಯಾರ್ಥಿಗಳ ಸಮಸ್ಯೆಗಳಿಗೆ ತೇಪೆ ಹಾಕುವ ಕೆಲಸವನ್ನು ಮಾಡದೆ ಅವರ ಅಭಿವೃದ್ಧಿಗೆ ರಚನಾತ್ಮಕ ಕಾರ್ಯಗಳನ್ನು ರೂಪಿಸಬೇಕು ಎಂದ ಅವರು, ದಲಿತ, ರೈತ ಹಾಗೂ ಮಹಿಳಾ ಚಳವಳಿಗಳು ಸಂವಿಧಾನ ರಕ್ಷಣೆಗಾಗಿ ಕಣ್ಗಾವಲಿನಂತೆ ಕೆಲಸ ಮಾಡಬೇಕು. ಇದು ಚಳವಳಿಗಳ ನೈತಿಕ ಜವಾಬ್ದಾರಿ ಕೂಡ ಆಗಿದೆ ಎಂದರು.

ಹಿಂದಿನ ಸರ್ಕಾರ ಬುದ್ಧ, ಬಸವ, ಅಂಬೇಡ್ಕರ್, ಕನಕದಾಸ, ವಿವೇಕಾನಂದರ ವಿಚಾರಧಾರೆಗಳನ್ನು ಮೂಲೆಗುಂಪು ಮಾಡಿ ಅಧಿಕಾರ ನಡೆಸಿತು. ಆದರೆ ಈಗಿನ ಸರ್ಕಾರ ಅವರ ವಿಚಾರಧಾರೆಗಳ ಮೂಲಕ ಒಳ್ಳೆಯ ಆಡಳಿತ ನೀಡಬೇಕು ಎಂದು ತಿಳಿಸಿದರು.

ಶೋಷಿತರ ಹಾಗೂ ಜನಸಾಮಾನ್ಯರ ಧ್ವನಿ ಕೇಳುವಂತ ಹೆಚ್ಚಿನ ಯುವ ಶಾಸಕರು ಆಯ್ಕೆಯಾಗಿದ್ದಾರೆ. ಜನರ ವೈಯಕ್ತಿಕ ಕೆಲಸಗಳಿಗೆ ಸಮಯವನ್ನು ಹಾಳು ಮಾಡದೆ ಕಡಿಮೆ ಸಮಯದಲ್ಲಿ ಸಮುದಾಯಗಳ ಕೆಲಸಕ್ಕೆ ಒತ್ತು ಕೊಡಲು ಅವರಿಗೆ ಅವಕಾಶ ಕೊಡಬೇಕು ಎಂದು ಅಭಿಪ್ರಾಯಪಟ್ಟರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಈ ಬಾರಿಯ ಚುನಾವಣೆಯಲ್ಲಿ ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಲು ದಸಂಸ ಸಂಘಟನೆಗಳು ಕೂಡ ಕಾರಣವಾಗಿದೆ ಎಂದರು. ಕಳೆದ ಬಾರಿ ಶಾಸಕನಾಗಿ ಆರೋಗ್ಯ ಮತ್ತು ಶಿಕ್ಷಣ ಸೇರಿದಂತೆ ತಾಲೂಕಿನ ಅಭಿವೃದ್ಧಿಗೆ ಕೈ ಜೋಡಿಸಿದೆ. ಈ ಬಾರಿ ಕೂಡ ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡುವುದಾಗಿ ತಿಳಿಸಿದ ಅವರು, ಮೈಸೂರು ಮಾನಂದವಾಡಿ ರಸ್ತೆ ರಾಷ್ಟ್ರೀಯ ಹೆದ್ದಾರಿಯಾಗಿ ಮಾರ್ಪಾಡಾಗಿದ್ದು, ಇದರ ನಿರ್ಮಾಣಕ್ಕೆ 920 ಕೋಟಿ ರೂ. ಅಂದಾಜು ಪಟ್ಟಿ ತಯಾರಿಸಿ ಕೇಂದ್ರ ಸರ್ಕಾರಕ್ಕೆ ಡಿಪಿಆರ್ ತಯಾರಿಸಿ ಸಲ್ಲಿಸಲಾಗಿದೆ, ಇದರ ನಿರ್ಮಾಣಕ್ಕೆ ಶೀಘ್ರ ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ತಾಲೂಕಿನಲ್ಲಿ ಇರುವ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವ ಉದ್ದೇಶದಿಂದ ಆಗಸ್ಟ್‌ನಲ್ಲಿ 3 ಸಾವಿರ ಮಕ್ಕಳಿಗೆ ವಿವಿಧ ಕೌಶಲ್ಯ ಅಭಿವೃದ್ಧಿ ಕಲ್ಪಿಸಲು ಉದ್ಯೋಗ ಮೇಳ ಆಯೋಜಿಸಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ ಮಾತನಾಡಿ, ಧರ್ಮದ ಹೆಸರಿನಲ್ಲಿ ಆಡಳಿತ ನಡೆಸಿ ಜನರನ್ನು ದಿಕ್ಕು ತಪ್ಪಿಸಿದ ಸರ್ಕಾರವನ್ನು ಜನರು ತಿರಸ್ಕರಿಸಿ ದೂರ ಮಾಡಿದ್ದಾರೆ. ಪ್ರಜಾಪ್ರಭುತ್ವ ಮರುಸ್ಥಾಪನೆಗಾಗಿ ಜನರು ತಮ್ಮ ಮತದಾನದ ಮೂಲಕ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರ ನೀಡಿದ್ದಾರೆ. ಇದನ್ನು ಉಳಿಸಿಕೊಳ್ಳುವ ಮೂಲಕ ಕಾಂಗ್ರೆಸ್ ಪಕ್ಷ ಜನಪರವಾಗಿ ಆಡಳಿತ ನೀಡಬೇಕು ಎಂದು ತಿಳಿಸಿದರು.

ಇದೇ ವೇಳೆ ಎಸ್ಎಸ್ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಶೋಷಿತ ಸಮುದಾಯದ 42 ವಿದ್ಯಾರ್ಥಿಗಳಿಗೆ ತಲಾ ಐದು ಸಾವಿರ ರೂ.ಗಳಂತೆ ಆರ್ಥಿಕ ಪ್ರೋತ್ಸಾಹಧನ ನೀಡಿ ಅಭಿನಂದಿಸಲಾಯಿತು. ಶಾಸಕ ಅನಿಲ್ ಚಿಕ್ಕಮಾದು ಅವರನ್ನು ಸಮಿತಿ ವತಿಯಿಂದ ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಜಿಲ್ಲಾ ಸಂಘಟನಾ ಸಂಚಾಲಕರಾದ ಹೆಗ್ಗನೂರು ನಿಂಗರಾಜು, ಇಟ್ನಾ ರಾಜಣ್ಣ, ದೊಡ್ಡಸಿದ್ದು ಹಾದನೂರು, ತಾಲೂಕು ಸಂಚಾಲಕರಾದ ಮುತ್ತು, ಸಣ್ಣಕುಮಾರ್, ಸಣ್ಣಸ್ವಾಮಿ, ಸಿದ್ದರಾಜು, ಶಿವಣ್ಣ, ಅಕ್ಬರ್ ಪಾಷ, ದಾಸಯ್ಯ, ರಾಜು, ಸೋಮಸುಂದರ್, ಪುಟ್ಟರಾಜು, ಮಹೇಶ್, ಕುಮಾರ, ಗೋವಿಂದರಾಜು, ಮಹಾದೇವು, ವೆಂಕಟೇಶ್, ರಾಜಶೇಖರ್ ಇದ್ದರು.

ಮಾದಕ ವಸ್ತುವಿನಿಂದ ಸಮಾಜದ ಸ್ವಾಸ್ಥ್ಯ ಹಾಳು



ನಂಜನಗೂಡು, ಜೂ.28– ಮಾದಕ ವಸ್ತುವಿನ ಬಳಕೆ ಯುವ ಜನಾಂಗದಲ್ಲಿ ಹೆಚ್ಚುತ್ತಿದ್ದು, ಇದರಿಂದ ಅವರ ಮಾನಸಿಕ ಹಾಗೂ ದೈಹಿಕ ಆರೋಗ್ಯ ಹದಗೆಡುತ್ತಿದೆ. ಜೊತೆಗೆ ಸಮಾಜದ ಸ್ವಾಸ್ಥ್ಯ ಹಾಳಾಗುತ್ತಿದೆ ಎಂದು ಬಿಳಿಗೆರೆ ಪೊಲೀಸ್ ಠಾಣೆಯ ಪಿಎಸ್ಐ ಕರಿಬಸಪ್ಪ ಹೇಳಿದರು.

ತಾಲೂಕಿನ ಸುತ್ತೂರಿನಲ್ಲಿ ಜೆಎಸ್ಎಸ್ ಮಹಾವಿದ್ಯಾಲಯ ಬಿಇಡಿ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಅಂತಾರಾಷ್ಟ್ರೀಯ ಮಾದಕ ವಸ್ತು ಮತ್ತು ಮಾನವ ಕಳ್ಳ ಸಾಗಾಣಿಕೆ ವಿರೋಧಿ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು.

ಮಾದಕ ವಸ್ತುವಿನ ನಿಯಂತ್ರಣಕ್ಕೆ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕಾನೂನಿನ ಕ್ರಮ ಅನುಸರಿಸುತ್ತಿದೆ, ಆದರೂ ಸಹ ಕೆಲವು ಸಮಾಜಘಾತಕ ಶಕ್ತಿಗಳು ಮಾದಕ ವಸ್ತುವಿನ ಸರಬರಾಜು ಮೂಲಕ ಯುವಕರನ್ನು ಮಾದಕ ವಸ್ತುವಿನ ದಾಸ್ಯಕ್ಕೆ ಬಲಿ ಕೊಡುತ್ತಿದ್ದಾರೆ. ಇದು ಸ್ವಾಸ್ಥ್ಯ ಸಮಾಜಕ್ಕೆ ಮಾರಕ. ಆದ್ದರಿಂದ ಯುವಕರು ಸ್ವಯಂ ಪ್ರೇರಣೆಯಿಂದ ಮಾದಕ ವಸ್ತುವಿನ ಬಳಕೆಯಿಂದ ದೂರವಿರುವುದು ಒಳ್ಳೆಯದು ಎಂದು ಕಿವಿಮಾತು ಹೇಳಿದರು. ಅಧ್ಯಕ್ಷತೆಯನ್ನು ಪ್ರಾಂಶುಪಾಲ ಡಾ. ಹೆಚ್.ಎಂ. ಮಹೇಶ್ ವಹಿಸಿದ್ದರು. ಸಹಾಯಕ ಪ್ರಾಧ್ಯಾಪಕರು ಉಪಸ್ಥಿತರಿದ್ದರು. ಕು. ಮೋನಿಕ ಪ್ರಾರ್ಥಿಸಿದರು. ಜಿ.ಎನ್. ಮಂಜುನಾಥ್ ಸ್ವಾಗತಿಸಿದರೆ, ಕೆ.ವಿ.ಯೋಗೇಶ್‌ರವರು ವಂದಿಸಿದರು.

ಅಕ್ಕಿ ಕೊಡದ ಕೇಂದ್ರದ ವಿರುದ್ಧ ಜೆಎಂಎಸ್ ಪ್ರತಿಭಟನೆ

ಹುಣಸೂರು, ಜೂ.28– ಕೇಂದ್ರದ ಬಿಜೆಪಿ ಸರ್ಕಾರ ಬಡವರ ಅನ್ನ ಕಸಿಯಲು ಮುಂದಾಗಿದೆ ಎಂದು ಆಪಾದಿಸಿ ಜನವಾದಿ ಮಹಿಳಾ ಸಂಘಟನೆ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.



ಪ್ರತಿಭಟನೆ ನಡೆಸುತ್ತಿರುವ ಜನವಾದಿ ಮಹಿಳಾ ಸಂಘಟನೆ ಕಾರ್ಯಕರ್ತರು.

ಪಟ್ಟಣದ ಬಸವನಗುಡಿ ಬೀದಿಯಲ್ಲಿ ಸಮಾವೇಶಗೊಂಡ ಜೆಎಂಎಸ್‌ನ ಕಾರ್ಯಕರ್ತರು ಜನವಾದಿ ಮಹಿಳಾ ಸಂಘಟನೆ ಜಿಂದಾಬಾದ್, ರಾಜ್ಯ ಸರ್ಕಾರ ಕೇಳಿದಷ್ಟು ಅಕ್ಕಿ ಕೊಡಲೇಬೇಕು, ಬಡವರ ಬಾಯೊಳಗಿನ ತುತ್ತನ್ನು ಕಸಿಯಲು ಬಿಡುವುದಿಲ್ಲ, ಅಕ್ಕಿ ಕೊಡಲು ನಿರಾಕರಣೆ ಮಾಡುತ್ತಿರುವ ಕೇಂದ್ರ ಸರ್ಕಾರಕ್ಕೆ ಧಿಕ್ಕಾರ.. ಮುಂತಾದ ಘೋಷಣೆ ಕೂಗಿ ಕೇಂದ್ರ ಸರ್ಕಾರ ಕೂಡಲೇ ಅಕ್ಕಿ ಬಿಡುಗಡೆ ಮಾಡುವಂತೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಜನವಾದಿ ಮಹಿಳಾ ಸಂಘಟನೆ ಅಧ್ಯಕ್ಷೆ ಕೆ.ಸಿ.ಆಶಾ ಮಾತನಾಡಿ, ಬೆಲೆ ಏರಿಕೆ, ಭ್ರಷ್ಟಾಚಾರ, ಕೋಮು ದ್ವೇಷ, ಮಹಿಳೆಯರ ಹಕ್ಕುಗಳ ಮೇಲಿನ ದಾಳಿಗಳಿಂದ ಬೇಸತ್ತು ಕರ್ನಾಟಕ ರಾಜ್ಯದಲ್ಲಿ ರಾಜಕೀಯ ಬದಲಾವಣೆ ತಂದಿದ್ದೇವೆ. ಮಹಿಳೆಯರು ಇದರಲ್ಲಿ ಪ್ರಧಾನ ಪಾತ್ರ ವಹಿಸಿದ್ದರು ಎಂಬುದೇ ಹೆಮ್ಮೆಯ ಸಂಗತಿ ಎಂದರು.

ಜೆಎಂಎಸ್ ಖಜಾಂಚಿ ಸಂಗೀತ ಮಾತನಾಡಿ, ರಾಜ್ಯದಾದ್ಯಂತ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಮತ್ತು ಗೃಹಲಕ್ಷ್ಮಿ ಯೋಜನೆಯ ಅಡಿ ಮಾಸಿಕ 2000 ರೂ.ಗಳು ಘೋಷಣೆಯಾಗಿವೆ. ಇವು ನಮ್ಮ ಒತ್ತಾಯಗಳಾಗಿದ್ದವು. ಲಕ್ಷಾಂತರ ಮಹಿಳೆಯರು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಹೊಟ್ಟೆ ತುಂಬಿದ ಜನ ಮಹಿಳೆಯರ ಕುರಿತು ಅತ್ಯಂತ ಕೀಳಾಗಿ ಮಾತನಾಡುತ್ತಿದ್ದಾರೆ. ಇದು ಬಿಟ್ಟಿ ಭಾಗ್ಯವಲ್ಲ. ದೇಶದ ಅಭಿವೃದ್ಧಿಗೆ ಮಹಿಳೆಯರ ಕೊಡುಗೆ ಇರುವುದನ್ನು ಗುರುತಿಸಿ ನೀಡಿದ ಘನತೆಯ ಬದುಕಿಗೆ ಒಂದು ಹೆಜ್ಜೆ. ಇದು ನಮ್ಮ ಬೇಡಿಕೆಯಾಗಿತ್ತು ಎಂದರು.

ಜೆಎಂಎಸ್‌ನ ಸಹ ಕಾರ್ಯದರ್ಶಿ ರಂಜಿತ, ಸದ್ಯಸರುಗಳಾದ ಮಂಜುಳ, ಪದ್ಮ, ವಸಂತ, ಪೂರ್ಣಿಮಾ, ರೋಜಿನಿ ರೇಣುಕ, ರಾಜಮ್ಮ, ಲಕ್ಷ್ಮಿ, ಶಿವಮ್ಮ, ಕಾವೇರಮ್ಮ, ಗೌರಮ್ಮ, ಮಹದೇವಮ್ಮ, ರತ್ನ ಮುಂತಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬೆಳಕು ಸೇವಾ ಫೌಂಡೇಶನ್ ಶೀಘ್ರ ಆರಂಭ



ತಿ.ನರಸೀಪುರ ಪಟ್ಟಣದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಬೆಳಕು ಸೇವಾ ಫೌಂಡೇಶನ್ ಸಂಸ್ಥೆಯ ಅಧ್ಯಕ್ಷ ಬಿ.ಅರವಿಂದ್ ಮಾತನಾಡಿದರು.

ತಿ.ನರಸೀಪುರ, ಜೂ.28–ನಿರ್ಗತಿಕರು, ಭಿಕ್ಷುಕರು ಹಾಗೂ ಕಡು ಬಡವರ್ಗದವರ ಕಷ್ಟ ಮತ್ತು ಅವಶ್ಯಕತೆಗೆ ಸಹಾಯ ಮಾಡುವುದರ ಜೊತೆಗೆ ಸರ್ಕಾರಿ ಸವಲತ್ತುಗಳನ್ನು ಸಾರ್ವಜನಿಕರಿಗೆ ತಲುಪಿಸುವ ಉದ್ದೇಶದೊಂದಿಗೆ ಬೆಳಕು ಸೇವಾ ಫೌಂಡೇಶನ್ ಎಂಬ ಸರ್ಕಾರೇತರ ಸಂಸ್ಥೆಯನ್ನು ಆರಂಭಿಸಲಾಗುತ್ತಿದೆ ಎಂದು ಫೌಂಡೇಷನ್‌ನ ಅಧ್ಯಕ್ಷ ಜಿ.ಅರವಿಂದ್ ಹೇಳಿದರು.

ಪಟ್ಟಣದ ಸೇಂಟ್ ಮೇರಿಸ್ ಸ್ಕೂಲ್ ಎದುರು ನೂತನವಾಗಿ ತೆರೆಯಲಾಗಿರುವ ಬೆಳಕು ಸೇವಾ ಫೌಂಡೇಶನ್ ಕಚೇರಿಯಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು 30 ಮಂದಿ ಸ್ನೇಹಿತರು ಸೇರಿ ಎನ್‌ಜಿಓ ಸಂಸ್ಥೆ ಆರಂಭಿಸಿದ್ದು, ಸೇವಾ ಮನೋಭಾವದೊಂದಿಗೆ ಜನಸೇವೆಗೆ ಸದಾ ಸಿದ್ಧರಿರುವುದಾಗಿ ತಿಳಿಸಿದರು.

ಸರ್ಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುವ ಬಡ ಮಕ್ಕಳನ್ನು ಗುರುತಿಸಿ ಅವರಲ್ಲಿರುವ ಕಲೆ, ಕ್ರೀಡೆಯನ್ನು ಗುರುತಿಸಿ ಅವರಿಗೆ ಉತ್ತೇಜನ ನೀಡುವ ಜೊತೆಗೆ ಉಚಿತವಾಗಿ ತರಬೇತಿ ಕೊಡಿಸುವ ಗುರಿಯನ್ನು ಸೇವಾಸಂಸ್ಥೆ ಹೊಂದಿದೆ. ನಮ್ಮ ತಂಡದಲ್ಲಿ ಪ್ರತಿಭಾವಂತ ಶಿಕ್ಷಕರಿದ್ದು ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಿಕೊಡಲು ಉಚಿತ ಟ್ಯೂಷನ್ ಕೊಡುವ ಉದ್ದೇಶ ಹೊಂದಲಾಗಿದೆ ಎಂದರು.

ಸಂಸ್ಥೆಯ ಕಾರ್ಯದರ್ಶಿ ಆರ್.ಚೇತನ್ ಮಾತನಾಡಿ, ಸೇವಾಸಂಸ್ಥೆ ಸ್ನೇಹಿತರ ಆಸಕ್ತಿಯಿಂದ ರೂಪ ತಳೆದಿದೆ. ಬೇರೆ ಬೇರೆಡೆ ಇದ್ದ ತಂಡ ಈಗ ಒಟ್ಟಾಗಿ ಸಮಾಜ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲಿದೆ. ಹಂತ ಹಂತವಾಗಿ ಸಂಸ್ಥೆ ವಿವಿಧ ಸಾಮಾಜಿಕ ಸೇವೆ ಮಾಡಲು ನಿರ್ಧರಿಸಿದ್ದು, ನಿರ್ಗತಿಕರು, ಬಡವರು, ಅಶಕ್ತರಿಗೆ ಊಟದ ವ್ಯವಸ್ಥೆ ಕಲ್ಪಿಸಿಕೊಡಲಿದೆ. ರಂಗಭೂಮಿ, ಕ್ರೀಡೆ ಹಾಗೂ ಕಲೆಯಲ್ಲಿ ಆಸಕ್ತಿ ಇರುವ ಬಡ ಮಕ್ಕಳನ್ನು ಗುರುತಿಸಿ ಅವರನ್ನು ಪ್ರೋತ್ಸಾಹಿಸಲು ನಿರ್ಧರಿಸಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಸಹ ಕಾರ್ಯದರ್ಶಿ ಜಿ.ಪ್ರಶಾಂತ್ ಕುಮಾರ್, ಖಜಾಂಚಿ ಮಹೇಶ್, ಸಂಘಟನಾ ಕಾರ್ಯದರ್ಶಿ ಎನ್.ಸಿದ್ದರಾಜು, ನಿರ್ದೇಶಕರಾದ ನವೀನ್ ಕುಮಾರ್ ಜಿ.ಕೃಷ್ಣ ಕುಮಾರ್, ಎಂಬಿ. ಗಿರೀಶ್, ಜಿ.ಮೋಹನ್, ಗೋವರ್ಧನ್, ಚಂದನ್ ಹಾಜರಿದ್ದರು.



ನಂಜನಗೂಡಿನ ಪ್ರವಾಸಿ ಮಂದಿರದಲ್ಲಿ ನಂ.ಗೂಡು ಹೋಟೆಲ್ ಮಾಲೀಕರ ಸಂಘದ ವತಿಯಿಂದ ನೂತನ ಶಾಸಕ ದರ್ಶನ್ ಧ್ರುವನಾರಾಯಣ್ ಅವರನ್ನು ಸನ್ಮಾನಿಸಲಾಯಿತು.

ಸರಗೂರಲ್ಲಿ ಹತ್ತಿ ಬೆಳೆಯಲ್ಲಿ ಗುಲಾಬಿ ಬಣ್ಣದ ಕಾಯಿ ಕೊರಕದ ಬಗ್ಗೆ ತರಬೇತಿ



ಸರಗೂರು, ಜೂ.28– ತಾಲೂಕಿನ ಮುಳ್ಳೂರು ಗ್ರಾಮದಲ್ಲಿ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಹತ್ತಿ ಬೆಳೆಯಲ್ಲಿ ಗುಲಾಬಿ ಬಣ್ಣದ ಕಾಯಿ ಕೊರಕದ ಬಗ್ಗೆ ತರಬೇತಿ ನೀಡಲಾಯಿತು.

ಕಬಿನಿ ಆರ್ಗಾನಿಕ್ಸ್ ಫಾರ್ಮರ್ಸ್ ಪ್ರೊಡ್ಯೂಸರ್ ಕಂಪನಿ, ಎಲ್‌ಡಿಸಿ ಕಂಪನಿ, ಬೋಲ್ ಗಾರ್ಡ್ ಸಂಸ್ಥೆ ಹಾಗೂ ವಾದ್ವನಿ ಸಂಯೋಜಿತ ಸಂಸ್ಥೆ ನಡೆಸಿದ ತರಬೇತಿ ಕಾರ್ಯಕ್ರಮದಲ್ಲಿ ರೈತರು ಉತ್ತಮ, ಗುಣಮಟ್ಟದ ಹತ್ತಿ ಬೆಳೆಯಲು ಏನು ಮಾಡಬೇಕು. ಗುಲಾಬಿ ಬಣ್ಣದ ಕಾಯಿ ಕೊರಕ ಬಂದರೆ ಯಾವ ಕ್ರಮ ವಹಿಸಬೇಕು ಎಂಬುದರ ಬಗ್ಗೆ ನುರಿತ ತಜ್ಞರು ಮಾಹಿತಿ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಎಲ್‌ಡಿಸಿ ಕಂಪನಿಯ ಮ್ಯಾನೇಜರ್ ಗಂಗಾಧರ ಮಾತನಾಡಿ, ರೈತರು ಸರಕಾರದಿಂದ ಸಿಗುವ ಸೌಲಭ್ಯಗಳು, ಕಂಪನಿಯಿಂದ ದೊರಕುವ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು. ಇದರೊಂದಿಗೆ ಬೆಳೆಗೆ ರೋಗ ಬರುವ ಮುನ್ನವೇ ನಿಯಂತ್ರಣಕ್ಕೆ ಕ್ರಮವಹಿಸಬೇಕು. ರೈತರು ಉತ್ತಮ ಇಳುವರಿ ಬಗ್ಗೆ ಗಮನಹರಿಸಬೇಕು ಎಂದು ಸಲಹೆ ನೀಡಿದರು.

ಎಲ್‌ಡಿಸಿ ಕಂಪನಿಯ ಅಧಿಕಾರಿ ಗಿರೀಶ್ ಅವರು, ರೈತರಿಗೆ ಉಚಿತವಾಗಿ ನೀಡಿದ ಮೋಹಕ ಬಲೆಯನ್ನು ರೈತರು ಹೊಲದಲ್ಲಿ ಯಾವ ರೀತಿ ಉಪಯೋಗಿಸಬೇಕು ಎಂಬುದರ ಬಗ್ಗೆ ಪ್ರದರ್ಶನ ಮೂಲಕ ಮಾಹಿತಿ ನೀಡಿದರು. ರೈತರಿಗೆ ಎಲ್‌ಡಿಸಿ ಕಂಪನಿ ವತಿಯಿಂದ 1600ಕ್ಕೂ ಹೆಚ್ಚು ಮೋಹಕ ಬಲೆಗಳನ್ನು ಉಚಿತವಾಗಿ ವಿತರಿಸಲಾಯಿತು.

ವಾದ್ವನಿ ಸಂಯೋಜಿತ ಸಂಸ್ಥೆಯ ಪ್ರತಿನಿಧಿ ಮಂಜುನಾಥ, ಕಬಿನಿ ಆರ್ಗಾನಿಕ್ಸ್ ಫಾರ್ಮರ್ಸ್ ಪ್ರೊಡ್ಯೂಸರ್ ಕಂಪನಿಯ ಮುಖ್ಯಸ್ಥ ವಿಲಿಯಂ ಡಿಸೋಜ, ಚೆನ್ನಪ್ಪ, ಕೃಷಿ ಇಲಾಖೆ ಅಧಿಕಾರಿ ಮಹೇಶ್, ಬೋಲ ಗಾರ್ಡ್ ಸಂಸ್ಥೆ ಪ್ರತಿನಿಧಿ ಶಂಬಣ್ಣ ಹಾದಿಮನಿ, ಗ್ರಾಮಸ್ಥರಾದ ರಾಮಲಿಂಗಪ್ಪ, ಮಹೇಶ್, ಶಿವಕುಮಾರ, ರವಿಕುಮಾರ್, ಎಂ.ಎಸ್.ದೇವರಾಜ್, ಸಿಟಿಜನ್ ನಾಗರಾಜು, ಸಿವಮಲ್ಲಪ್ಪ, ವೆಂಕಟೇಶ್, ಪ್ರಕಾಶ, ನಿಂಗ ನಾಯಕ, ಸಿದ್ದನಾಯಕ ಸೇರಿದಂತೆ ಹೆಚ್ಚು ರೈತರು ಹಾಜರಿದ್ದರು.



ಬನ್ನೂರಿನ ಸಮೀಪದ ಅತ್ತಹಳ್ಳಿಯಲ್ಲಿ ನಾಡಪ್ರಭು ಕೆಂಪೇಗೌಡರ ಜನ್ಮದಿನದ ಅಂಗವಾಗಿ ಕೆಂಪೇಗೌಡರ ಪುತ್ಥಳಿಯನ್ನು ಆದಿ ಚುಂಚನಗಿರಿ ಮೈಸೂರು ಶಾಖಾ ಮಠದ ಸೋಮೇಶ್ವರನಾಥ ಸ್ವಾಮೀಜಿ ಅನಾವರಣಗೊಳಿಸಿದರು. ಸಮಾಜ ಸೇವಕ ವೈ.ಎಸ್.ರಾಮಸ್ವಾಮಿ, ಮಹೇಂದ್ರಸಿಂಗ್ ಕಾಳಪ್ಪ, ಅತ್ತಹಳ್ಳಿ ಕೆಂಪೇಗೌಡ, ಮಹೇಶ್, ಸುನೀಲ್ ಸೇರಿದಂತೆ ಅತ್ತಹಳ್ಳಿ ಗ್ರಾಮಸ್ಥರು ಇದ್ದರು.

ಜು.2, ಸೋಸಲೆಯಲ್ಲಿ ಕಾಂಗ್ರೆಸ್ಸಿನಿಂದ ಕೃತಜ್ಞತಾ ಸಮಾರಂಭ

ಅದ್ಧೂರಿಯಾಗಿ ನಡೆಸಲು ಪೂರ್ವಭಾವಿ ಸಭೆಯಲ್ಲಿ ನಿರ್ಧಾರ



ತಿ.ನರಸೀಪುರ ತಾಲೂಕಿನ ವೀರಪ್ಪ ಒಡೆಯರಹುಂಡಿ ಗ್ರಾಮದಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಕೆಪಿಸಿಸಿ ಸದಸ್ಯ ಹಾಗೂ ತಾ.ಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ ಮಾತನಾಡಿದರು.

ತಿ.ನರಸೀಪುರ, ಜೂ.28– ಕಾಂಗ್ರೆಸ್ಸಿನ ಭದ್ರಕೋಟೆ ತಾಲೂಕಿನ ಸೋಸಲೆ ಗ್ರಾಮದಲ್ಲಿ ಜು.2ರಂದು ಬೆಳಗ್ಗೆ 11 ಗಂಟೆಗೆ ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಹೋಬಳಿಯ ಮತದಾರರಿಗೆ ಕೃತಜ್ಞತೆ ಸಲ್ಲಿಸಲಿದ್ದಾರೆ ಎಂದು ಕೆಪಿಸಿಸಿ ಸದಸ್ಯ ಹಾಗೂ ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ ತಿಳಿಸಿದರು.

ಕೃತಜ್ಞತಾ ಸಮಾರಂಭದ ಪೂರ್ವಭಾವಿಯಾಗಿ ತಾಲೂಕಿನ ವೀರಪ್ಪ ಒಡೆಯರ ಹುಂಡಿ ಗ್ರಾಮದಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಹೋಬಳಿ ಕೇಂದ್ರ ಸ್ಥಾನವಾದ ಸೋಸಲೆ ಗ್ರಾಮದ ಅಂಚೆ ಕಚೇರಿ ಆವರಣದಲ್ಲಿ ನಡೆಯಲಿರುವ ಸಮಾರಂಭವನ್ನು ಯಶಸ್ವಿಗೊಳಿಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡು, ಸಚಿವರಿಗೆ ಅದ್ದೂರಿ ಸ್ವಾಗತವನ್ನು ಕೋರೋಣ ಎಂದರು.

ಈಗಾಗಲೇ ಮೂಗೂರು ಹಾಗೂ ತಲಕಾಡು ಗ್ರಾಮಗಳಲ್ಲಿ ಆಯಾಯ ಹೋಬಳಿಯ ಮತದಾರರ ಕೃತಜ್ಞತಾ ಸಮಾರಂಭ ಅಚ್ಚುಕಟ್ಟಾಗಿ, ಯಶಸ್ವಿಯಾಗಿ ನಡೆದಿರುವುದರಿಂದ ಸೋಸಲೆಯ ಸಮಾರಂಭವನ್ನು ಮತ್ತಷ್ಟು ಮೆರಗಿನೊಂದಿಗೆ ಅದ್ದೂರಿಯಾಗಿ ನಡೆಸಲು ನಾವೆಲ್ಲರೂ ಈಗಿನಿಂದಲೇ ಸಜ್ಜಾಗೋಣ. ಕನಿಷ್ಠ 5000ಕ್ಕೂ ಹೆಚ್ಚು ಜನರನ್ನು ಸೇರಿಸೋಣ. ಅಂದು ಹಬ್ಬದ ಸಂಭ್ರಮ ಸೋಸಲೆ ಗ್ರಾಮದಲ್ಲಿ ಕಂಡು ಬರಬೇಕು. ಹೋಬಳಿಯ ಮತದಾರರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಅವರು ಮನವಿ ಮಾಡಿದರು.

> ಸೋಸಲೆ ಹೋಬಳಿಗೆ ಎಂಟು ಗ್ರಾಮ ಪಂಚಾಯಿತಿಗಳು ಬರಲಿದ್ದು, ಆ 8 ಪಂಚಾಯತಿಯಲ್ಲಿ ಕಾಂಗ್ರೆಸ್ ಅಧ್ಯಕ್ಷರೇ ಆಯ್ಕೆಯಾಗಿದ್ದಾರೆ. ಆದ್ದರಿಂದ ಅಧ್ಯಕ್ಷರು ಪ್ರತಿ ಮನೆಗೆ ಭೇಟಿ ನೀಡಿ ಕಾಂಗ್ರೆಸ್‌ನ ಗ್ಯಾರಂಟಿಗಳ ತಿಳಿಸಿ ಕಾರ್ಯಕ್ರಮಕ್ಕೆ ಕರೆದುಕೊಂಡು ಬರಬೇಕು ಎಂದರು.
> –ಸೋಸಲೆ ಮಹದೇವಸ್ವಾಮಿ

ಸೋಸಲೆ ಪ್ರಾಥಮಿಕ ಸಹಕಾರ ಸಂಘದ ಅಧ್ಯಕ್ಷ ಎಂ.ಪರಶಿವಮೂರ್ತಿ ಮಾತನಾಡಿ, ಕೃತಜ್ಞತಾ ಸಮಾರಂಭದ ವೇದಿಕೆ ಕಾರ್ಯ ನಿಗದಿತ ಸ್ಥಳದಲ್ಲಿ ಈಗಾಗಲೇ ಆರಂಭಗೊಂಡಿದೆ. ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ತಂಡವನ್ನು ರಚನೆ ಮಾಡಿಕೊಂಡು ಹೋಬಳಿಯ ಪ್ರತಿಯೊಂದು ಗ್ರಾಮಗಳಿಗೂ ತೆರಳಿ ಎಲ್ಲಾ ಸಮುದಾಯಗಳ ಮತದಾರರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸೋಣ. ಸಚಿವರನ್ನ ಸೋಸಲೆ ಗ್ರಾಮಕ್ಕೆ ಗೌರವಯುತವಾಗಿ ಬರಮಾಡಿಕೊಳ್ಳೋಣ. ಹೋಬಳಿಯ ಜನರು ನಿರಂತರವಾಗಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತಾ ಬಂದಿರುವುದರಿಂದ ಈಗಿನ ಸರ್ಕಾರದ ಸೌಲಭ್ಯಗಳನ್ನು ಪ್ರತಿಯೊಬ್ಬರಿಗೂ ತಲುಪಿಸಲು ಪ್ರಾಮಾಣಿಕವಾಗಿ ದುಡಿಯೋಣ ಎಂದು ತಿಳಿಸಿದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಹೊನ್ನ ನಾಯಕ, ಅಧ್ಯಕ್ಷ ಮಹೇಶ್, ಎಪಿಎಂಸಿ ಮಾಜಿ ಸದಸ್ಯ ಉಕ್ಕಲಿಗರೆ ಬಸವಣ್ಣ ರಾಜು, ಗ್ರಾಪಂ ಮಾಜಿ ಅಧ್ಯಕ್ಷ ಶಿವರಾಮು, ಡೈರಿ ಕಾರ್ಯದರ್ಶಿ ನಿಂಗಯ್ಯ, ಕೆಬ್ಬೆ ರಂಗಸ್ವಾಮಿ, ದಸಂಸ ಜಿಲ್ಲಾ ಸಂಚಾಲಕ ಸೋಸಲೆ ಶಶಿಕಾಂತ್, ತಾಪ ಮಾಜಿ ಅಧ್ಯಕ್ಷ ನೆರಗತನಹಳ್ಳಿ ಕುಮಾರಸ್ವಾಮಿ, ಗದ್ದೆಮೋಳೆ ಸಿದ್ದರಾಜು, ಮಹೇಶ್ ಕಾಂಗ್ರೆಸ್ ಕಾರ್ಯಕರ್ತರು ಹಾಜರಿದ್ದರು.

ಆಹಾರ ಪದಾರ್ಥ ತುಂಬಿದ್ದ ವಾಹನ ಡಿಕ್ಕಿ: ಮುರಿದು ಬಿದ್ದ ವಿದ್ಯುತ್ ಕಂಬಗಳು

ಉರುಳಿ ಬಿದ್ದ ವಾಹನ, ತಪ್ಪಿದ ಭಾರಿ ಅನಾಹುತ, ಬಿಸ್ಕತ್–ಐಸ್‌ಕ್ರೀಂ ಹೊತ್ತೊಯ್ದ ಸಾರ್ವಜನಿಕರು



ವಿದ್ಯುತ್ ಕಂಬಗಳಿಗೆ ಡಿಕ್ಕಿ ಹೊಡೆದು ಉರುಳಿ ಬಿದ್ದಿರುವ ವಾಹನ.

ಪಿರಿಯಾಪಟ್ಟಣ, ಜೂ.28– ಆಹಾರ ಪದಾರ್ಥಗಳನ್ನು ಸರಬರಾಜು ಮಾಡುವ ವಾಹನವೊಂದು ರಸ್ತೆ ಬದಿಯ ವಿದ್ಯುತ್ ಕಂಬಗಳಿಗೆ ಡಿಕ್ಕಿ ಹೊಡೆದ ಪರಿಣಾಮ ಕಂಬಗಳು ಮುರಿದು ಬಿದ್ದ ಘಟನೆ ಬೆಟ್ಟದಪುರದ ಕುಶಾಲನಗರ– ಕೆ.ಆರ್.ನಗರ ರಾಜ್ಯ ಹೆದ್ದಾರಿಯ ಹಸುವಿನಕಾವಲು ಕೆರೆ ತಿರುವಿನಲ್ಲಿ ಕಳೆದ ರಾತ್ರಿ ಸಂಭವಿಸಿದೆ.

ಈ ವೇಳೆ ಯಾವುದೇ ವಾಹನಗಳು ಅತ್ತ ಬಾರದಿದ್ದರಿಂದ ಭಾರೀ ಅನಾಹುತ ತಪ್ಪಿದೆ. ಮುರಿದು ವಿದ್ಯುತ್ ಕಂಬ ಮತ್ತು ತುಂಡಾಗಿದ್ದ ಕಂಬಗಳಲ್ಲಿ ವಿದ್ಯುತ್ ಪ್ರವಹಿಸುತ್ತಿತ್ತು. ಕೂಡಲೇ ಸಾರ್ವಜನಿಕರು ವಿದ್ಯುತ್ ಇಲಾಖೆಗೆ ಸುದ್ದಿ ಮುಟ್ಟಿಸಿ ವಿದ್ಯುತ್ ಕಡಿತಗೊಳಿಸಿದರಂತೆ. ಇದೇ ಸಂದರ್ಭದಲ್ಲಿ ಆಹಾರ ಪದಾರ್ಥಗಳು ತುಂಬಿದ್ದ ವಾಹನಕ್ಕೆ ಕೈ ಹಾಕಿದ ಸಾರ್ವಜನಿಕರು ಕೈಗೆ ಸಿಕ್ಕಿದ ಬಿಸ್ಕತ್‌ಗಳು, ಐಸ್‌ಕ್ರೀಂ ಸೇರಿದ ಆಹಾರ ಪದಾರ್ಥಗಳನ್ನು ಹೊತ್ತೊಯ್ದುದ್ದು ಕಂಡು ಬಂದಿತು. ವಿಷಯ ತಿಳಿದು ಸ್ಥಳಕ್ಕೆ ಬಂದ ಪೊಲೀಸರು, ವಿದ್ಯುತ್ ಇಲಾಖೆ ಅಧಿಕಾರಿಗಳು ಮುರಿದು ಬಿದ್ದ ವಿದ್ಯುತ್ ಕಂಬಗಳನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಮೈಸೂರು ಎಂ.ಜಿ.ರಸ್ತೆ ತರಕಾರಿ ಮಾರುಕಟ್ಟೆ ಬಳಿ ವಾಹನ ಸಂಚಾರ ಸಮಸ್ಯೆಗಿಲ್ಲವೇ ಪರಿಹಾರ?

ಪ್ರತಿನಿತ್ಯ ಸಂಜೆ 6ರಿಂದ ರಾತ್ರಿ 11ರವರೆಗೆ ನಂ.ಗೂಡು ರಸ್ತೆ ಓವರ್‌ಬ್ರಿಡ್ಜ್‌ನಿಂದ ರ್‍ಯಾಡಿಸನ್ ಬ್ಲೂ ಹೋಟೆಲ್‌ವರೆಗೆ ಈ ರಸ್ತೆಯನ್ನು ಇನ್ನಿತರೆ ವಾಹನಗಳಿಗೆ ಬಂದ್ ಮಾಡುವುದು ಒಳ್ಳೆಯದು!

ಮೈಸೂರು, ಜೂ.28–ಸಮಸ್ಯೆ ಕಣ್ಣೆದುರಿದ್ದರೂ ಅದನ್ನು ಪರಿಹರಿಸುವ ಜಾಯಮಾನ ನಮ್ಮ ಅಧಿಕಾರಿ ವರ್ಗದಲ್ಲ ಎಂಬುದಕ್ಕೆ ಮೈಸೂರಿನ ಎಂ.ಜಿ.ರಸ್ತೆಯಲ್ಲಿರುವ ತರಕಾರಿ ಮಾರುಕಟ್ಟೆಗೆ ರೈತರು ತರಕಾರಿ ತರುವಂತಹ ವಾಹನಗಳು ಹಾಗೂ ಈ ಮಾರ್ಗದಲ್ಲಿ ಸಾಗುವಂತಹ ಇನ್ನಿತರ ವಾಹನಗಳ ಚಾಲಕರು ಪಡುತ್ತಿರುವ ಪರಿಪಾಟಲು ಸಾಕ್ಷಿಯಾಗಿದೆ.



ಪ್ರತಿನಿತ್ಯ ಸಂಜೆ 6 ಗಂಟೆಯಿಂದ ರಾತ್ರಿ 11 ಗಂಟೆಯವರೆಗೆ ನಂಜನಗೂಡು ರಸ್ತೆ ಓವರ್‌ಬ್ರಿಡ್ಜ್ ಅಡಿಯಿಂದ ರ್‍ಯಾಡಿಸನ್ ಬ್ಲೂಹೋಟೆಲ್‌ವರೆಗೆ ಎಂ.ಜಿ.ರಸ್ತೆ ಅಕ್ಷರಶಃ ರೈತರ ತರಕಾರಿ ಹೊತ್ತು ತರುವಂತಹ ವಾಹನಗಳು ಹಾಗೂ ಪ್ರವಾಸಿಗರು ಸೇರಿ ಇನ್ನಿತರೆ ನಾಗರಿಕರ ವಾಹನಗಳ ಸಂಘರ್ಷವೇ ಏರ್ಪಡುತ್ತದೆ. ಈ ಸಮಯದಲ್ಲಿ ಇಲ್ಲಿಂದ ವಾಹನಗಳು ಮುಂದೆ ಸಾಗಬೇಕಾದರೆ ಚಾಲಕರು ಹರಸಾಹಸಪಡಬೇಕಿದೆ. ಅನೇಕ ಸಂದರ್ಭದಲ್ಲಿ ವಾಹನಗಳು ಒಂದಕ್ಕೊಂದು ತಾಗಿ ಸಣ್ಣಪುಟ್ಟದಾಗಿ ಜಖಂಗೊಳ್ಳುತ್ತವೆ. ಈ ವಿಷಯವಾಗಿ ವಾಹನ ಚಾಲಕರು ಜಗಳಕ್ಕಿಳಿಯುತ್ತಾರೆ. ಈ ಬೀದಿ ಜಗಳ ಮುಗಿಯುವವರೆಗೆ ಹಿಂದೆ–ಮುಂದೆ ಇರುವಂತಹ ವಾಹನ ಚಾಲಕರು ಹಾಗೂ ಅವುಗಳಲ್ಲಿರುವ ಪ್ರಯಾಣಿಕರು ಹೈರಾಣಾಗುತ್ತಾರೆ.

ಈ ವಿಷಯದಲ್ಲಿ ನಾವು ಮಾರುಕಟ್ಟೆಗೆ ತರಕಾರಿ ತರುವಂತಹ ರೈತರನ್ನು ದೂರಲಾಗದು. ಏಕೆಂದರೆ ಅವರು ನಾನಾ ವಾಹನಗಳಲ್ಲಿ ತಂದಂತಹ ತರಕಾರಿಗಳನ್ನು ಇಳಿಸಿಕೊಳ್ಳಲು ಸಾಕಷ್ಟು ಸಮಯ ಬೇಕಾಗುತ್ತದೆ. ಅಲ್ಲಿಯವರೆಗೆ ಅವರು ತರಕಾರಿ ತಂದಂತಹ ವಾಹನ ರಸ್ತೆಯಲ್ಲೇ ನಿಂತಿರುತ್ತದೆ. ಕೆಲ ರೈತರು ರಸ್ತೆಬದಿಯಲ್ಲೇ ತಂದಂತಹ ತರಕಾರಿ ಮಾರಾಟಕ್ಕೆ ಇಡುತ್ತಾರೆ. ಸಂಜೆ ವೇಳೆ ಏಕಕಾಲಕ್ಕೆ ಹೀಗೆ ತರಕಾರಿ ತುಂಬಿದಂತಹ ಸಾಕಷ್ಟು ವಾಹನಗಳು ಬರುವುದರಿಂದ ಈ ಇಡೀ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಆಗುತ್ತದೆ.

ಅಪ್ಪಿತಪ್ಪಿ ಈ ವೇಳೆ ಇಲ್ಲಿ ಸಾಗುವಂತಹ ಪ್ರವಾಸಿಗರು ಹಾಗೂ ನಾಗರಿಕರ ವಾಹನಗಳು ಈ ವಾಹನಗಳ ನಡುವೆ ಸಿಕ್ಕಿಹಾಕಿಕೊಂಡರೆ ಕಥೆ ಮುಗಿಯಿತು. ಹೊರ ಬರಲು ಅರ್ಧ ಗಂಟೆಯಿಂದ ಒಂದು ಗಂಟೆ ಕಾಲ ಹಿಡಿಯಬಹುದು. ಅಷ್ಟಾದರೆ ಪರ್ವಾಗಿಲ್ಲ. ಹಾಗಾಗಿ ಈ ರಸ್ತೆಗೆ ಯಾಕಾದರೂ ಬಂದೆವು ಎಂದು ತಮ್ಮನ್ನೇ ತಾವು ಶಪಿಸಿಕೊಳ್ಳುವ ಪರಿಸ್ಥಿತಿ ಉಂಟಾಗುತ್ತಿದೆ.

ಈ ಟ್ರಾಫಿಕ್ ಜಾಮ್ ಸಮಸ್ಯೆ ಇಂದು–ನಿನ್ನೆಯದಲ್ಲ. ಇಲ್ಲಿಗೆ ತರಕಾರಿ ಮಾರುಕಟ್ಟೆ ಸ್ಥಳಾಂತರಗೊಂಡಾಗಿನಿಂದಲೇ ಇದೆ. ಆರಂಭದಲ್ಲಿ ಅಷ್ಟಾಗಿರಲಿಲ್ಲ. ಬರಬರುತ್ತಾ ಇಲ್ಲಿ ವಾಹನ ಸಂಚಾರ ಹೆಚ್ಚಾದಂತೆ ಸಮಸ್ಯೆ ಬಿಗಡಾಯಿಸುತ್ತಾ ಬಂದಿದೆ.

ನಮ್ಮ ಅಧಿಕಾರಿಗಳಿಗೂ ಇದರ ಅರಿವಿದೆ. ಅದರಲ್ಲೂ ನಗರಪಾಲಿಕೆ ಹಾಗೂ ಪೊಲೀಸ್ ಇಲಾಖೆ ಇದಕ್ಕೆ ಒಂದು ಪರಿಹಾರವನ್ನು ಯಾವಾಗಲೋ ಕಂಡುಕೊಳ್ಳಬೇಕಿತ್ತು. ಆದರೆ, ಕಂಡರೂ ಕಾಣದಂತೆ ಈ ಎರಡು ಇಲಾಖೆಯ ಅಧಿಕಾರಿಗಳು ವರ್ತಿಸುತ್ತಿರುವುದರ ಪರಿಣಾಮ, ಈ ಮಾರ್ಗದ ವಾಹನ ಚಾಲಕರು ಮತ್ತು ಸವಾರರು ಸಂಕಷ್ಟ ಪರಿಸ್ಥಿತಿ ಎದುರಿಸಬೇಕಾಗಿ ಬಂದಿದೆ.

ಒಂದು ವೇಳೆ ಇದಕ್ಕೆ ಈ ಎರಡು ಇಲಾಖೆ ಅಧಿಕಾರಿಗಳಿಂದ ಪರಿಹಾರ ಇಲ್ಲ ಎನ್ನುವುದೇ ಆದರೆ ಪ್ರತಿನಿತ್ಯ ಸಂಜೆ 6 ಗಂಟೆಯಿಂದ ರಾತ್ರಿ 11 ಗಂಟೆಯವರೆಗೆ ನಂಜನಗೂಡು ರಸ್ತೆ, ಓವರ್‌ಬ್ರಿಡ್ಜ್ ಅಡಿಯಿಂದ ರ್‍ಯಾಡಿಸನ್ ಬ್ಲೂ ಹೋಟೆಲ್‌ವರೆಗೆ ಈ ರಸ್ತೆಯನ್ನು ಇನ್ನಿತರ ವಾಹನಗಳ ಸಂಚಾರಕ್ಕೆ ಬಂದ್ ಮಾಡುವುದು ಉಚಿತ.

ಸಾಹಿತ್ಯೋತ್ಸವದಲ್ಲಿ ಪುಸ್ತಕಗಳು ಬಿಡುಗಡೆ



ಮೈಸೂರು, ಜೂ. 28– ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಹೌಸ್ ವತಿಯಿಂದ ಜು.1 ಮತ್ತು 2ರಂದು ಮೈಸೂರಿನ ವಿನೋಬಾ ರಸ್ತೆಯಲ್ಲಿರುವ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ನಡೆಯಲಿರುವ 7ನೇ ಆವೃತ್ತಿಯ ಸಾಹಿತ್ಯೋತ್ಸವ (ಲಿಟರೇಚರ್ ಫೆಸ್ಟ್)ದಲ್ಲಿ ಹಲವು ಪುಸ್ತಕಗಳನ್ನು ಬಿಡುಗಡೆ ಮಾಡಲಾಗುತ್ತದೆ.

1. 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಕೆ.ಬಿ. ಗಣಪತಿಯವರ 'ಲೈಫ್ ಅಂಡ್ ಟೈಮ್ಸ್'; 2. ಬೆಂಗಳೂರು ಬರಹಗಾರರ ಸಂಗ್ರಹ 'ರಿಲೇಷನ್‌ಶಿಪ್ ರಾಗಾಸ್–ಆನ್ ಅಂತೋಲಜಿ ಆಫ್ ಶಾರ್ಟ್ ಸ್ಟೋರೀಸ್'; 3. ಗಾಯತ್ರಿ ಅವರ 'ಎಲಾಸ್ ಅನ್‌ಫಿನಿಷ್ಡ್ ಬ್ಯುಸಿನೆಸ್'; 4. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ. ಚಂದ್ರಶೇಖರ ಕಂಬಾರ ಅವರ 'ವೆನ್ ದಿ ವಿಂಡ್ ಗಾಡ್ ಫೆಲ್ ಸಿಕ್ ಅಂಡ್ ಅದರ್ ಫೋಕ್ ಟೇಲ್ಸ್ (ಕನ್ನಡದ ಮೂಲ 'ಮರವೇ ಮರ್ಮರವೇ ಮತ್ತು ಪುಷ್ಪರಾಣಿ' ಕೃಷ್ಣಮನವಳ್ಳಿ ಅವರಿಂದ ಅನುವಾದ); 5. ಕಲಾವಿದ ಸುಶೀಲ್ ಕುಮಾರಿ ಅವರ ಶ್ರೀ ಲಲಿತಾ ಸಹಸ್ರನಾಮ ಚಿತ್ರಾವಳಿ (ಸಂಪುಟ 1, 2, 3 ಮತ್ತು 4 – ದೇವಿ ಲಲಿತೆಯ 1000 ಹೆಸರುಗಳ ಚಿತ್ರಾತ್ಮಕ ಚಿತ್ರಣ–Volume 1, 2, 3 and 4 - A Pictorial depiction of 1000 names of Devi Lalita).

ಚೀಫ್ ಜಸ್ಟೀಸ್ ಹೊಂಬೇಗೌಡ ಸ್ಮಾರಕ ಮೈಸೂರು ವಿವಿ ಅಂತರ ಕಾಲೇಜುಗಳ ಫುಟ್‌ಬಾಲ್ ಪಂದ್ಯಾವಳಿಯಲ್ಲಿ ಪಿಜಿಎಸ್‌ಸಿ ಮಾನಸಗಂಗೋತ್ರಿ ಚಾಂಪಿಯನ್



ಮೈಸೂರು,ಜೂ.28(ಎಂಕೆ)–ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗ ಹಾಗೂ ಫಿಸಿಕಲ್ ಎಜುಕೇಷನ್ ಟೀಚರ್ಸ್ ಅಕಾಡೆಮಿ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಚೀಫ್ ಜಸ್ಟೀಸ್ ಹೊಂಬೇಗೌಡ ಸ್ಮಾರಕ ಮೈಸೂರು ವಿವಿ ಅಂತರ ಕಾಲೇಜುಗಳ ಫುಟ್‌ಬಾಲ್ ಪಂದ್ಯಾವಳಿಯಲ್ಲಿ ಪಿಜಿಎಸ್‌ಸಿ ಮಾನಸ ಗಂಗೋತ್ರಿ ಚಾಂಪಿಯನ್ ಆಯಿತು.

ಮೈಸೂರು ಫುಟ್‌ಬಾಲ್ ಮೈದಾನದಲ್ಲಿ ಕಳೆದ 6 ದಿನಗಳಿಂದ ಪಂದ್ಯಾವಳಿಯಲ್ಲಿ ಅತ್ಯಧಿಕ ಅಂಕಗಳನ್ನು ಗಳಿಸಿ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆಯುವ ಮೂಲಕ ಪಿಜಿಎಸ್‌ಸಿ ಮಾನಸಗಂಗೋತ್ರಿ ಪ್ರಥಮ ಸ್ಥಾನ ಪಡೆಯಿತು. ಲೀಗ್‌ನ ಕೊನೆ ಪಂದ್ಯದಲ್ಲಿ ಎಸ್‌ಬಿಆರ್‌ಆರ್ ಮಹಾಜನಸ್ ಕಾಲೇಜು ವಿರುದ್ಧ 0–5 ಗೋಲುಗಳ ಅಂತರದಲ್ಲಿ ಭರ್ಜರಿ ಜಯಗಳಿಸಿ ಚಾಂಪಿಯನ್ ಆಯಿತು.

ನಂತರ ದ್ವಿತೀಯ ಸ್ಥಾನಕ್ಕೆ ಸೆಂಟ್ ಫಿಲೋಮಿನಾ ಮೈಸೂರು ಹಾಗೂ ಪಿಇಎಸ್ ಕಾಲೇಜು ಮಂಡ್ಯ ವಿರುದ್ಧ ನಡೆದ ಪಂದ್ಯದಲ್ಲಿ ಸೆಂಟ್ ಫಿಲೋಮಿನಾ ಮೈಸೂರು ತಂಡ 2–0 ಗೋಲ್‌ಗಳಿಂದ ಜಯಗಳಿಸಿ, ದ್ವಿತೀಯ ಸ್ಥಾನ ಪಡೆಯಿತು. ಗೆಲುವಿಗಾಗಿ ತೀವ್ರ ಪೈಪೋಟಿ ನಡೆಸಿದ ಪಿಇಎಸ್ ಕಾಲೇಜು ಮಂಡ್ಯ ತಂಡ ತೃತೀಯ ಸ್ಥಾನ ಪಡೆಯಿತು.

ಬಳಿಕ ನಡೆದ ಫುಟ್‌ಬಾಲ್ ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ವಿಜೇತ ತಂಡಕ್ಕೆ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಎ.ಜೆ.ರಾಮಸ್ವಾಮಿ ಹಾಗೂ ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ವಿಶ್ರಾಂತ ನಿರ್ದೇಶಕ ಡಾ.ಸಿ.ಕೃಷ್ಣ ಬಹುಮಾನ ವಿತರಿಸಿ, ಅಭಿನಂದಿಸಿದರು. ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ಡಾ.ಸಿ.ವೆಂಕಟೇಶ್, ಜಿಲ್ಲಾ ಫುಟ್‌ಬಾಲ್ ಅಸೋಸಿಯೇಷನ್ ಕಾರ್ಯದರ್ಶಿ ಎಲ್.ಮಂಜುನಾಥ್, ಕಾರ್ಯದರ್ಶಿ ಡಾ.ಬಿ.ಸದಾಶಿವ, ಸಂಚಾಲಕ ಡಾ.ಕೃಷ್ಣ ಕುಮಾರ್, ಯೋಗ ತರಬೇತುದಾರ ರವಿ ಮತ್ತಿತರರಿದ್ದರು.

ಇಂದು '17ನೇ ಸಾಂಖ್ಯಿಕ ದಿನಾಚರಣೆ'

ಮೈಸೂರು, ಜೂ. 28–ಪ್ರೊ.ಪಿ.ಸಿ. ಮಹಾಲನೋಬೀಸ್ ಸಾಂಖ್ಯಿಕ ತಜ್ಞರ ಜನ್ಮದಿನದ ಅಂಗವಾಗಿ 17ನೇ ಸಾಂಖ್ಯಿಕ ದಿನಾಚರಣೆಯನ್ನು ಜಿಲ್ಲಾ ಮಟ್ಟದಲ್ಲಿ ಸರಳವಾಗಿ ಜೂ.29ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ ಆಚರಿಸಲಾಗುವುದು ಎಂದು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂಜು ಅಡ್ಡೆ ಮೇಲೆ ದಾಳಿ; 30 ಮಂದಿ ಬಂಧನ

ಮೈಸೂರು,ಜೂ.28–ಜೂಜು ಅಡ್ಡೆಗಳ ಮೇಲಿನ ದಾಳಿ ಮುಂದುವರೆಸಿರುವ ಸಿಸಿಬಿ ಪೊಲೀಸರು, ಮೈಸೂರಿನ ತಿ.ನರಸೀಪುರ ರಸ್ತೆಯಲ್ಲಿರುವ ಗಿರಿದರ್ಶಿನಿ ಬಡಾವಣೆಯ ಕಾರಂಜಿ ಕ್ಲಬ್ ಮೇಲೆ ದಾಳಿ ನಡೆಸಿ, ಜೂಜಾಟದಲ್ಲಿ ತೊಡಗಿದ್ದ 30 ಮಂದಿಯನ್ನು ಬಂಧಿಸಿ ಪಣಕ್ಕಿಟ್ಟಿದ್ದ 64,050 ರೂ. ವಶಪಡಿಸಿಕೊಂಡಿದ್ದಾರೆ. ಕ್ಲಬ್‌ನಲ್ಲಿ ಧೂಮಪಾನ ಮಾಡುತ್ತಿದ್ದ ಆರೋಪದ ಮೇರೆಗೆ 43 ಲಘು ಪ್ರಕರಣಗಳನ್ನು ದಾಖಲಿಸಿ, ಸ್ಥಳದಲ್ಲೇ 8,600 ರೂ. ದಂಡ ವಸೂಲಿ ಮಾಡಿದ್ದಾರೆ. ಈ ಸಂಬಂಧ ಆಲನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಜಾನ್ಹವಿ, ಸಿಸಿಬಿ ಎಸಿಪಿ ಎಸ್.ಎನ್.ಸಂದೇಶ್‌ಕುಮಾರ್ ಮಾರ್ಗದರ್ಶನದಲ್ಲಿ ಸಿಸಿಬಿ ಇನ್ಸ್‌ಪೆಕ್ಟರ್ ಮಲ್ಲೇಶ್, ಸಬ್ ಇನ್ಸ್‌ಪೆಕ್ಟರ್‌ಗಳಾದ ಪ್ರತಿಭಾ ಜಂಗವಾಡ, ರಾಜು ಕೋನಕೇರಿ, ಎಎಸ್‌ಐ ರಾಜು, ಸಿಬ್ಬಂದಿಗಳಾದ ಪುರುಷೋತ್ತಮ್, ಮಂಜುನಾಥ್, ಕೆ.ಪುಟ್ಟಮ್ಮ, ಅರುಣ್‌ಕುಮಾರ್, ರಘು ಅವರನ್ನೊಳಗೊಂಡ ತಂಡ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿತ್ತು.

ಸರಸ್ವತಿಪುರಂ ಶ್ರೀರಾಮ ಉದ್ಯಾನವನದ ಅಭಿವೃದ್ಧಿ ಕಾಮಗಾರಿ ತ್ವರಿತಕ್ಕೆ ಸೂಚನೆ

ನಗರಪಾಲಿಕೆ ಸದಸ್ಯೆ ವೇದಾವತಿ ಪರಿಶೀಲನೆ



ಮೈಸೂರು,ಜೂ.28(ಸಿಎನ್)–ಮೈಸೂರಿನ ಸರಸ್ವತಿಪುರಂನಲ್ಲಿರುವ 'ಶ್ರೀರಾಮ ಉದ್ಯಾನ ವನ'ಕ್ಕೆ ಬುಧವಾರ ಭೇಟಿ ನೀಡಿದ ಪಾಲಿಕೆ ಸದಸ್ಯೆ ಸಿ.ವೇದಾವತಿ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲನೆ ನಡೆಸಿದರಲ್ಲದೆ ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರು ಹಾಗೂ ಪಾಲಿಕೆ ಇಂಜಿನಿಯರ್‌ಗೆ ಸೂಚನೆ ನೀಡಿದರು.

ಜೂ.25ರ 'ಮೈಸೂರು ಮಿತ್ರ'ನಲ್ಲಿ **'5 ವರ್ಷವಾದರೂ ಕಾಮಗಾರಿ ಅಪೂರ್ಣ, ಈ ಉದ್ಯಾನವನ್ನು ದೇವರೆ ಕಾಪಾಡಬೇಕು'** ಶೀರ್ಷಿಕೆಯಡಿ 'ಶ್ರೀರಾಮ ಉದ್ಯಾನವನ'ದ ಕುರಿತು ಸುದ್ದಿ ಪ್ರಕಟವಾದ ಹಿನ್ನೆಲೆ ಎಚ್ಚೆತ್ತುಕೊಂಡ ಪಾಲಿಕೆ ಸದಸ್ಯೆ, ಅಲ್ಲಿನ ಸ್ಥಿತಿಗತಿಗಳನ್ನು ಗಮನಿಸಿ ಶೀಘ್ರ ಕಾಮಗಾರಿಗೆ ಸೂಚನೆ ನೀಡಿದ್ದಾರೆ. ಪಾರ್ಕ್‌ನಲ್ಲಿ ಸುಮಾರು 42 ಲಕ್ಷ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದ್ದು, ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ತಾಕೀತು ಮಾಡಿದರಲ್ಲದೆ, ಇನ್ನೂ ಆಗಬೇಕಾಗಿರುವ ಕಾಮಗಾರಿಗಳ ಅಂದಾಜು ವೆಚ್ಚದ ಪ್ರಸ್ತಾವನೆ ಸಿದ್ಧಪಡಿಸುವಂತೆ ಪಾಲಿಕೆ ಇಂಜಿನಿಯರ್‌ಗೆ ತಿಳಿಸಿದರು.

ಮಿತ್ರನ ಫಲಶ್ರುತಿ

ಬಳಿಕ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ಹನಿ ನೀರಾವರಿ(ಸ್ಪ್ರಿಂಕ್ಲರ್) ಕಾರ್ಯದಿಂದಾಗಿ ಉದ್ಯಾನದ ಕಾಮಗಾರಿ ಅಪೂರ್ಣವಾಗಿತ್ತು. ಇದೀಗ ಕಾಮಗಾರಿ ಆರಂಭಿಸಿದ್ದೇವೆ. ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಲು ಸೂಚಿಸಿದ್ದೇನೆ. ಇನ್ನು 1 ತಿಂಗಳೊಳಗೆ ಹುಲ್ಲು ಹಾಸು (ಲಾನ್) ಕಾಮಗಾರಿ ಮುಗಿಯಲಿದೆ ಬಳಿಕ ಪಾಲಿಕೆ ನಿರ್ವಹಣೆಗೆ ಪ್ರತ್ಯೇಕ ಸಿಬ್ಬಂದಿ ನಿಯೋಜಿಸಲಾಗುವುದು ಎಂದರು. ಈಗಾಗಲೇ ಉದ್ಯಾನದ ಕಾವಲುಗಾರರನ್ನು ನೇಮಿಸಿದ್ದೇವೆ. ಅವರು ಬೆಳಗ್ಗೆ–ಸಂಜೆ ಗಸ್ತು ತಿರುಗಿ ಉದ್ಯಾನದ ಒಳ–ಹೊರ ಹೋಗುವವರ ಮೇಲೆ ನಿಗಾ ವಹಿಸಲಿದ್ದಾರೆ. ರಾತ್ರಿ ವೇಳೆ ಗಸ್ತು ಹೆಚ್ಚಿಸುವಂತೆ ಹೇಳಿದ್ದೇನೆ. ಸಮಸ್ಯೆಯಾಗದ ರೀತಿ ನೋಡಿಕೊಳ್ಳಲಾಗುತ್ತದೆ ಎಂದರು. ಗುತ್ತಿಗೆದಾರ ಕೃಷ್ಣರಾಜು ಮಾತನಾಡಿ, 42 ಲಕ್ಷ ರೂ. ವೆಚ್ಚದಲ್ಲಿ ಇಂಟರ್‌ಲಾಕ್, ಗಜೀಬು (ಮಂಟಪ), ಉದ್ಯಾನದ ಕಾಮಗಾರಿ ಆಗಿದೆ. ಇನ್ನೂ ಹುಲ್ಲು ಹಾಸು ಕಾಮಗಾರಿ ಬಾಕಿ ಉಳಿದಿದ್ದು, ಪ್ರಗತಿಯಲ್ಲಿದೆ. ಶೀಘ್ರದಲ್ಲಿಯೇ ಮುಗಿಯಲಿದೆ ಎಂದು ಮಾಹಿತಿ ನೀಡಿದರು.

ಅಧಿಕಾರಿಗಳ ಸ್ಪಂದನೆ ಇಲ್ಲ...

"ಪಾರ್ಕ್ ಒಳಗಿರುವ ಶೌಚಾಲಯ ನಿರ್ವಹಣೆಗೆ ಸಂಬಂಧಿಸಿದಂತೆ ಪಾಲಿಕೆ ಅಧಿಕಾರಿಗಳಿಗೆ ಸಾಕಷ್ಟು ಬಾರಿ ಸೂಚನೆ ನೀಡಿದ್ದೇನೆ. ಆದರೆ ಅವರು ಸ್ಪಂದಿಸುತ್ತಿಲ್ಲ. ಹೊರ ಗುತ್ತಿಗೆಗೆ ನೀಡಿ ಶೌಚಾಲಯ ನಿರ್ವಹಣೆ ಮಾಡಲು ನಿರ್ಧರಿಸಲಾಗಿದೆ. ಪದೇ ಪದೆ ಅಧಿಕಾರಿಗಳ ವರ್ಗಾವಣೆ ಮಾಡಲಾಗುತ್ತಿದ್ದು, ಹಾಗಾಗಿ ಕಾಮಗಾರಿಗೆ ಅಡಚಣೆಯಾಗಿದೆ. ಪಾರ್ಕ್‌ನಲ್ಲಿ ಜಿಮ್ ನಿರ್ಮಾಣಕ್ಕಾಗಿ ಸಾಕಷ್ಟು ಬಾರಿ ಮನವಿ ಮಾಡಿದ್ದು, ಅನುದಾನ ಬಿಡುಗಡೆಗೆ ಮೇಯರ್ ಒಪ್ಪಿಗೆ ಸೂಚಿಸಿದ್ದಾರೆ.

–ವೇದಾವತಿ, ಕಾರ್ಪೊರೇಟರ್ ಸರಸ್ವತಿಪುರಂ, ವಾರ್ಡ್ ನಂ.21

11ನೇ ವರ್ಷದ ಸವಿನೆನಪು



ನೀವು ನಮ್ಮನ್ನು ಅಗಲಿ 11 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ.
ದುಃಖತಪ್ತರು
ಪತ್ನಿ ಚಂದ್ರಕಲಾ, ಮಗ ಆನಂದ. ಎಸ್, ಸೊಸೆ ಜ್ಯೋತಿ, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು, ಚೋರನಹಳ್ಳಿ ಗ್ರಾಮಸ್ಥರು, ಮೈಸೂರು

ಶ್ರೀ ಸಿದ್ದೇಗೌಡ (ಅಣ್ಣಾಜಿ)
ನಿಧನ:-29.06.2012

ಮೊದಲನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ಸದಾ ನೀವು ನಮ್ಮ ಮನಸ್ಸಿನಲ್ಲಿ ಹಸಿರಾಗಿರುತ್ತೀರಿ
ದುಃಖತಪ್ತರು :
ಪತಿ.ಎಂ.ಎಲ್.ರಾಜು
ಮಗಳು ಮಾನಸ ಹಾಗೂ ಬಂಧುಮಿತ್ರರು.

ಯಶೋಧ ರಾಜು

10ನೇ ವರ್ಷದ ಸವಿನೆನಪು



ವಿಜಯಕುಮಾರಿ

ನನ್ನ ಬಾಳಿನ ಜ್ಯೋತಿ ನೀನು, ನಿನ್ನ ನೆನಪಲ್ಲೇ ಇರುವ ಪತಿ ಮಹಾದೇವಸ್ವಾಮಿ (ARSI), ಮಕ್ಕಳಾದ ದರ್ಶನ್, ಶಶಾಂಕ್, ಸೊಸೆ ಮಧುಶ್ರೀ ಮತ್ತು ಮೊಮ್ಮಕ್ಕಳು